- ಅಕ್ರಮ ಮರಳುಗಾರಿಕೆ ತಡೆಯುವ ಜವಾಬ್ದಾರಿ ಹೊಂದಿರುವ ಸಂಬಂಧಪಟ್ಟ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯನಿರ್ವಹಣಾಧಿಕಾರಿಯವರುಗಳು ಮರಳುಗಾರಿಕೆ ನಡೆಯುವ ಪ್ರದೇಶಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅಕ್ರಮ ನಡೆಯದಂತೆ ಎಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿಯವರು ಸೂಚಿಸಿದರು. ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತಂಡಗಳನ್ನು ರಚಿಸುವಂತೆ ಹಾಗೂ ತಂಡದಲ್ಲಿ ಪೊಲೀಸ್ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

- ಹೆಜಮಾಡಿ ಮೀನುಗಾರಿಕಾ ಬಂದರು, ತಾಲೂಕು ಕಛೇರಿ ಸಂಕೀರ್ಣ, ಮಿನಿ ವಿಧಾನ ಸೌಧ, ಹಾಗೂ ಬೀಚ್ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರವು ಮಂಜೂರಾತಿ ನೀಡಿದ್ದು ಈ ಕಾಮಗಾರಿಗಳ ಪ್ರಾರಂಭಕ್ಕೆ ಪೂರ್ವಭಾವಿಯಾಗಿ ಸರ್ಕಾರದ ಸೂಚನೆಯಂತೆ ಸ್ಥಳ ಸಮೀಕ್ಷೆ ಮತ್ತು ಯೋಜನಾ ಗಾತ್ರವನ್ನು ಪುನರ್ ಪರಿಶೀಲಿಸುವ ಬಗ್ಗೆ ಸದ್ರಿ ಸ್ಥಳಗಳಿಗೆ ಉಸ್ತುವಾರಿ ಕಾರ್ಯದರ್ಶಿಯವರು ಭೇಟಿ ಮಾಡಿ ಸ್ಥಳ ಪರಿಶೀಲನೆ ನಡೆಸಿದರು.

.ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**Report-3 on 09-06-2020**

**Review of COVID-19 prevention and mitigation measures taken in Uttara Kannada district**

The District has reported total 96 positive COVID-19 cases so far; among which 53 are source, and 43 primary contacts. Of 96 positive cases, 83 are asymptomatic cases. The total primary and secondary contacts traced are 1352 and 1265 respectively. Except Ankola taluk, all other taluks have reported positive cases. The summary of the positive cases is given below:

| Sl No | Taluk | Total Covid +ve | Discharged | Active |
|---|---|---|---|---|
| 1 | Bhatkal | 43 | 43 | 1 |
| 2 | Kumta | 5 | 1 | 4 |
| 3 | Karwar | 5 | 1 | 4 |
| 4 | Sirsi | 7 | 5 | 2 |
| 5 | Siddapur | 5 | 1 | 4 |
| 6 | Mundgod | 2 | 2 | 0 |
| 7 | Yellapur | 15 | 8 | 7 |
| 8 | Joida | 1 | 1 | 0 |
| 9 | Dandeli | 2 | 2 | 0 |
| 10 | Honnavar | 9 | 9 | 0 |
| 11 | Ankola | 0 | 0 | 0 |
| 12 | Haliyal | 3 | 2 | 1 |
| | **TOTAL** | **96** | 73 | 23 |

Status of Surveillance activities in the district:

So far, 11 surveys have been done in the district. 1st survey was conducted on 26th March 2020 in Bhatkal alone. 80 teams were deployed with each team consisting of 3 members (ANM, Asha worker, and Anganwadi worker). The teams checked fever and other symptoms like dry cough, sore throat, nasal congestion, and difficulty in breathing. Along with these, their travel history, and the contacts with the person who had travel history was also enquired. The survey found 417 mild fever cases but without all the symptoms mentioned above. 2nd survey was conducted on 30th and 31st March 2020 for the whole district. The details of the 9 consecutive surveys done are given below:

| Sl No | Date (From and To) | Fever cases | Other ILI w/o fever | ILI |
|---|---|---|---|---|
| 1 | 01-04-2020 to 06-04-2020 | 829 | - | - |
| 2 | 10-04-2020 to 13-04-2020 | 1059 | 1816 | 357 |
| 3 | 21-04-2020 to 22-04-2020 | 230 | 356 | 28 |
| 4 | 23-04-2020 to 25-04-2020 | 251 | 263 | 24 |
| 5 | 26-04-2020 to 03-05-2020 | 463 | 296 | 87 |
| 6 | 06-05-2020 to 10-05-2020 | 0 | 5 | 1 |
| 7 | 11-05-2020 to 15-05-2020 | 0 | 1 | 0 |

| | | | | |
|---|---|---|---|---|
| 8 | 16-05-2020 to 20-05-2020 | 0 | 0 | 0 |
| 9 | 21-05-2020 to 25-05-2020 | 1 | 0 | 0 |

As per the directions from the government, the swab collection and testing process for 177 cases are underway. The district has collected 6049 samples in total of which 94 are tested positive, 5778 have tested negative.

As per the information collected through surveys done between 01-06-2020 and 05-06-2020, 17 people had arrived from foreign nations, 675 arrived from different state, and 2673 from different district making a total of 3365 people. Among these, 71 people have fever, 34 have ILI symptoms. 38 samples are collected and 1371 people are home quarantined.

Status of Supplies:

In the district the following medical equipments are available

a. 15606 PPE kits of which 3670 are distributed to the field agencies
b. 20553 N-95 masks of which 4203 are distributed to the field agencies
c. 1370 Hydroxychloroquine (100mg) tablets of which 250 are distributed to be taken by the personnel's working in the field area. Additional 60,000 are indented out of which 34652 are received
d. 95,152 Triple layer masks are distributed to the field agencies
e. 22092 pairs of gloves are distributed to the field agencies
f. 6160 liters of Hand Sanitizer is distributed to the field agencies
g. 617 thermal scanners are being used in various health centers
h. 29 ventilators are available and 15 more are indented

The district has adequate amount of medical supplies

Containment Zones

The containment zones for all the positive cases are notified. As per the new guidelines, the containment zone is an area around the resident of positive person 200m for house/villa, entire building in case of apartment, and entire habitation in case of rural area. The buffer zone for urban area is 200m around containment zone and village boundary for rural area. The total numbers of containment zones notified in the district are 22. The entry and exit in containment zones are strictly restricted except for medical emergencies. District level helpline and taluk level help lines are activated along with disaster helpline toll free number 1077.

Migrant laborers and Inter-state travel

The total numbers of migrant labour sent to different states from Uttara Kannada district are 4405. Of which 4168 people travelled via bus and 237 travelled via train. State wise data is given below:

| Sl No | Destination State | By Train | By Bus | Total |
|---|---|---|---|---|
| 1 | Bihar | 968 | - | 968 |
| 2 | Chhattisgarh | - | 16 | 16 |

| | | | | |
|---|---|---|---|---|
| 3 | Gujarat | 15 | - | 15 |
| 4 | Himachal Pradesh | 16 | - | 16 |
| 5 | Jharkhand | 627 | - | 627 |
| 6 | Madhya Pradesh | 151 | - | 151 |
| 7 | Odhisa | 107 | 71 | 178 |
| 8 | Rajasthan | 257 | 30 | 287 |
| 9 | Uttar Pradesh | 1041 | - | 1041 |
| 10 | West Bengal | 986 | 120 | 1106 |
| **Total** | | **4168** | **237** | **4405** |

Details of people arriving from different states of India to Uttara Kannada district

| Sl No | Taluk | AP | Bihar | Delhi | Goa | Gujarat | Haryana | Jharkhand | Kerala |
|---|---|---|---|---|---|---|---|---|---|
| 1 | Karwar | 8 | 4 | 0 | 461 | 17 | | 6 | 2 |
| 2 | Ankola | 4 | | 2 | 207 | 5 | | | 7 |
| 3 | Kumta | 0 | | 0 | 79 | 3 | | | 0 |
| 4 | Honnavar | 1 | | 2 | 198 | 4 | | | 0 |
| 5 | Bhatkal | 0 | | 0 | 23 | 6 | | | 3 |
| 6 | Sirsi | 2 | 0 | 0 | 72 | 8 | 0 | 0 | 1 |
| 7 | Siddapur | 0 | 0 | 1 | 0 | 3 | 0 | 0 | 3 |
| 8 | Yellapur | 7 | 0 | 0 | 187 | 2 | 0 | 0 | 0 |
| 9 | Mundgod | 1 | 0 | 0 | 0 | 1 | 0 | 0 | 5 |
| 10 | Haliyal | 12 | | 2 | 4 | 7 | 1 | | 0 |
| 11 | Joida | 0 | | 1 | 91 | 5 | | | 1 |
| 12 | Dandeli | 10 | 44 | 0 | 34 | 1 | 0 | 10 | 0 |
| **TOTAL** | | **45** | **48** | **8** | **1356** | **62** | **1** | **16** | **22** |

| Sl No | Taluk | MP | Maharashtra | Odhisa | Punjab | Rajasthan | TN | Telangana | UP | West Bengal | JK | Total |
|---|---|---|---|---|---|---|---|---|---|---|---|---|
| 1 | Karwar | | 254 | | 1 | 1 | 8 | 5 | 1 | 1 | | 769 |
| 2 | Ankola | | 150 | | | 0 | 1 | 0 | 0 | 1 | | 377 |
| 3 | Kumta | | 63 | | | 29 | 5 | 0 | 0 | | | 179 |
| 4 | Honnavar | | 127 | | | 0 | 6 | 1 | 0 | | | 339 |
| 5 | Bhatkal | | 84 | | | 0 | 0 | 0 | 0 | | | 116 |
| 6 | Sirsi | 0 | 152 | 0 | 0 | 2 | 0 | 41 | 0 | 0 | 0 | 278 |

| | | | | | | | | | | | | |
|---|---|---|---|---|---|---|---|---|---|---|---|---|
| 7 | Siddapur | 0 | 134 | 0 | 0 | 0 | 0 | 13 | 1 | 0 | 0 | **155** |
| 8 | Yellapur | 0 | 53 | 0 | 0 | 0 | 0 | 10 | 0 | 0 | 0 | **259** |
| 9 | Mundgod | 0 | 64 | 1 | 0 | 2 | 3 | 2 | 0 | 0 | 0 | **79** |
| 10 | Haliyal | | 488 | | | 5 | 6 | 1 | 0 | | 1 | **527** |
| 11 | Joida | | 84 | | | 0 | 5 | 6 | 0 | | | **193** |
| 12 | Dandeli | 7 | 52 | 1 | 0 | 28 | 2 | 0 | 49 | 75 | 0 | **313** |
| **TOTAL** | | **7** | **1705** | **2** | **1** | **67** | **36** | **79** | **51** | **77** | **1** | **3584** |

Covid Care Centers:

The district has identified beds for isolation in taluk hospitals. The total beds identified for isolation are 528 of which 252 are for suspected cases and 276 are for positive cases. 12 beds are occupied by the suspected cases and 21 beds are occupied by the positive patients. 59 ICU beds are identified in the district of which none are occupied. 20 ventilators are reserved exclusively for COVID purpose and 44 beds with centralized oxygen supply are identified. The taluk wise report is given below:

| Sl. No | Name of the DCHC | Total Number of Beds in the facility | Isolation beds for suspected cases | Isolation beds for Positive cases | Total Number of ICU Beds in the facility | Total Number of Ventilators in the facility | Ventilator Reserved for COVID 19 | Central Oxygen Beds Reserved for COVID-19 | No of Cylinders Available |
|---|---|---|---|---|---|---|---|---|---|
| 1 | TH Ankola | 100 | 13 | 13 | 3 | 0 | 0 | 0 | 25 |
| 2 | TH Bhatkal | 100 | 15 | 5 | 3 | 2 | 2 | 0 | 21 |
| 3 | TH Haliyal | 100 | 50 | 0 | 3 | 1 | 1 | 0 | 23 |
| 4 | GH Dandeli | 110 | 10 | 2 | 0 | 1 | 1 | 0 | 19 |
| 5 | TH Honnavar | 100 | 15 | 0 | 3 | 1 | 0 | 0 | 20 |
| 6 | TH Kumta | 100 | 30 | 5 | 3 | 2 | 0 | 0 | 25 |
| 7 | TH Mundgod | 100 | 15 | 6 | 3 | 2 | 2 | 0 | 14 |
| 8 | CHC Pala | 30 | 4 | 0 | 0 | 0 | 0 | 0 | 2 |
| 9 | TH Siddapur | 100 | 20 | 20 | 3 | 0 | 0 | 0 | 9 |
| 10 | TH Sirsi | 100 | 18 | 22 | 0 | 2 | 2 | 6 | 20 |
| 11 | TH Joida | 100 | 10 | 3 | 3 | 1 | 1 | 3 | 11 |
| 12 | TH Yellapur | 100 | 17 | 0 | 0 | 1 | 1 | 0 | 8 |
| 13 | Karwar DH | 235 | 35 | 200 | 35 | 10 | 10 | 35 | 55 |
| | TOTAL | 1375 | 252 | 276 | 59 | 23 | 20 | 44 | 252 |

Health Watch App:

The district has completed 95% of survey through Health Watch App. The app was downloaded by 1440 BLOs and survey was done accordingly. In this survey, a total of 400770 households were covered. The risk households identified are 168830 of which 173 people were identified with ILI / SARI / COVID symptoms.

Quarantine Watch App:

The Quarantine Watch app is downloaded by the individuals who are under home quarantine. As on 08-06-2020 (11:00AM), 1101 photos are to be taken of which 88 photos are taken by the individuals themselves and 294 photos are taken by the staffs.

The district administration has taken steps to open the Covid-19 testing lab in Karwar, and also to appoint persons to that lab. The Kavalu Samithi is formed in every village to watch and report any new persons coming in to their jurisdiction and to oversee the home quarantine activities in their jurisdiction, and also for other vigilance and awareness activities related to Covid-19.

On 08-06-2020 as per state government order the temples throughout Karnataka where reopened after the lockdown. Hence to have the first hand knowledge of the situation, I visited Gokarna Temple on 08-06-2020 (while on the way back to Bangalore). Initially for a few days temple authorities have planned to allow only the local public that to for a limited time. They have made arrangements for social distancing and providing sanitizers for the public coming to temple. Since the devotees are provided sanitizer while entering the temple, I have instructed the temple authorities to do away with providing theertha and also to avoid in contact with mangala arathi. I also advised the temple authority to do every day meeting with the staff and workers to review the sanitization social distancing, and other Covid-19 related issues.

KPM

**(K P Mohan Raj IAS)**
Commissioner,
Inspector General of Registration and
Commissioner of Stamps,
&
District Incharge Secretary,
Uttara Kannada district, Karwar

09-06-20



# ಎರಡೂವರೆ ತಿಂಗಳ ನಂತರ ದೇವರ ದರ್ಶನ: ಅಂತರ ಕಾಯ್ದುಕೊಂಡು, ಮಾಸ್ಕ್ ಧರಿಸಿ ಸಾಲಲ್ಲಿ ನಿಂತ ಭಕ್ತರು

**ಗೋಕರ್ಣ:** ಕಳೆದ ಎರಡೂವರೆ ತಿಂಗಳ ಬಳಿಕ ಪುರಾಣ ಪ್ರಸಿದ್ಧ ಮಹಾಬಲೇಶ್ವರ ದೇವಾಲಯದಲ್ಲಿ ದರ್ಶನ ಪ್ರಾರಂಭವಾಗಿದೆ. ಸೋಮವಾರ ಮುಂಜಾನೆ 6 ಗಂಟೆಯಿಂದ 9 ಘಂಟೆ ಸಂಜೆ 5 ರಿಂದ ಗಂಟೆಯವರೆಗೆ ದರ್ಶನಕ್ಕೆ ಸಮಯ ನಿಗದಿ ಮಾಡಲಾಗಿದೆ. ಮೊದಲ 15 ದಿನಗಳವರೆಗೆ ಸ್ಥಳೀಯ (ಊರಿನ) ಭಕ್ತರಿಗೆ ಮಾತ್ರ ಅವಕಾಶ ನೀಡಲಾಗಿದೆ.

ದೇವರ ದರ್ಶನಕ್ಕೆ ಸ್ಥಳೀಯ ಭಕ್ತರಿಗೆ ನಂದಿ ಮಂಟಪದವರೆಗೆ ಪ್ರವೇಶ ನೀಡಲಾಯಿತು. ಪ್ರವೇಶ ಬಾಗಿಲಾದ ಪಶ್ಚಿಮ ದ್ವಾರದಲ್ಲಿ ಪ್ರತಿ ಭಕ್ತರಿಗೂ ಥರ್ಮಲ್ ಸ್ಕ್ರೀನಿಂಗ್ ಮೂಲಕ ಉಷ್ಣಾಂಶ ಪರೀಕ್ಷೆ ಮತ್ತು ಕೈಗೆ ಸ್ಯಾನಿಟೈಸರ್ ಹಾಕಿ ಒಳ ಬಿಡಲಾಯಿತು. ದರ್ಶನದ ಸಾಲಿನಲ್ಲಿ ಸಾಮಾಜಿಕ ಅಂತರದ ಗುರುತು ಹಾಕಿ ಪ್ರವೇಶಾತಿ ನೀಡಲಾಯಿತು. ಮಾಸ್ಕ್ ಧರಿಸುವುದು ಕಡ್ಡಾಯವಾಗಲಾಗಿದ್ದು, ಪರಿಚಯವಿಲ್ಲದವರ ಗುರುತಿಗಾಗಿ ಅಗತ್ಯ ಇದ್ದರೆ ಆಧಾರಕಾರ್ಡ ಸಹ ಪಡೆಯಲಾಗುತ್ತಿದೆ.



"ಸರ್ಕಾರ ಮಹಾಮಾರಿ ಕೊರೊನಾ ನಿಯಂತ್ರಣಕ್ಕೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದು, ಇಂತಹ ಕ್ರಮಗಳು ಧಾರ್ಮಿಕ ಸ್ಥಳಗಳಲ್ಲಿ ಅನುಷ್ಠಾನಗೊಂಡು ಭಕ್ತರ ಮೂಲಕ ಸುರಕ್ಷತಾ ಅನುಸರಿಸಿ ಸಮಾಜಕ್ಕೆ ಮಾದರಿಯಾಗಲಿ. ಈ ಮೂಲಕ ಜನರಿಗೆ ಒಂದು ಉತ್ತಮ ಸಂದೇಶ ತಲುಪ ಬೇಕು. ಆದಷ್ಟು ಬೇಗ ಮಹಾಮಾರಿ ಜಗತ್ತಿನಿಂದ ತೊಲಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ."

– ಕೆ. ಪಿ. ಮೋಹನರಾಜ, ಉಸ್ತುವಾರಿ ಕಾರ್ಯದರ್ಶಿ, ಕರ್ನಾಟಕ ಸರ್ಕಾರ (ಉತ್ತರ ಕನ್ನಡ ಜಿಲ್ಲೆ)

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಭೇಟಿ:** ರಾಜ್ಯ ಸರ್ಕಾರದ ಪ್ರಿನ್ಸಿಪಲ್ ಸೆಕ್ರೆಟರಿಯೆಟ್ ಹಾಗೂ ಉತ್ತರ ಕನ್ನಡ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ ಕೆ.ಪಿ. ಮೋಹನ ದೇವಾಲಯಕ್ಕೆ ಭೇಟಿ ನೀಡಿ ಇಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. 15 ದಿನಗಳ ಅವಧಿಗೆ ಸ್ಥಳೀಯ ಭಕ್ತರಿಗೆ ಅವಕಾಶ ನೀಡಿದ ಆಡಳಿತ ಮಂಡಳಿ ಕ್ರಮವನ್ನು ಪ್ರಶಂಸಿಸಿದ ಅವರು ದೇವಾಲಯವು ಅನುಸರಿಸಿದ ಕ್ರಮದ ವಿವರ ಪಡೆದು ಮೆಚ್ಚುಗೆ ವ್ಯಕ್ತಪಡಿಸಿದರು. ಸ್ವತಃ ಅವರೇ ಥರ್ಮಲ್ ಸ್ಕ್ರೀನಿಂಗ ಪರೀಕ್ಷೆ, ಸ್ಯಾನಿಟೈಸರ ಬಳಸಿದರು. ದೇವಾಲಯದ ಆಡಳಿತಾಧಿಕಾರಿ ಜಿ.ಕೆ.ಹೆಗಡೆ, ತಹಶೀಲ್ದಾರ ಮೇಘರಾಜ ನಾಯ್ಕ, ಕಂದಾಯ ನಿರೀಕ್ಷಕ ಕೃಷ್ಣ ಗೌಡ, ದೇವಾಲಯದ ಸಿಬ್ಬಂದಿ ವರ್ಗ ಮತ್ತು ಪೊಲೀಸ ಸಿಬ್ಬಂದಿ ಉಪಸ್ಥಿತರಿದ್ದರು.

**ಶಿರಸಿ:** ಕಳೆದ ಎರಡೂವರೆ ತಿಂಗಳಿನಿಂದ ಭಕ್ತರಿಂದ ಅಂತರ ಕಾಯ್ದುಕೊಂಡಿದ್ದ ದಕ್ಷಿಣ ಭಾರತದ ಜಾಗೃತ ಶಕ್ತಿಪೀಠ ಶಿರಸಿ ಮಾರಿಕಾಂಬಾ ದೇವಾಲಯದಲ್ಲಿ ಸೋಮವಾರ ನೂರಾರು ಭಕ್ತರು ಸರತಿ ಸಾಲಲ್ಲಿ ನಿಂತು ಶಾರೀರಿಕ ಅಂತರ ಕಾಯ್ದುಕೊಂಡು ಮಾರಿಕಾಂಬೆಯ ದರ್ಶನ ಪಡೆದು ಪುನೀತರಾದರು.

ದೇವಾಲಯ ಆಡಳಿತ ಮಂಡಳಿ ಒಂದು ಮೀಟರ್ ಅಂತರ ಬಿಟ್ಟು ಹಾಕಿರುವ ಬಾಕ್ಸ್‌ನಲ್ಲಿ ನಿಂತು ಒಬ್ಬೊಬ್ಬರಾಗಿ ದೇವಿಯ ದರ್ಶನ ಪಡೆದರು. ದೇವಸ್ಥಾನದ ಸಿಬ್ಬಂದಿ ಪ್ರತಿಯೊಬ್ಬರಿಗೂ ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಿ ಒಳಗೆ ಪ್ರವೇಶ ನೀಡಿದರು. ಸ್ಕ್ರೀನಿಂಗ್ ಮುಗಿದ ನಂತರ ಕಡ್ಡಾಯವಾಗಿ ಸ್ಯಾನಿಟೈಸರ್ ಹಚ್ಚಿ ಭಕ್ತರನ್ನು ಒಳಗೆ ಬಿಡಲಾಯಿತು. ಕಳೆದ ಎರಡೂವರೆ ತಿಂಗಳ ನಂತರ ದೇವಾಲಯ ಆರಂಭವಾಗಿದ್ದರೂ ಕೊರೊನಾ ಭಯದಿಂದ ಜನ ಬರಲು ಹಿಂದೇಟು ಹಾಕುತ್ತಿರುವುದು ಸೋಮವಾರ ಮಾರಿಗುಡಿಯಲ್ಲಿ ಕಂಡ ಭಕ್ತರ ಸಂಖ್ಯೆಯಲ್ಲಿ ಕಂಡು ಬಂದಿದೆ.

ಕೇವಲ ದರ್ಶನಕ್ಕೆ ಮಾತ್ರ ಅವಕಾಶ ನೀಡಲಾಗಿತ್ತು, ಹಣ್ಣು, ಕಾಯಿ ಸೇವೆ, ತೀರ್ಥ ಪ್ರಸಾದ ವಿತರಣೆ ಇವ್ಯಾವುದು ಇರಲಿಲ್ಲ.



## ಹಣ್ಣು-ಕಾಯಿ-ಹೂವು ಕೇಳುವವರಿಲ್ಲ

ಕೊರೊನಾ ಪರಿಣಾಮದಿಂದಾಗಿ ಕಳೆದ ಎರಡೂವರೆ ತಿಂಗಳಿನಿಂದ ಹಣ್ಣು, ಕಾಯಿ, ಹೂವು ಖರೀದಿಸುವವರಿಲ್ಲದೇ ಜೀವನ ನಿರ್ವಹಣೆಗೆ ಪರದಾಡುತ್ತಿರುವ ಅಂಗಡಿಕಾರರ ಬದುಕು ಇನ್ನಷ್ಟು ದಿನ ದುಸ್ತರವಾಗಲಿದೆ. ಸೋಮವಾರದಿಂದ ದೇವಸ್ಥಾನ ಆರಂಭವಾದರು ಹಣ್ಣು, ಕಾಯಿ, ಊದಿ ಮತ್ತಿತರ ಸೇವೆಗೆ ಅವಕಾಶವಿಲ್ಲದ್ದರಿಂದ ಭಕ್ತರಿಂದಲೇ ಅಂಗಡಿ ನಡೆಸುತ್ತಿರುವವರ ಸ್ಥಿತಿ ಚಿಂತಾಜನಕವಾಗಿದೆ. ಸೋಮವಾರ ಅಂಗಡಿ ತೆರೆದರೂ ಸಹ ಯಾವೊಬ್ಬ ಭಕ್ತರು ಸಹ ಹಣ್ಣು, ಕಾಯಿ ಖರೀದಿಸಿಲ್ಲ. ಇನ್ನೆಷ್ಟು ದಿನ ಈ ಸಮಸ್ಯೆ ಎದುರಿಸಬೇಕೋ ಎಂದು ಅಂಗಡಿಕಾರರು ಅಲವತ್ತುಕೊಳ್ಳುತ್ತಿದ್ದರು.

**ಮಾರಿಕಾಂಬೆ ದರ್ಶನ ಪಡೆದ ಕಾಗೇರಿ:** ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸೋಮವಾರ ಬೆಳಗ್ಗೆ ಮಾರಿಕಾಂಬಾ ದೇವಾಲಯಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದು ದೇವಾಲಯ ಧರ್ಮದರ್ಶಿ ಮಂಡಳಿ ಕೈಗೊಂಡ ಸಿದ್ಧತೆಗಳನ್ನು ಪರಿಶೀಲಿಸಿದರು.

**ದಿನಾಂಕ: 24.06.2020 ರಂದು ಬೆಳಗ್ಗೆ 11.00 ಗಂಟೆಗೆ ಶ್ರೀ ಕಪಿಲ್ ಮೋಹನ್ ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಬೆಂಗಳೂರು ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕೋವಿಡ-19 ರ ನಿಯಂತ್ರಣ ಕುರಿತು ತೆಗದುಕೊಂಡ ಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

*****

ಮೊದಲಿಗೆ ಸಭೆಯಲ್ಲಿ ಉಪಸ್ಥಿತರಿದ್ದ ಸಭೆಯ ಅಧ್ಯಕ್ಷರನ್ನು, ಕಲಬುರಗಿ ಜಿಲ್ಲೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಸ್ವಾಗತವನ್ನು ಕೋರಿ ಸಭೆಯನ್ನು ಉದ್ದೇಶಿಸಿ ಮಾತನಾಡುವಂತೆ ಮಾನ್ಯ ಅಧ್ಯಕ್ಷರನ್ನು ವಿನಂತಿಸಲಾಯಿತು.

ಸದರಿ ಸಭೆಯನ್ನು ಮಾನ್ಯ ಸಭೆಯ ಅಧ್ಯಕ್ಷರು ಉದ್ದೇಶಿಸಿ ಮಾತನಾಡುತ್ತಾ ಕಲಬುರಗಿ ಜಿಲ್ಲೆಯಲ್ಲಿ ಕರೋನಾ ವೈರಸ್ (ಕೋವಿಡ್-19) ಕ್ಕೆ ಸಂಬಂಧಿಸಿದಂತೆ, ಸಮಗ್ರವಾದ ಮಾಹಿತಿಯನ್ನು ನೀಡುವಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು, ಮಾತನಾಡುತ್ತಾ, ಜಿಲ್ಲೆಯಲ್ಲಿ ಇದುವರೆಗೆ ಕರೋನಾ ವೈರಸ್ (ಕೋವಿಡ್-19) ಕ್ಕೆ ಸಂಬಂಧಿಸಿದಂತೆ, ಒಟ್ಟು 1232 ಜನರಿಗೆ ಕೋರೋನಾ ಸೊಂಕು ತಗಲಿರುತ್ತದೆ. ಸದರಿ ಸೊಂಕು ತಗುಲಿದ ವ್ಯಕ್ತಿಗಳಿಂದ ಪ್ರಥಮ ಸಂಪರ್ಕದಲ್ಲಿ ಒಟ್ಟು ಜಿಲ್ಲೆಯಲ್ಲಿ 4460 ಜನರು ಹಾಗೂ ದ್ವಿತಿಯ ಸಂಪರ್ಕದಲ್ಲಿ 6419 ಜನರನ್ನು ಕೊರೆಟಿನ್ ಕೇಂದ್ರಗಳಲ್ಲಿ ಇಡಲಾಗಿರುತ್ತದೆ. ವಿದೇಶದಿಂದ ಬಂದವರ ಸಂಖ್ಯೆ 502 ಇದ್ದು, ಸಧ್ಯದಲ್ಲಿ ಜಿಲ್ಲೆಯಲ್ಲಿ 1697 ಜನರನ್ನು ಹೊಂ ಕ್ವಾರೆಂಟ್ ಮಾಡಲಾಗಿರುತ್ತದೆ ಮತ್ತು ಇದುವರೆಗೆ ಒಟ್ಟು 6070 ಜನರನ್ನು 28 ದಿನದವರೆಗೆ ಹೋಂ ಕ್ವಾರೆಂಟನ್ ಮಾಡಲಾಗಿರುತ್ತದೆ. 1587 ಜನರು ಸ್ವಯಂ ಪ್ರೇರಿತವಾಗಿ ಕೋರೋನಾ ವೈರಸ್ ಟೆಸ್ಟಿಂಗ್ ಮಾಡಿಕೊಂಡಿರುತ್ತಾರೆ. ಅಲ್ಲದೇ ಜಿಲ್ಲೆಯಲ್ಲಿ ಇದುವರೆಗೆ ಕೋರೋನಾ ವೈರಸ್ (ಕೋವಿಡ್-19) ಸಂಬಂಧಿಸಿದಂತೆ, ಒಟ್ಟು 52566 ಜನರ ಗಟ್ಟಲ ಧ್ರುವದ ಮಾದರಿಯನ್ನು ತಪಾಸಣೆ ಮಾಡಲು ಲ್ಯಾಬ್‌ಗೆ ರವಾನಿಸಲಾಗಿರುತ್ತದೆ. ಅದರಲ್ಲಿ **883** ಜನರಿಗೆ ಕೋರೋನಾ ವೈರಸ್ ಸಕ್ರಿಯವಾಗಿದ್ದು, ಧೃಡಪಟ್ಟಿರುತ್ತದೆ ಹಾಗೂ 36805 ಜನರಿಗೆ **Negative** ವರದಿ ಬಂದಿರುತ್ತದೆ. ಇದುವರೆಗೆ 779 ಜನರಿಗೆ ಕೋರೋನ ವೈರಸ್‌ದಿಂದ ಗುಣಮುಖರಾಗಿರುತ್ತಾರೆ ಹಾಗೂ 11 ಪ್ರಕರಣಗಳಲ್ಲಿ ಮರಣ ಹೊಂದಿರುತ್ತಾರೆ. ಜಿಲ್ಲೆಯಲ್ಲಿ ಸಧ್ಯದಲ್ಲಿ ಸಕ್ರಿಯವಾಗಿ 442 ಜನರು ಇದ್ದು, ಇವರಿಗೆಲ್ಲ ಪ್ರತಿದಿನ ಆರೋಗ್ಯ ತಪಾಸಣೆಯನ್ನು ಮಾಡಿ ನಿಗಾವಹಿಸಿ ಇಡಲಾಗಿರುತ್ತದೆ. ಎಂದು ಮಾಹಿತಿಯನ್ನು ಸಭೆ ಗಮನಕ್ಕೆ ತಂದರು.

ಸಭೆಯಲ್ಲಿ ಅಧ್ಯಕ್ಷರು, ಒಟ್ಟು 1232 ಸಕ್ರಿಯ ಪ್ರಕರಣಗಳ ಕುರಿತು ಮಾಹಿತಿಯನ್ನು ನೀಡುವಂತೆ ತಿಳಿಸಿದಾಗ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು, ಸದರಿ ಸಕ್ರಿಯ ಪ್ರಕರಣಗಳ ಬಗ್ಗೆ ಮಾಹಿತಿ ನೀಡುತ್ತ, ಜಿಲ್ಲೆಯಲ್ಲಿ 90% ದಷ್ಟು ಪ್ರಕರಣಗಳು ನೆರೆ ರಾಜ್ಯವಾದ ಮಹಾರಾಷ್ಟ್ರದಿಂದ 1020 ಪ್ರಕರಣಗಳು ಬಂದಿರುತ್ತವೆ ಹಾಗೂ ಗುಜರಾತ-4 , ಆಂಧ್ರಪ್ರದೇಶದಿಂದ-02, ತೆಲಂಗಾಣ-08, ದೆಹಲಿ-01, ಉತ್ತರ ಪ್ರದೇಶ-01 ಹೀಗೆ 1036 ಬೇರೆ ರಾಜ್ಯಗಳಿಂದ ಬಂದ ಪ್ರಕರಣಗಳು,

ಹೆಚ್ಚಾಗಿ ಬಂದಿವೆ ಮತ್ತು ಬೇರೆ ದೇಶದಿಂದ ಬಂದಂತಹ 10 ಜನರಿಗೆ ಸೋಂಕು ತಗುಲಿರುತ್ತದೆಯಂದು ಸಭೆಯ ಗಮನಕ್ಕೆ ತಂದರು.

**ಸಾರಿ ಮತ್ತು ಐ.ಎಲ್.ಐ:-**

ಜಿಲ್ಲೆಯಲ್ಲಿ ಒಟ್ಟು ಗುರುತಿಸಲಾದ ಸಾರಿ ಪ್ರಕರಣಗಳು 1215 ಇದ್ದು, ಅದರಲ್ಲಿ 1215 ಪೂರ್ತಿಯಾಗಿ ಲ್ಯಾಬ್ ಟೆಸ್ಟ ಮಡಲಾಗಿರುತ್ತದೆ. ಅದರಲ್ಲಿ 15 ಪ್ರಕರಣಗಳು ಕೋವಿಡ್-19 ವೈರಸ್ ಸಕ್ರೀಯ ಇರುವ ಬಗ್ಗೆ ಧೃಡಪಟ್ಟಿರುತ್ತದೆ ಮತ್ತು ಗುರುತಿಸಲಾದ ಐ.ಎಲ್.ಐ ಸಂಖ್ಯೆ:4497 ಇದ್ದು, ಅದರಲ್ಲಿ ಇದುವರೆಗೂ 1003 ಪ್ರಕರಣಗಳಿಗೆ ಲ್ಯಾಬ್ ಟೆಸ್ಟ ಸಂಬಂಧವಾಗಿ ರವಾನಿಸಲಾಗಿದ್ದು, ಅದರಲ್ಲಿ 17 ಪ್ರಕರಣಗಳು ಕೋವಿಡ್-19 ವೈರಸ್ ಸಕ್ರಿಯ ಇರುವ ಬಗ್ಗೆ ಧೃಡಪಟ್ಟಿರುತ್ತದೆ. ಅದೇ ರೀತಿಯಾಗಿ ಜಿಲ್ಲೆಯಲ್ಲಿ Vulnerable Group Survey ಮಾಡಲಾಗಿದ್ದು, ಗರ್ಭವತಿ ಪ್ರಕರಣಗಳು: 26860, ಟಿ.ಬಿ 1528, ಆರ್ಟ (ಹೆಚ್.ಐ.ವಿ) 1473 ಮತ್ತು ಡಯಾಲೈಸಿಸ್-79 ಪ್ರಕರಣಗಳು ಇದ್ದು ಹೀಗೆ ಒಟ್ಟು 29,937 ಇರುತ್ತವೆಯೆಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಲಾಯಿತ್ತು.

**ಕಂಟೈನೈಟ್ ಜೋನ್:-**

ಸಭೆಯ ಅಧ್ಯಕ್ಷರು ಜಿಲ್ಲೆಯಲ್ಲಿ Containment Zone ಎಂದು ಯಾವ ರೀತಿಯಲ್ಲಿ ನಿಭಾಯಿಸಲಾಗುತ್ತದೆ. ಎಂದು ಅಧ್ಯಕ್ಷರು ಸಭೆಯಲ್ಲಿ ವಿಚಾರಿಸಿದಾಗ ಅದಕ್ಕೆ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಮಾತನಾಡುತ್ತ, ಜಿಲ್ಲೆಯಲ್ಲಿ ಇದುವರೆಗೆ 193 Containment Zone ಗಳನ್ನು ಮಾಡಲಾಗಿದ್ದು, ಇದರ ಪೈಕಿ ಸದ್ಯ ಸಕ್ರಿಯವಾಗಿ 165 Containment Zone ಇರುತ್ತವೆ ಎಂದು ಸಭೆ ಗಮನಕ್ಕೆ ತಂದರು. ಕೋರೋನಾ ವೈರಸ್ ಸೊಂಕಿತ ವ್ಯಕ್ತಿಯ ವಾಸದ ಮನೆಯ ಮುಖ್ಯ ರಸ್ತೆ ಹಾಗೂ ಸುತ್ತಲಿರುವ ನಿಖರವಾಗಿ ಗುರುತಿಸಲ್ಪಟ್ಟ ಸರಹದ್ದು ಪ್ರದೇಶವು Containment Zone ಆಗಿರುತ್ತದೆ ಹಾಗೂ ಆ ವ್ಯಕ್ತಿಯ ನಗರ ಪ್ರದೇಶದಲ್ಲಿ ರೋಗಿಯ ವಸತಿ ಸುತ್ತಲಿರುವ 200 ಮೀಟರ್ ವಾಸದ ಪ್ರದೇಶವು ಬಫರ್ ವಲಯ (Buffor Zone) ಆಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಸಕ್ರಿಯ ವ್ಯಕ್ತಿ ವಾಸವಿರುವ ಹರಡುವ ಸಣ್ಣ ಪ್ರದೇಶವು ಅಗತ್ಯಕ್ಕೆ ತಕ್ಕಂತೆ ಇಡೀ ವಾದ ಪ್ರದೇಶವು ಬಫರ್ ವಲಯ (Buffer Zone) ಆಗಿರುತ್ತದೆಯೆಂದು ಮಾಹಿತಿಯನ್ನು ನೀಡಿದರು. ಆಗ ಸಭೆಯ ಅಧ್ಯಕ್ಷರು ಸದರಿ ಮಾಹಿತಿ ಕುರಿತು ಇದು ಹಳೆಯ ಮಾರ್ಗ ಸೂಚಿಯಂತೆ ಇದ್ದು, ಹೊಸದಾಗಿ Containment Zone ಸಂಬಂಧಿಸಿದಂತೆ, ಮಾರ್ಗಸೂಚಿ ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ಕೋವಿಡ್ ಸಂಕ್ರಿಯ ವ್ಯಕ್ತಿಯ ವಾಸವಿರುವ ಅಂತಸು ಹಾಗೂ ಮೇಲಿನ ಒಂದು ಅಂತಸು ಕೆಳಗಿನ ಒಂದು ಅಂತಸು ರಂತೆ ಮಾರ್ಗಸೂಚಿಯಾಗಿದ್ದು, ಅದರಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಲಾಬ್ ಟೆಸ್ಟಿಂಗ್:-**

ಜಿಲ್ಲೆಯಲ್ಲಿ ಲ್ಯಾಬ್ ಟೆಸ್ಟಿಂಗ್ ನ್ನು ಕಲಬುರಗಿ ಜಿಮ್ಸ ಆಸ್ಪತ್ರೇಯಲ್ಲಿ ಮತ್ತು ಯುನೈಟೆಡ್ ಆಸ್ಪತ್ರೆಗಳಲ್ಲಿ ಮಾಡಲಾಗುತ್ತಿದ್ದು, ಇದುವರೆಗೂ ಜಿಮ್ಸ ಆಸ್ಪತ್ರೇಯಲ್ಲಿ ಇಲ್ಲಿಯವರೆಗೆ ಒಟ್ಟಾರೆಯಾಗಿ

39922 ಮತ್ತು ಯುನೈಟೆಡ್ ಆಸ್ಪತ್ರೆಯಲ್ಲಿ ಇಲ್ಲಿಯವರೆಗೆ 14 ಪ್ರಕರಣಗಳಿಗೆ ಲ್ಯಾಬ್ ಟೆಸ್ಟಿಂಗ್ ಮಾಡಲಾಗಿರುತ್ತದೆ. ಅದೇ ರೀತಿಯಾಗಿಯೂ ಸಹ ಬೀದರ ಮತ್ತು ಯಾದಗಿರ ಜಿಲ್ಲೆಗಳಿಂದ ಬಂದ ಪ್ರಕರಣಗಳಿಗೂ ಸಹ ಲ್ಯಾಬ್ ಟೆಸ್ಟಿಂಗ್ ಮಾಡಲಾಗಿದ್ದು, ಒಟ್ಟಾರೆಯಾಗಿ ಪ್ರತಿ ದಿನ 500 ರಿಂದ 500 ಪ್ರಕರಣಗಲಿಗೆ ಲ್ಯಾಬ್ ಟೆಸ್ಟಿಂಗ್ ಮಾಡಲಾಗುತ್ತಿದೆಯೆಂದು ಸಭೆಯ ಗಮನಕ್ಕೆ ತಂದರು.

**ಫೀವರ್ ಕ್ಲಿನಿಕ್:-**

ಕಲಬುರಗಿ ಜಿಲ್ಲೆಯಲ್ಲಿ, ಇದುವರೆಗೂ 5991 ವ್ಯಕ್ತಿಗಳಿಗೆ ಸ್ಕ್ರೀನಿಂಗ್ ಮಾಡಲಾಗಿದ್ದು, ಈ ಪೈಕಿ ಇಲ್ಲಿಯವರೆಗೂ 631 ವ್ಯಕ್ತಿಗಳಿಗೆ ಕ್ವಾರೆಂಟೈನ್ ಕೇಂದ್ರಕ್ಕೆ ಕಳುಹಿಸಿಕೊಡಲಾಗಿದೆಯೆಂದು ತಿಳಿಸಿದರು.

**ಐಸೋಲೇಶನ್ ವಿವರ:-**

ಜಿಲ್ಲೆಯಲ್ಲಿ, ಒಟ್ಟು 05 ಐಸೋಲೇಶನ್ ಕೇಂದ್ರಗಳನ್ನು ತೆರೆಯಲಾಗಿದ್ದು, ಇಂದು ಹೊಸದಾಗಿ 55 ಪ್ರಕರಣಗಳು ದಾಖಲಾಗಿದ್ದು, ಇಂದಿನ ಬಿಡುಗಡೆ 74 ಇರುತ್ತವೆ. ಒಟ್ಟು ಪ್ರತ್ಯೇಕ ಗೊಳಿಸಲಾದ ಪ್ರಕರಣಗಳ ಸಂಖ್ಯೆ 565 ಇರುತ್ತವೆ.

**ವಲಸೆ ಕಾರ್ಮಿಕರು:-**

ಜಿಲ್ಲಾಧಿಕಾರಿಗಳು, ಕಲಬುರಗಿ ಇವರು, ಮಾತನಾಡುತ್ತ, ಜಿಲ್ಲೆಯಿಂದ ಬೇರೆ ರಾಜ್ಯಕ್ಕೆ ಹೋಗಿರುವ ವಲಸೆ ಕಾರ್ಮಿಕರು, ಯಾತ್ರಾರ್ಥಿಗಳು, ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳು ಮರಳಿ ಜಿಲ್ಲೆಗೆ ಬರುತ್ತಿದ್ದು, ಅವರಿಗೆ ಜಿಲ್ಲೆ ಅಧಿಸೂಚಿತ ಸರಹದ್ದಿನಲ್ಲಿ ಬರಮಾಡಿಕೊಳ್ಳುತ್ತಿದ್ದು, ಅವರಿಗೆ ಎಲ್ಲಾ ಸರಹದ್ದಿನಲ್ಲಿ ಆರೋಗ್ಯ ತಪಾಸಣೆ, ಊಟದ ವ್ಯವಸ್ಥೆ ಮಾಡಲಾಗಿದ್ದು, ಕೋರೋನಾ ವೈರಸ್ ಲಕ್ಷಣಗಳು ಕಂಡು ಬಂದಂತಹ ಪ್ರಯಾಣಿಕರಿಗೆ ಜಿಲ್ಲೆಯಲ್ಲಿರುವ ಕೋವಿಡ್ ಕೇಂದ್ರಗಳಿಗೆ ಅಂಬುಲೈನ್ಸ್ ಮೂಲಕ ರವಾನಿಸಲಾಗಿರುತ್ತದೆ ಹಾಗೂ ರೋಗ ಲಕ್ಷಣ ಇಲ್ಲದಂತಹ ಜನರಿಗೆ ಅವರ ಸ್ವ-ಗ್ರಾಮದ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಸಾಂಸ್ಥಿಕ ಕ್ವಾರೆಂಟೈನ್ ಕೇಂದ್ರಗಳಲ್ಲಿ 14 ದಿನದವರೆಗೆ ಇಡಲಾಗಿರುತ್ತದೆ. ಅವರಿಗೆ ಎಲ್ಲಾ ಸಾಂಸ್ಥಿಕ ಕ್ವಾರೆಂಟೈನಲ್ಲಿ ಮೂಲಭೂತ ಸೌಕರ್ಯ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಯಿಂದ ನಿರ್ವಹಿಸಲಾಗಿರುತ್ತದೆ ಮತ್ತು ಶ್ರಮಿಕ ರೈಲು ಮೂಲಕ ಹೊರ ರಾಜ್ಯದಿಂದ ಬರುವಂತಹ ವಲಸೆ ಕಾರ್ಮಿಕರು, ಯಾತ್ರಾರ್ಥಿಗಳು, ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳು ಮರಳಿ ಜಿಲ್ಲೆಗೆ ಬರುತ್ತಿದ್ದು, ಅವರಿಗೂ ಸಹ ಈ ಮೇಲಿನಂತೆ ಆರೋಗ್ಯ ಚಿಕಿತ್ಸೆಯನ್ನು ಮಾಡಿ ಸಾಂಸ್ಥಿಕ ಕ್ವಾರೆಂಟೈನ್ ಕೇಂದ್ರಗಳಲ್ಲಿ ಬರಮಾಡಿಕೊಳ್ಳಲಾಗಿತ್ತದೆ. ಇವರಿಗೆ ಎಲ್ಲಾ ತಹಸೀಲ್ದಾರ ಕಲಬುರಗಿ ಇವರಿಂದ ಊಟೋಪಚಾರ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಇದುವರೆಗೆ ಹೊರ ರಾಜ್ಯದಿಂದ ಜಿಲ್ಲೆಗೆ ಒಟ್ಟು 44386 ಪ್ರಯಾಣಿಕರನ್ನು ಬರ ಮಾಡಿಕೊಂಡಿದ್ದು, ಜಿಲ್ಲೆಯಲ್ಲಿ ಒಟ್ಟು 645 ಸಾಂಸ್ಥಿಕ ಕ್ವಾರೆಂಟೈನ ಕೇಂದ್ರಗಳಲ್ಲಿ ಇಡಿಸಲಾಗಿರುತ್ತದೆ. ಇಲ್ಲಿಯವರೆಗೆ 42426 ವಲಸೆ ಕಾರ್ಮಿಕರನ್ನು ಬಿಡುಗಡೆ ಮಾಡಲಾಗಿದೆ. ಸಧ್ಯದಲ್ಲಿ ಸಕ್ರಿಯವಾಗಿ 41 (ಕೋವಿಡ್ ಕೇರ್) ಕೇಂದ್ರಗಳನ್ನು ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ ಒಟ್ಟು 1960 ಜನರನ್ನು

ಇಡಿಸಲಾಗಿರುತ್ತದೆ ಹಾಗೂ ಹೋಂ ಕ್ವಾರೆಂಟನ್ ಮೇಲ್ವಿಚಾರಣೆ ಗ್ರಾಮೀಣ ಪ್ರದೇಶದಲ್ಲಿ ಮತ್ತು ತಾಲೂಕ ಕೇಂದ್ರಗಳಲ್ಲಿ ಪ್ರತಿಯೊಂದು ಮತಗಟ್ಟೆಗೆ ಒಂದು ಸಮಿತಿಯನ್ನು ರಚಿಸಿ ಸದರಿ ಸಮಿತಿಯಲ್ಲಿ ಮೂರು ಜನ ಒಳಗಂಡಂತೆ ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಬಿಲ್ಲ್ ಕಲೆಕ್ಟರ್, ಗ್ರಾಮ ಲೆಕ್ಕಪಾಲಕರು ಇವರಗಳನ್ನು ಉಪಯೋಗಿಸಿಕೊಂಡು ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಎಲ್ಲಾ ಸಮಿತಿಗಳು ತಾಲೂಕಾ ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿ ಸಭೆಯ ಗಮನಕ್ಕೆ ತಂದರು.

**ಸ್ಕ್ರೀನಿಂಗ್ ವಿವರ:-**

ಜಿಲ್ಲೆಯಲ್ಲಿ ಈಗಾಗಲೇ 38 ಚೆಕ್ ಪೊಸ್ಟಗಳನ್ನು ಸ್ಥಾಪಿಸಲಾಗಿರುವ ಕಡೆ ಬಾರ್ಡರ ಚೆಕ್ ಪೊಸ್ಟ, ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಕಡೆಗಳಲ್ಲಿ ಇದುವರೆಗೂ ಒಟ್ಟಾರೆಯಾಗಿ 3,42,158 ವ್ಯಕ್ತಿಗಳಿಗೆ ಸ್ಕ್ರೀನಿಂಗ್ ಮಾಡಲಾಗಿದೆಯೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿ ಇವರು, ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.

ನಂತರ ಸದರಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಕಪಿಲ್ ಮೋಹನ್)
ಸರಕಾರದ ಪ್ರಧಾನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಬೆಂಗಳೂರು
ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿಯನ್ನು: ಸಂಬಂಧಪಟ್ಟವರಿಗೆ.

ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳ ವಿವರ.

1. ಶ್ರೀ ಕಪಿಲ್ ಮೋಹನ್ ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಬೆಂಗಳೂರು ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.
2. ಜಿಲ್ಲಾಧಿಕಾರಿಗಳು, ಕಲಬುರಗಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿ.
4. ಆಯುಕ್ತರು, ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ.
5. ಆಯುಕ್ತರು, ಶಿಕ್ಷಣ ಇಲಾಖೆ ಕಲಬುರಗಿ.
6. ಅಪರ ಜಿಲ್ಲಾಧಿಕಾರಿಗಳು, ಕಲಬುರಗಿ.
7. ನಿರ್ದೇಶಕರು, ಜಿಮ್ಸ್ ಆಸ್ಪತ್ರೇ ಕಲಬುರಗಿ.
8. ಡೀನ್ ಇ.ಎಸ್.ಐ ಆಸ್ಪತ್ರೇ ಕಲಬುರಗಿ.
9. ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ.
10. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕಲಬುರಗಿ.
11. ಜಿಲ್ಲಾ ಶಸ್ತ್ರಜ್ಞರು, ಸರಕಾರಿ ಸಾರ್ವಜನಿಕ ಆಸ್ಪತ್ರೆ ಕಲಬುರಗಿ.

ದಿನಾಂಕ 24-06-2020ರಂದು ಮದ್ಯಾಹ್ನ 3.00 ಗಂಟೆಗೆ ಜಿಲ್ಲಾ ಪಂಚಾಯತ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಲಬುರಗಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯ ನಡುವಳಿಗಳು.

ಸಭೆಯಲ್ಲಿ ಉಪಸ್ಥಿತರು:

1) ಮಾನ್ಯ ಶ್ರೀ ಕಪಿಲ್ ಮೋಹನ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು
ಹಾಗೂ ಕಲಬುರಗಿ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು

2) ಡಾ: ರಾಜ ಪಿ. ಭಾ.ಆ.ಸೇ.,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಕಲಬುರಗಿ

3) ಶ್ರೀ ರಾಹುಲ್ ಪಾಂಡ್ವೆ, ಭಾ.ಆ.ಸೇ.,
ಆಯುಕ್ತರು, ಮಹಾನಗರಪಾಲಿಕೆ, ಕಲಬುರಗಿ.

4) ಶ್ರೀ ಮಹ್ಮದ ಇಸ್ಮಾಯಿಲ್,
ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ, ಕಲಬುರಗಿ

5) ಶ್ರೀ ಕಿಶೋರ ಕುಮಾರ ದುಬೆ,
ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ

6) ಶ್ರೀ ಎಂ.ವಿ.ಚಿಲ್ಲರಗಿ,
ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ., ಜಿಲ್ಲಾ ಪಂಚಾಯತ, ಕಲಬುರಗಿ

7) ಶ್ರೀ ರಾಮಣ್ಣ ಅಥಣಿ,
ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ

8) ಶ್ರೀ ಶಿವಶರಣಪ್ಪ ನಂದಗಿರಿ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಕಲಬುರಗಿ

9) ಶ್ರೀ ಗಂಗಾಧರ,
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ, ಕಲಬುರಗಿ (ಕಾರ್ಯನಿರ್ವಾಹಕ ಅಭಿಯಂತರರು ಇವರ ಪ್ರತಿನಿಧಿ)

10) ಶ್ರೀ ಧನ್ಯಕುಮಾರ್,
ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಕಲಬುರಗಿ-1 ಹಾಗೂ 2

11) ಶ್ರೀ ರಿತೇಂದ್ರನಾಥ ಸುಗೂರು,
ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ

12) ಶ್ರೀ ಸಂತೋಷ
ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕಲಬುರಗಿ

13) ಡಾ: ಶರಣಬಸಪ್ಪ ಗಣಜಲಖೇಡ,
ಎಸ್.ಎಂ.ಒ., ಸಿಸಿಟಿ, ಕಲಬುರಗಿ (ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಪರವಾಗಿ)

14) ಶ್ರೀ ಅಜೀಜುದ್ದೀನ್,
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ

ಸಭೆಯ ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು ಇವರನ್ನು ಸ್ವಾಗತಿಸಿದರು. ಅದೇ ರೀತಿ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಂಡು ಹೋಗಲು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಕೇಳಿಕೊಂಡರು.

1) ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡುತ್ತ, 2019-20ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿನಲ್ಲಿ ಅನುದಾನ ವ್ಯಪಗತ ಆಗಿರುವ ಕುರಿತು ಮಾಹಿತಿ ಕೇಳಿದಾಗ, ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತರವರು, ಜಿಲ್ಲಾ ಪಂಚಾಯತಿನಲ್ಲಿ ಒಟ್ಟು ರೂ. 9.81 ಕೋಟಿ ಲ್ಯಾಪ್ಸ್ ಆಗಿದೆ. ದಿನಾಂಕ 24-3-2020ರಂದು ಬಿಲ್ಲುಗಳನ್ನು ಖಜಾನೆ ಇಲಾಖೆಗೆ ಸಲ್ಲಿಸಲು ಕೊನೆಯ ದಿನಾಂಕವಾಗಿತ್ತು. ಆದರೆ ಅನುಷ್ಠಾನಾಧಿಕಾರಿಗಳು ಸದರಿ ದಿನಾಂಕದ ನಂತರ ಸಲ್ಲಿಸಿದ ಬಿಲ್ಲುಗಳನ್ನು ಖಜಾನೆ ಇಲಾಖೆಯವರು ತಿರಸ್ಕರಿಸಿದ ಕಾರಣ ಸದರಿ ಅನುದಾನ ಲ್ಯಾಪ್ಸ್ ಆಗಿದೆ ಎಂದು ತಿಳಿಸಿದರು.

2) ಎಂ.ಜಿ.ಎನ್.ಆರ್.ಇ.ಜಿ.ಎ.

ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತರವರು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2020-21ನೇ ಸಾಲಿನಲ್ಲಿ ಮಾನವ ದಿನಗಳ ಸೃಜನೆ ವಾರ್ಷಿಕ ಗುರಿ 65 ಲಕ್ಷ ನಿಗದಿಪಡಿಸಿದ್ದು ಇದರಲ್ಲಿ ಸಂಚಿತ ಸಾಧನೆ 26.52 ಲಕ್ಷ ಮಾನವ ದಿನಗಳು ಸೃಜನೆ ಮಾಡಲಾಗಿದೆ. ಅಂದರೆ 40.80 ಪ್ರತಿಶತ ಸಾಧನೆ ಮಾಡಲಾಗಿದೆ. ಇದರಲ್ಲಿ ಒಟ್ಟು ರೂ. 8084.32 ಲಕ್ಷ ಆರ್ಥಿಕ ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು. ಈ ಯೋಜನೆಯಡಿ ರೈತರ ಜಮೀನುಗಳಲ್ಲಿ ಬದು ನಿರ್ಮಾಣ ಮುಂತಾದ ಕಾಮಗಾರಿಗಳು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಸದರಿ ನರೇಗಾ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ, ಕಲಬುರಗಿ)

3) ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆರವರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯಡಿ ಒಟ್ಟು 211 ಕಾಮಗಾರಿಗಳು ತೆಗೆದುಕೊಂಡಿದ್ದು ಈ ಪೈಕಿ 138

ಕಾಮಗಾರಿಗಳು ಪೂರ್ಣ ಮಾಡಲಾಗಿದೆ. ಇದಕ್ಕಾಗಿ ಒಟ್ಟು ರೂ. 2292.79 ಲಕ್ಷ ನಿಗದಿಪಡಿಸಿದ್ದು ಈ ಪೈಕಿ ದಿನಾಂಕ 31-3-2020ರವರೆಗೆ ರೂ. 437.06 ಲಕ್ಷ ಖರ್ಚು ಮಾಡಲಾಗಿದೆ. ಎಸ್.ಡಿ.ಪಿ. ಯೋಜನೆಯಡಿ ಒಟ್ಟು 237 ಕಾಮಗಾರಿಗಳ ಪೈಕಿ 90 ಕಾಮಗಾರಿಗಳು ಪೂರ್ಣಗೊಂಡಿವೆ. ಇದರಲ್ಲಿ ರೂ. 4260.16 ಲಕ್ಷಗಳಲ್ಲಿ ರೂ. 1265.3 ಲಕ್ಷ ದಿನಾಂಕ 31-3-2020ರವರೆಗೆ ಖರ್ಚು ಮಾಡಲಾಗಿದೆ. ಅಂದರೆ ಈ ಎರಡು ಯೋಜನೆಗಳು ಸೇರಿ ಒಟ್ಟು ತೆಗೆದುಕೊಂಡ 448 ಕಾಮಗಾರಿಗಳ ಪೈಕಿ 218 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆರವರು ಮಾತನಾಡುತ್ತ, ಜಿಲ್ಲೆಯಲ್ಲಿ ಒಟ್ಟು 25 ಬಹುಗ್ರಾಮ ಯೋಜನೆಗಳು ತೆಗೆದುಕೊಂಡಿದ್ದು ಈ ಪೈಕಿ MVS with O & M in Built ನಲ್ಲಿ 12, MVS with O & M ನಲ್ಲಿ 4, MVS JNP O & M ನಲ್ಲಿ 3, Defunct schemes ನಲ್ಲಿ 3, work u/p 2 ಹಾಗೂ ಇತರ 1 ಯೋಜನೆಗಳು ಇವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತ, ಚಿತ್ತಾಪೂರ ತಾಲೂಕಿನಲ್ಲಿ ತೆಗದುಕೊಂಡ ಬಹುಗ್ರಾಮ ಯೋಜನೆಯ ಜಲಮೂಲಗಳು ಯಾವುದು ಎಂದು ಕೇಳಿದಾಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ ಕಲಬುರಗಿರವರು, ಸದರಿ ಯೋಜನೆಗೆ ಭೀಮಾ ಹಾಗೂ ಕಾಗಿಣಾ ನದಿಗಳು ಜಲಮೂಲಗಳಾಗಿವೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತರವರು ಮಾತನಾಡುತ್ತ, ಜಿಲ್ಲೆಯಲ್ಲಿ ಒಟ್ಟು 469 WPP ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು ಇದರಲ್ಲಿ 449 ಘಟಕಗಳು ಅಳವಡಿಸಲಾಗಿದೆ. ಇದರಲ್ಲಿ ಕಮೀಷನ್ ಮಾಡಿದ್ದು 443, ಈ ಪೈಕಿ 231 ಘಟಕಗಳು ಕೆಲಸ ನಿರ್ವಹಿಸುತ್ತಿವೆ. 212 ಘಟಕಗಳು ಕೆಲಸ ನಿರ್ವಹಿಸುತ್ತಿಲ್ಲ. ಇವುಗಳ ಪೈಕಿ ನಿರ್ವಹಣೆಗಾಗಿ 163 ಘಟಕಗಳ ದುರಸ್ತಿಗಾಗಿ ಟೆಂಡರ್ ಕರೆದು ವರ್ಕ್ ಆರ್ಡರ್ ಕೊಡಲಾಗಿದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.ಕಲಬುರಗಿರವರು ಮಾತನಾಡುತ್ತ, ಕೆ.ಆರ್.ಐ.ಡಿ.ಎಲ್. ವತಿಯಿಂದ 157 WPP ಕಾಮಗಾರಿಗಳು ತೆಗೆದುಕೊಂಡಿದ್ದು ಇದರಲ್ಲಿ 147 ಘಟಕಗಳು ಅಳವಡಿಸಿದ್ದು ಒಂದು ವರ್ಷ ಮಾತ್ರ ನಿರ್ವಹಣೆ ಮಾಡಲಾಗಿದೆ. ನಂತರ ಕೇಂದ್ರ ಕಛೇರಿಯ ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತಿರುವ ಹಾಗೂ ನಿರ್ವಹಿಸದೇ ಇರುವ ಎಲ್ಲಾ WPP ಗಳು ಸಂಬಂಧಪಟ್ಟವರಿಗೆ ಹಸ್ತಾಂತರ ಮಾಡಲಾಗಿದೆ ಎಂದು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ ಕಲಬುರಗಿರವರು ಮಾತನಾಡುತ್ತ, ತುರ್ತು ನೀರು ಗೋಸ್ಕರ ಅನುಮೋದನೆಯಾದ ಒಟ್ಟು ಕಾಮಗಾರಿಗಳು 264 ಇದ್ದು ಈ ಕಾಮಗಾರಿಗಳಿಗೆ ಒಟ್ಟು ರೂ. 365.00 ಲಕ್ಷ ಅನುದಾನ ಇದೆ. ಈ ಪೈಕಿ ರೂ. 90 ಲಕ್ಷ ಖರ್ಚು ಮಾಡಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತರವರು ಮಾತನಾಡುತ್ತ, 2019-20ನೇ ಸಾಲಿನಲ್ಲಿ ಒಟ್ಟು 26 ಹಳ್ಳಿಗಳಿಗೆ 39 ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿದೆ. ಇದು ಅಲ್ಲದೆ ಬಾಡಿಗೆ ಆಧಾರದ ಮೇಲೆ (ಜಲಮೂಲ) ತೆಗೆದುಕೊಂಡ ಜನವಸತಿಗಳ ಸಂಖ್ಯೆ 49 ಇದ್ದು ಜಲಮೂಲಗಳ ಸಂಖ್ಯೆ 60 ಇವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಸರ್ಕಾರವು ನೀಡಿದ ಗುರಿ ಪ್ರಕಾರ ಸಾಧನೆ ಮಾಡಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗ, ಕಲಬುರಗಿ)

**4) ಸ್ವಚ್ಛ ಭಾರತ ಅಭಿಯಾನ:**

ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಜಿಲ್ಲಾ ಪಂಚಾಯತರವರು, ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ಎಲ್.ಓ.ಬಿ. ಹಾಗೂ ಎನ್.ಓ.ಎಲ್.ಬಿ.ಯಡಿ ಒಟ್ಟು ಗುರಿ 63395 ಇದ್ದು ಈ ಪೈಕಿ 31270 ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು, ಸದರಿ ಯೋಜನೆಯಡಿ ಪ್ರತಿ ವೈಯಕ್ತಿಕ ಶೌಚಾಲಯಕ್ಕೆ ಸಾಮಾನ್ಯ ವರ್ಗದವರಿಗೆ ರೂ. 12 ಸಾವಿರ ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವರ್ಗಕ್ಕೆ ರೂ. 15 ಸಾವಿರಗಳನ್ನು ಸರ್ಕಾರವು ಪ್ರೋತ್ಸಾಹಧನ ನೀಡುತ್ತದೆ. ಸದರಿ ಹಣದಲ್ಲಿ ಶೌಚಾಲಯ ಪೂರ್ಣಗೊಳಿಸುವುದು ಕಷ್ಟಕರವಾಗಿದ್ದು ಇದರಿಂದಾಗಿ ಫಲಾನುಭವಿಗಳು ಶೌಚಾಲಯ ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿಲ್ಲವೆಂದು ತಿಳಿಸಿದರು.

ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಡಿ ಘನ ಮತ್ತು ತ್ಯಾಜ್ಯ ವಿಲೇವಾರಿ ಘಟಕ ಕಾರ್ಯಕ್ರಮದಡಿ ಒಟ್ಟು 264 ಗ್ರಾಮ ಪಂಚಾಯತಿಗಳ ಪೈಕಿ ಪ್ರಸ್ತಾವನೆ ಸಿದ್ಧಪಡಿಸಿರುವ ಗ್ರಾಮ ಪಂಚಾಯತಿಗಳು 90 ಇದ್ದು ಅನುಮೋದನೆಗಾಗಿ ರಾಜ್ಯ ಕಛೇರಿಗೆ 71 ಪ್ರಸ್ತಾವನೆಗಳು ಸಲ್ಲಿಸಲಾಗಿದೆ. ಈ 65 ಗ್ರಾಮ ಪಂಚಾಯತಿಗಳ ಪ್ರಸ್ತಾವನೆ ಅನುಮೋದನೆಯಾಗಿವೆ. ಇನ್ನೂ 172 ಗ್ರಾಮ ಪಂಚಾಯತಿಗಳ ಪ್ರಸ್ತಾವನೆಗಳು ರಾಜ್ಯ ಕಛೇರಿಗೆ ಸಲ್ಲಿಸಬೇಕಾಗಿದೆ. ಸದರಿ ಯೋಜನೆಯಡಿ ಗ್ರಾಮ ಪಂಚಾಯತಿಗಳು ಒಂದು ಕಡೆ ಹಸಿ ಕಸ ಹಾಗೂ ಒಣ ಕಸ ಪ್ರತ್ಯೇಕವಾಗಿ ಸಂಗ್ರಹಿಸಿ ಅದನ್ನು ಸ್ಕ್ರಾಪ್ ಡೀಲರ್ ಇವರಿಗೆ ಮಾರಾಟ ಮಾಡಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಜಿಲ್ಲಾ ಪಂಚಾಯತ, ಕಲಬುರಗಿ)

**5) ಜಿಲ್ಲಾ ಪಂಚಾಯತಿನ ಲಿಂಕ್ ಡಾಕ್ಯುಮೆಂಟ್:**

ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತರವರು ಮಾತನಾಡುತ್ತ, ಕಲಬುರಗಿ ಜಿಲ್ಲಾ ಪಂಚಾಯತಿಗೆ 2020-20ನೇ ಸಾಲಿನಲ್ಲಿ ಒಟ್ಟು ರೂ. 154785.44 ಲಕ್ಷ ಅನುದಾನವನ್ನು ಸರ್ಕಾರವು ಅನುಮೋದನೆ ನೀಡಿದ್ದು ಈ ಅನುದಾನದಲ್ಲಿ ಜಿಲ್ಲಾ ಪಂಚಾಯತ ಕಾರ್ಯಕ್ರಮಗಳಿಗೆ ರೂ. 45373.86 ಲಕ್ಷ, ತಾಲೂಕು ಪಂಚಾಯತ ಕಾರ್ಯಕ್ರಮಗಳಿಗೆ ರೂ. 109323.58 ಲಕ್ಷ ಹಾಗೂ ಗ್ರಾಮ ಪಂಚಾಯತ ಕಾರ್ಯಕ್ರಮಗಳಿಗೆ ರೂ. 88 ಲಕ್ಷಗಳು ನೀಡಲಾಗಿದೆ. ಇದಕ್ಕೆ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಮುಂದಿನ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತ, ಕ್ರಿಯಾ ಯೋಜನೆ ಮಾಡಲು ಏಕೆ ವಿಳಂಬ ಮಾಡಲಾಗಿದೆ ಎಂದು ಕೇಳಿದಾಗ, ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತರವರು, ಜಿಲ್ಲೆಯಲ್ಲಿ ಕೋವಿಡ್-19 ಇದ್ದ ಕಾರಣ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆ ಜರುಗದೇ ಇರುವ ಕಾರಣ ವಿಳಂಬವಾಗಿದೆ. ಮುಂದಿನ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, 2020-21ನೇ ಸಾಲಿನ ಕ್ರಿಯಾ ಯೋಜನೆಗೆ ಬೇಗ ಅನುಮೋದನೆ ಪಡೆದು ಕಾಮಗಾರಿಗಳು ಪ್ರಾರಂಭಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ)

**6) ಕೆ.ಆರ್.ಐ.ಡಿ.ಎಲ್.**

ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ರವರು ಕಲಬುರಗಿರವರು 5054 ಫ್ಲಡ್ ಡ್ಯಾಮೇಜ್ ಕಾರ್ಯಕ್ರಮದಲ್ಲಿ ಒಟ್ಟು 25 ರಸ್ತೆ ಕಾಮಗಾರಿಗಳು ತೆಗೆದುಕೊಳ್ಳಲಾಗಿತ್ತು. ಇದರಲ್ಲಿ 8 ರಸ್ತೆ ಕಾಮಗಾರಿಗಳು ಪ್ರಾಂಭಿಸಲಾಗಿದ್ದು ಬಾಕಿ ಕಾಮಗಾರಿಗಳು ಇನ್ನೂ ಪ್ರಾರಂಭಿಸಿರುವುದಿಲ್ಲವೆಂದು ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ಯೋಜನೆಯಡಿ ಮಂಜೂರಾದ ಕಾಮಗಾರಿಗಳು ತಕ್ಷಣ ಪ್ರಾರಂಭಿಸಿ, ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಕಲಬುರಗಿ)

**7) ಗ್ರಾಮ ವಿಕಾಸ ಯೋಜನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು ಮಾತನಾಡುತ್ತ, ಗ್ರಾಮ ವಿಕಾಸ ಯೋಜನೆಯಡಿ 2015-16ನೇ ಸಾಲಿನಿಂದ ಒಟ್ಟು 38 ಗ್ರಾಮಗಳಿಗೆ ಯೋಜನೆ ಮಂಜೂರಾಗಿದ್ದು ಒಟ್ಟು ರೂ. 30 ಕೋಟಿ ಬಿಡುಗಡೆಯಾಗಿದೆ. ಇದರಲ್ಲಿ ರೂ. 25 ಕೋಟಿ ಖರ್ಚಾಗಿದೆ. ಈ ಯೋಜನೆಯಡಿ ಒಟ್ಟು 1088 ಕಾಮಗಾರಿಗಳು ತೆಗೆದುಕೊಳ್ಳಲಾಗಿದೆ. ಇದರಲ್ಲಿ 1013 ಕಾಮಗಾರಿಗಳು ಪೂರ್ಣಗೊಂಡಿವೆ, ಉಳಿದ 75 ಕಾಮಗಾರಿಗಳು ಪ್ರಗತಿನ ಹಂತದಲ್ಲಿ ಇವೆ ಎಂದು ತಿಳಿಸಿದರು.

**8) ಎನ್.ಆರ್.ಎಲ್.ಎಂ.**

ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಜಿಲ್ಲಾ ಪಂಚಾಯತರವರು ಮಾತನಾಡುತ್ತ, ಎನ್.ಆರ್.ಎಲ್.ಎಂ. ಯೋಜನೆಯಡಿ 2020-21ನೇ ಸಾಲಿನಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿದ್ದು ಅದರಂತೆ ಒಕ್ಕೂಟ ರಚನೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಎಸ್.ಹೆಚ್.ಜಿ.ಗಳಿಗೆ ಕೋವಿಡ್ 19ಕ್ಕೆ ಸಂಬಂಧಪಟ್ಟಂತೆ ತರಬೇತಿ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದು ಅಲ್ಲದೆ ಸದರಿ ಯೋಜನೆಯಡಿ ಎಸ್.ಹೆಚ್.ಜಿ.ಗಳಿಗೆ ಸಿ.ಐ.ಎಫ್.ಯಲ್ಲಿ 34 ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಿ ಜೀವನೋಪಯೋಗಿ ಚಟುವಟಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ. ಎಸ್.ಸಿ. ಎಸ್.ಟಿ.ಗೆ ರೂ. 1.25 ಲಕ್ಷ ಹಾಗೂ ಇತರರಿಗೆ ರೂ. 70 ಸಾವಿರ ಸಾಲದ ರೂಪದಲ್ಲಿ ಕೊಡಲಾಗುವುದು ಎಂದು ತಿಳಿಸಿದರು.

**9) ವಸತಿ ಯೋಜನೆ:**

ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತರವರು, ಪ್ರಧಾನ ಮಂತ್ರಿ ಆವಾಸ (ಗ್ರಾಮೀಣ) ಯೋಜನೆಯಡಿ ಒಟ್ಟು 2301 ಮನೆಗಳ ಗುರಿ ಇದ್ದು ಈ ಪೈಕಿ 2009 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ 1663 ಮನೆಗಳ ಕಾಮಗಾರಿ ಇನ್ನೂ ಪ್ರಾರಂಭಿಸಿಲ್ಲ. ಸರ್ಕಾರದಿಂದ ಅನುದಾನ ಬರುವುದಿಲ್ಲವೆಂದು ಫಲಾನುಭವಿಗಳು ಮನೆಗಳು ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಅನುದಾನ ಬರುತ್ತದೆ ಮನೆಗಳು ಕಟ್ಟಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ವಸತಿ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ)

**10) ಕೃಷಿ ಇಲಾಖೆ:**

ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತ, ಕೃಷಿ ಇಲಾಖೆಗೆ ಜಿಲ್ಲಾ ವಲಯದಲ್ಲಿ ವಾರ್ಷಿಕ ಗುರಿ ರೂ. 30.00 ಲಕ್ಷ ಇದ್ದು ಇದರಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ರಾಜ್ಯ ವಲಯದಲ್ಲಿ ರೂ. 380.00 ಲಕ್ಷ ವಾರ್ಷಿಕ ಆರ್ಥಿಕ ಗುರಿ ಇದ್ದು ಇದರಲ್ಲಿ ಕೂಡ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಭೌತಿಕ ಪ್ರಗತಿ ನಡೆಯುತ್ತಿದೆ. ಮುಂಗಾರು ಹಂಗಾಮಿಗೆ ರೈತರಿಗೆ ಬೀಜ ವಿತರಣೆ ಮಾಡಲಾಗಿದೆ. ಈ ವರ್ಷ ಜೂನ್ 3ರಿಂದ ಮಳೆ ಪ್ರಾರಂಭವಾಗಿದೆ. ಮುಂಗಾರು ಹಂಗಾಮಿಗೆ ಒಟ್ಟು ಬಿತ್ತನೆ ಗುರಿ 7.53 ಲಕ್ಷ ಹೆಕ್ಟರ್ ಇದ್ದು ಇಲ್ಲಿಯವರೆಗೆ 2.32 ಲಕ್ಷ ಹೆಕ್ಟರ್‌ನಲ್ಲಿ ಬಿತ್ತನೆಯಾಗಿದೆ. ಅಂದರೆ 40 ಪ್ರತಿಶತ ಬಿತ್ತನೆಯಾಗಿದೆ ಎಂದು ತಿಳಿಸಿದರು.

**11) ತೋಟಗಾರಿಕೆ ಇಲಾಖೆ:**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಮಾತನಾಡುತ್ತ, ತೋಟಗಾರಿಕೆ ಇಲಾಖೆಯ ರಾಜ್ಯ ವಲಯದಲ್ಲಿ ವಾರ್ಷಿಕ ಆರ್ಥಿಕ ಗುರಿ ರೂ. 56.48 ಲಕ್ಷ ಇದ್ದು ಈ ಪೈಕಿ ರೂ. 51.48 ಲಕ್ಷ ಬಿಡುಗಡೆಯಾಗಿದೆ. ಇದರಲ್ಲಿ ರೂ. 14.50 ಲಕ್ಷ ಸಾಧನೆ ಮಾಡಲಾಗಿದೆ. ಜಿಲ್ಲಾ ವಲಯದಲ್ಲಿ ವಾರ್ಷಿಕ ಆರ್ಥಿಕ ಗುರಿ ರೂ. 143.26 ಲಕ್ಷದಲ್ಲಿ ರೂ. 49.50 ಲಕ್ಷ ಬಿಡುಗಡೆಯಾಗಿದೆ. ಈ ಯೋಜನೆಯಡಿ ಜಿಲ್ಲಾ ಪಂಚಾಯತಿನ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ಪಡೆದು ಅನುಷ್ಠಾನ ಮಾಡಬೇಕಾಗಿದೆ. ಅನುಮೋದನೆ ಪಡೆದ ನಂತರ ಕೆಲಸ ಪ್ರಾರಂಭಿಸಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕಲಬುರಗಿ)

**12) ಮಹಾನಗರಪಾಲಿಕೆ:**

ಆಯುಕ್ತರು, ಮಹಾನಗರಪಾಲಿಕೆರವರು ಮಾತನಾಡುತ್ತ, ನಗರೋತ್ಥಾನ 2ನೇ ಹಂತದಲ್ಲಿ 138 ಕಾಮಗಾರಿಗಳು ತೆಗೆದುಕೊಳ್ಳಲಾಗಿತ್ತು. ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ. 100 ಪ್ರತಿಶತ ಸಾಧನೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ರೂ. 93.20 ಲಕ್ಷ ಬಿಡುಗಡೆಯಾಗಿತ್ತು. ಪೂರ್ತಿ ಅನುದಾನ ಖರ್ಚು ಮಾಡಲಾಗಿದೆ. ಅಲ್ಲದೆ 2ನೇ ಹಂತದಲ್ಲಿ 3ನೇ ಹಂತದಲ್ಲಿ 34 ಕಾಮಗಾರಿಗಳು ತೆಗೆದುಕೊಳ್ಳಾಗಿತ್ತು. ಈ ಪೈಕಿ 32 ಕಾಮಗಾರಿಗಳು ಪೂರ್ಣಗೊಂಡಿದ್ದು 2 ಕಾಮಗಾರಿಗಳು ಪ್ರಗತಿಯಲ್ಲಿ

ಇವೆ. ಈ ಕಾರ್ಯಕ್ರಮಕ್ಕೆ ರೂ. 93.03 ಲಕ್ಷ ಬಿಡುಗಡೆಯಾಗಿದ್ದು ರೂ. 90.67 ಲಕ್ಷ ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಆಯುಕ್ತರು, ಅಪ್ಪಾ ಕೆರೆ ಅಭಿವೃದ್ಧಿ ಸಲುವಾಗಿ ದಕ್ಷಿಣ ಮತಕ್ಷೇತ್ರದ ಮಾನ್ಯ ಶಾಸಕರು ರೂ. 10.00 ಲಕ್ಷ ನೀಡಿದ್ದು ಟೆಂಡರ್ ಕರೆಯಲಾಗಿದೆ. ಟೆಂಡರ್ ಅಂತಿಮ ಮಾಡಿ ಕೆಲಸ ಪ್ರಾರಂಭಿಸಬೇಕಾಗಿದೆ ಎಂದು ತಿಳಿಸಿದರು.

ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶರವರು ಮಾತನಾಡುತ್ತ, ಕಲಬುರಗಿ ನಗರಕ್ಕೆ 24 x 7 ನೀರು ಸರಬರಾಜು ಯೋಜನೆಯಡಿ ಟೆಂಡರ್ ಕರೆಯಲಾಗಿದೆ. ಇದು ಪೂರ್ತಿ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ ಇದೆ. ಒಂದುವರೆ ವರ್ಷ ಅನುಷ್ಠಾನ ಮಾಡುವ ಅವಧಿಯಾಗಿದ್ದು 5 ವರ್ಷ ನಿರ್ವಹಣೆ ಇದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಕೋಶ ಇಲಾಖೆಗೆ ನೀಡಿರುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಾಧನೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಕಲಬುರಗಿ

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತ, ಇಂದಿನ ಸಭೆಯಲ್ಲಿ ನೀಡಿದ ಸಲಹೆ ಸೂಚನೆಗಳನ್ನು ಪಾಲನೆ ಮಾಡಲು ಎಲ್ಲಾ ಅಧಿಕಾರಿಗಳಿಗೆ ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

(ಕಪಿಲ್ ಮೋಹನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು
ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಸಂಖ್ಯೆ: ಜಿಪಕ: ಯೋಶಾ:ಸಭೆ: 1:2020-21 ದಿನಾಂಕ 24-06-2020

ಇದರ ಪ್ರತಿಯನ್ನು:

1) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಮಾಹಿತಿಗಾಗಿ ಕಳಹಿಸಿದೆ.
2) ಜಿಲ್ಲಾಧಿಕಾರಿಗಳು ಕಲಬುರಗಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಆಯುಕ್ತರು, ಮಹಾನಗರಪಾಲಿಕೆ, ಕಲಬುರಗಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

## ರಾಯಚೂರು ಜಿಲ್ಲೆಯ ಕೋವಿಡ್ ವರದಿ ದಿನಾಂಕ 28-06-2020 ಮತ್ತು 29-06-2020 ಬೇಟಿಯ ನಂತರ

1. ಕೋವಿಡ್ ಪಾಸಿಟೀವ್ ವ್ಯಕ್ತಿಗಳ ಸಂಪರ್ಕ ಪತ್ತೆ

   24 ಗಂಟೆಗಳ ಒಳಗೆ ಕೋವಿಡ್ ಪಾಸಿಟೀವ್ ವ್ಯಕ್ತಿಯ ಸಂಪರ್ಕಗಳನ್ನು ಪತ್ತೆ ಹಚ್ಚಲು ರಚಿಸಲಾದ ಸಂಪರ್ಕ ಟ್ರೇಸಿಂಗ್ ತಂಡಗಳು ಸಾಕಷ್ಟು ಇವೆಯೇ?

   ಹೌದು 14 teams ರಚಿಸಲಾಗಿದೆ

2. ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳು ( 50 ಪದಗಳಿಗೆ ಮೀರದಂತೆ ):

   ಎಲ್ಲಾ ಅವಶ್ಯ ಕ್ರಮ ತೆಗೆದುಕೊಳ್ಳಲಾಗಿದೆ

3. ಪ್ರತಿ COVID ಸಕಾರಾತ್ಮಕ ಪ್ರಕರಣಗಳ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ ಸಂಖ್ಯೆ

   ಸಕಾರಾತ್ಮಕ ಪ್ರಕರಣಗಳ ಸಂಖ್ಯೆ --- 469

   ಪ್ರಾಥಮಿಕ (ಹೆಚ್ಚಿನ ಅಪಾಯ) ಸಂಪರ್ಕ- - - 13963

   ದ್ವಿತೀಯ (ಕಡಿಮೆ ಅಪಾಯ) ಸಂಪರ್ಕ -- - - 5619

4. ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೇ ಸಮಗ್ರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಮಾಡಿದೆಯಾ

   ಹೌದು, ಎಲ್ಲಾ ಪಾಸಿಟೀವ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಪತ್ತೆ ಹಚ್ಚುವಿಕೆಯನ್ನು ಜಿಲ್ಲಾಡಳಿತ ಕೈಗೊಂಡಿದೆ.

5. ಕಾಂಟ್ಯಾಂಕ್ಟ್ ಟ್ರೇಸಿಂಗ್ ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (50 ಪದಗಳಿಗೆ ಮೀರದಂತೆ)

   ಯಾವುದೇ ನ್ಯೂನತೆಗಳನ್ನು ಗಮನಿಸಿರುವುದಿಲ್ಲ, ಹೆಚ್ಚಿನ ಸಲಹೆಗಳನ್ನು ನೀಡಲಾಗಿದೆ

6. ಪ್ರಾಥಮಿಕ ಸಂಪರ್ಕ ಪ್ರತ್ಯೇಕವಾಗಿರಿಸಿರುವ ಆಸ್ಪತ್ರೆಗಳು ಹಾಗೂ ಹಾಸಟ್ಟಲ್ ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ ?. ಯಾವುದೇ ಸಲಹೆಗಳಿದ್ದರೆ..

   ಹೌದು,

7. ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳು 12 ದಿನದ ಪರೀಕ್ಷೆಯನ್ನು ಮಾಡಲಾಗಿದೆಯಾ ?

<u>ಹೌದು,</u>

II. ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳು

1. ಎಲ್ಲಾ ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು, ಅವುಗಳನ್ನು ಗುರುತಿಸಿದ 28 ಗಂಟೆಗಳ ಒಳಗೆ ನೋಟಿಫೈಮಾಡಲಾಗಿದೆಯಾ

   <u>ಹೌದು, 60</u> ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳನ್ನು ಗುರುತಿಸಲಾಗಿದೆ, ಈ ವಲಯಗಳ ಜನಸಂಖ್ಯೆ 7208 ಇರುತ್ತದೆ.

2. ನೀವು ಎಲ್ಲಾ ಕಂಟೇನ್ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯಿಂದಿಗೆ ಭೇಟಿ ಮಾಡಿದ್ದೀರಾ?

   *ಪರಿಶೀಲನೆಯ ಬಗ್ಗೆ 50 ಪದಗಳನ್ನು ಮೀರದಂತೆ : ದಿನಾಂಕ 28-06-2020 ಮತ್ತು 29-06-2020 ರಂದು ರಾಯಚೂರು ತಾಲೋಕಿನ ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳಿಗೆ ಬೇಟಿ ನೀಡಿ ಪರಿಶೀಲಿಸಲಾಯಿತು. ಸೋಂಕು ಮಹಾರಾಷ್ಟ್ರ ಪ್ರಯಾಣಿಕರಲ್ಲಿ ಕಾಣಿಸಿಕೊಂಡಿದ್ದು ಇವರನ್ನು travel history ಆದಾರದಮೇಲೆ institution quarantine ಮಾಡಲಾಗಿದ್ದು, quarantine ಮಾಡಲಾಗಿರುವ ಬಹುತೇಕ ಸರ್ಕಾರಿ ವಸತಿಗಳು isolated ಸ್ಥಳದಲ್ಲಿರುತ್ತವೆ. 2 containment zone ಗಳನ್ನು de-activate ಮಾಡಲಾಗಿದೆ. ಪ್ರಸ್ತುತ 58 containment zone* ಗಳು ಕ್ರಿಯಾತ್ಮಕವಾಗಿವೆ.

3. ಕಂಟೇನ್ಮೆಂಟ್ ಮತ್ತು ಬಫರ್ ವಲಯಕ್ಕೆ Incident ಕಮಾಂಡರ್/ಎಕ್ಸಿಕ್ಯುಟೀವ್ ಮ್ಯಾಜಿಸ್ಟ್ರೇಟ್ ನೇಮಿಸಲಾಗಿದೆಯಾ

   ಹೌದು, ಎಲ್ಲಾ 60 ವಲಯಗಳಿಗೆ incident ಕಮಾಂಡರ್ ನೇಮಕ ಮಾಡಲಾಗಿದೆ

4. ಕಂಟೇನ್ಮೆಂಟ್ ವಲಯಗಳಲ್ಲಿ ಮತ್ತು ಬಫರ್ ವಲಯಗಳಲ್ಲಿ ILI /SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ? ಯಾವುದೇ ಸುಧಾರಣೆಗಳು ಅಗತ್ಯವಿದ್ದಲ್ಲಿ /ಅವಲೋಕಿದಸಿದ ಅಂಶಗಳು(50 ಪದಗಳಿಗೆ ಮೀರದಂತೆ) :

ಸೂಕ್ತ ವ್ಯವಸ್ಥೆ ಮಾಡಲಾಗಿದೆ, ಯಾವುದೇ ಹೆಚ್ಚಿನ ಸುಧಾರಣೆ ಪ್ರಸ್ತುತ ಪರಿಸ್ಥಿತಿಯಲ್ಲಿ ಅವಶ್ಯಕತೆ ಇರುವುದಿಲ್ಲ

**III.ಕೋವಿಡ್ ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು:**

1. ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಯಲ್ಲಿ ಬಾಕಿ ಉಳಿದಿದೆಯೇ? ಲ್ಯಾಬ್ ಪರೀಕ್ಷೆಗಳ ಬಗ್ಗೆ ನಿಮ್ಮ ಸಲಹೆಗಳು (50 ಪದಗಳಿಗೆ ಮೀರದಂತೆ) :

   Total 22385 samples collected, 469 cases found to be +ve, 20763 found to be –ve, about 1147 samples results awaited, 6 samples rejected. ಜಿಲ್ಲೆಯಲ್ಲಿ ಸಂಗ್ರಹಿಸುವ ಬಹುತೇಕ swab ಗಳನ್ನು ಕಲ್ಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಪರೀಕ್ಷೆಗಾಗಿ ಕಳುಹಿಸುತ್ತಿದ್ದು, ಅವುಗಳಲ್ಲಿ ಕೆಲವನ್ನು ಬೆಂಗಳೂರಿಗೆ ಕಳುಹಿಸಲಾಗುತ್ತಿದ್ದು ಇದರಿಂದ ವಿಳಂಬವಾಗುತ್ತಿದೆ. New equipment for RT-PCR tests installed, samples are being tested in the new equipments. Required number of professionals trained, ICMR protocols are followed. Its functionality improved most effectively compared to previous visit, now 300 samples are being tested daily.

2. ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ ಆರೋಗ್ಯ ಸಿಬ್ಬಂದಿಗೆ ಹೈಡ್ರಾಕ್ಸಿ ಕ್ಲೋರೋಕ್ವಿನ್ ಸಲ್ಫೇಟ್ (ಎಚ್.ಸಿ.ಕ್ಯು) ನೀಡಲಾಗಿದೆಯಾ

   ಹೌದು

3. ನೀವು ಮೀಸಲಾದ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆಮಾಡಿ ಗಮನಿಸಿದ ಅಂಶಗಳು (50 ಪದಗಳಿಗೆ ಮೀರದಂತೆ) Three major hospitals namely OPEC, RIMS and Navodaya Hospitals are modified as Covid- Hospitals. In RIMS and OPEC 350 beds are prepared for the purpose 35 ventilators are available in these two hospitals. In Navodaya Hospital 100 beds are prepared with 10 ventilators. About 60 ICUs are available for immediate use. The district administration has arranged all requirements at these Hospitals. At present 469 +ve cases are admitted in these Hospitals of which 400 patients are discharged after successful treatment.

4. ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯಾ

ಹೌದು

a. (ಎ).ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?

ಹೌದು

(ಬಿ).ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?

ಹೌದು

ಒಟ್ಟಾರೆ ವೀಕ್ಷಿಸಿದ ಅಂಶಗಳು

- ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭಿಸಿರುವ ಪ್ರಯೋಗ ಶಾಲೆ ಈಗ ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸುಮಾರು **300** ಪ್ರಕರಣಗಳ **test** ಮಾಡುತ್ತಿರುವುದು ಉತ್ತಮ ಪ್ರಗತಿಯಾಗಿದೆ.
- ಇಲ್ಲಿಯವರೆವಿಗೆ **22385** ಸ್ಯಾಂಪಲ್ ಗಳನ್ನು ಸಂಗ್ರಹಿಸಿದ್ದು **469** ಪ್ರಕರಣಗಲು ಪಾಸಿಟೀವ್ ಪಲಿತಾಂಶ ಕಂಡುಬಂದಿದ್ದು **20763** ರಲ್ಲಿ ನೆಗೆಟೀವ್ ಆಗಿರುತ್ತವೆ. **1147** ಪ್ರಕರಣಗಳ ಪಲಿತಾಂಶ ಬಂದಿರುವುದಿಲ್ಲ.
- ಎಲ್ಲಾ **469** ಪ್ರಕರಣಗಳನ್ನು ಕೋವಿಡ್ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ, ಯಶಸ್ವಿಯ ಚಿಕಿತ್ಸೆಯ ನಂತರ **400** ಪ್ರಕರಣಗಳನ್ನು ಬಿಡುಗಡೆ ಮಾಡಲಾಗಿದೆ.
- **60** ವರ್ಷಗಳಿಗೆ ಮೇಲ್ಪಟ್ಟು ವಯಸ್ಸಾದ ಪ್ರಕರಣಗಳಿಗೆ ಮತ್ತು **SARI** ಪ್ರಕರಣಗಳಿಗೆ ಹೆಚ್ಚಿನ ನಿಗಾವಹಿಸಲು ತಿಳಿಸಲಾಗಿದೆ ಹಾಗೂ ಅವಶ್ಯ **specialist** ತಂಡಗಳ ಮೂಲಕ ಚಿಕಿತ್ಸೆ ನೀಡಲು ಸೂಚಿಸಲಾಗಿದೆ.
- ಬಳಸಲಾಗುತ್ತಿರುವ ಎಲ್ಲಾ **Apps** ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು.
- ಜಿಲ್ಲಾಡಳಿತವು ಕೋವಿಡ್ ಹರುಡುವಿಕೆಯ ನಿಯಂತ್ರಣಕ್ಕೆ ಸಂಬಂಧಿಸಿದ ಎಲ್ಲಾ ಅವಶ್ಯ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡಿದೆ.

Basavaraj G 29/6/20

(ಎನ್.ಎಸ್. ಪ್ರಸನ್ನ ಕುಮಾರ್)

ಸಹಕಾರ ಸಂಘಗಳ ನಿಭಂದಕರು ಹಾಗೂ

ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಡಾ. ಎಂ.ಟಿ. ರೇಜು, ಭಾ.ಆ.ಸೇ.
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ - ಕರ್ನಾಟಕ

ಕರ್ನಾಟಕ ಸರ್ಕಾರ

Dr. M.T. Reju, I.A.S.
State Project Director
Samagra Shikshana - Karnataka

ಸಂಖ್ಯೆ: ರಾಯೋನಿ/ಆಶಾ/ಗ.ಜಿ.ಉಕಾ 01/2020-21

ದಿನಾಂಕ: 17-06-2020

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)
ಬೆಂಗಳೂರು-560001

ಮಾನ್ಯರೆ,

ವಿಷಯ:- ಗದಗ ಜಿಲ್ಲೆಯ ಜಿಲ್ಲಾಡಳಿತದೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಿದ ಸಭೆಯ ವರದಿಯನ್ನು ನಿಗಧಿತ ನಮೂನೆಯಲ್ಲಿ ಒದಗಿಸುತ್ತಿರುವ ಬಗ್ಗೆ.

ಉಲ್ಲೇಖ:-
1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಇಸಪ 2019, ದಿ:24-4-2020.
2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪತ್ರ ಸಂಖ್ಯೆ ಸಿಆಸುಇ 02 ಇಸಪ 2019 ದಿ:22-4-2020.
3) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 101 ಎಸ್ಐಎಸ್ 2020 ದಿನಾಂಕ 11-06-2020.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರ ಸರ್ಕಾರದ ಅಧಿಸೂಚನೆಯನ್ವಯ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ದಿನಾಂಕ 11-06-2020ರಂದು ಹೆಚ್ಚುವರಿಯಾಗಿ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ, ರಾಜ್ಯಾದ್ಯಂತ ದಿನಾಂಕ 18-06-2020ರಂದು ನಡೆಯಲಿರುವ ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ಇಂಗ್ಲೀಷ್ ಭಾಷಾ ಪರೀಕ್ಷೆಯ ಪೂರ್ವ ಸಿದ್ಧತೆಗಳ ನಿಮಿತ್ತ ಉಲ್ಲೇಖ-1 ಸರ್ಕಾರಿ ಆದೇಶದಂತೆ ದಿನಾಂಕ 17-06-2020ರಂದು ಗದಗ ಜಿಲ್ಲೆಯ ಜಿಲ್ಲಾಡಳಿತದೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ, ಜಿಲ್ಲೆಯಲ್ಲಿ ಕೈಗೊಂಡ ಪ್ರಗತಿ ಪರಿಶೀಲನಾ ವರದಿಯನ್ನು ಉಲ್ಲೇಖ-2 ರ ಪತ್ರದಂತೆ ಸರ್ಕಾರದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಡಾ: ಎಂ.ಟಿ. ರೇಜು, ಭಾ.ಆ.ಸೇ..
ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿ ಮಾಹಿತಿಗಾಗಿ:-
1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ- ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.



New Public Offices Annexe Building, Nrupathunga Road, Bengaluru - 560001
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು - 560001
Phone : 080-22483040, e-mail : spdssakarnataka@gmail.com, samagrakar@gmail.com

Scanned with CamScanner

I. <u>ಕೋವಿಡ್–19 ಪಾಸಿಟೀವ್ ವ್ಯಕ್ತಿಗಳ ಸಂಪರ್ಕ ಪತ್ತೆ.</u>

**1. 24 ಗಂಟೆಗಳ ಒಳಗೆ ಕೋವಿಡ್ ಪಾಸಿಟೀವ್ ವ್ಯಕ್ತಿಯ ಸಂಪರ್ಕಗಳನ್ನು ಪತ್ತೆ ಹಚ್ಚಲು ರಚಿಸಲಾದ ಸಂಪರ್ಕ(ಟ್ರೇಸಿಂಗ್) ತಂಡಗಳು ಸಾಕಷ್ಟು ಇವೆಯೇ?**

ಹೌದು. ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ತಂಡಗಳನ್ನು ರಚಿಸಲಾಗಿದೆ.

ಜಿಲ್ಲೆಯಲ್ಲಿ ಈವರೆಗೆ ಒಟ್ಟು 53 ಪ್ರಕರಣಗಳಲ್ಲಿ ಪಿ–166 ಹಾಗೂ ಪಿ–4082 ವ್ಯಕ್ತಿಗಳು ಮರಣ ಹೊಂದಿರುತ್ತಾರೆ, 41 ವ್ಯಕಿಗಳು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ಉಳಿದ 10 ಜನ ಸೋಂಕಿತರು ನಿಗಧಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 10 ಜನ ಚಿಕಿತ್ಸೆ ಪಡೆಯುತ್ತಿರುವವರ ಪೈಕಿ 9 ಜನ ಮಹಾರಾಷ್ಟ್ರ ರಾಜ್ಯದ ಪ್ರಯಾಣದ ಹಿನ್ನೆಲೆ ಇರುವವರಾಗಿರುತ್ತಾರೆ. ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚುವಲ್ಲಿ ಜಿಲ್ಲಾಡಳಿತವು ಜಾಗೃತ ರೀತಿಯಲ್ಲಿ ಕ್ರಮಕೈಗೊಂಡಿದೆ.

**2. ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ, 50 ಪದಗಳಿಗೆ ಮೀರದಂತೆ ವರದಿ**

ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚಲು, ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಜ್ಞಾಪನದ ನಿರ್ದೇಶನದಂತೆ Random testing of using RT-PCR by pooling sample technic ಬಳಸಿತಪಾಸಣೆ ಮಾಡಲು ಮತ್ತೊಮ್ಮೆ ಎಲ್ಲಾ ಅಧಿಕಾರಿಗಳಿಗೆ ಜ್ಞಾಪನದಂತೆ ಕ್ರಮ ಕೈಗೊಳ್ಳಲು ಸ್ಮರಿಸಲಾಯಿತು. ಇದಲ್ಲದೇ, ಎಲ್ಲಾ ILIs ಪ್ರಕರಣಗಳನ್ನು ವರದಿ ಮಾಡಲು ಹಾಗೂ ವರದಿಯಾದಎಲ್ಲಾ ಪ್ರಕರಣಗಳ ಗಂಟಲು ದ್ರವ ಮಾದರಿಯನ್ನು ಸಂಗ್ರಹಿಸಿ ತಪಾಸಣೆ ಮಾಡಲು ನಿರ್ದೇಶನ ನೀಡಲಾಯಿತು.

**3. ಪ್ರತಿಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ ದ್ವಿತೀಯ ಸಂಪರ್ಕಗಳ ಸಂಖ್ಯೆ:**

ಜಿಲ್ಲೆಯಲ್ಲಿ ಈವರೆಗೆ ಒಟ್ಟು 53 ಕೋವಿಡ್ ಸೋಂಕು ದೃಢಪಟ್ಟಿದ್ದು, ಇದಕ್ಕೆ ಸಂಬಂಧಿಸಿದಂತೆ 24 ಘಂಟೆಯೊಳಗೆ ಎಲ್ಲಾ 53 ಪ್ರಕರಣಗಳ ಪ್ರಥಮ ಮತ್ತು ದ್ವಿತಿಯ ಸಂಪರ್ಕಿತರನ್ನು ಪತ್ತೆ ಹಚ್ಚ ಕ್ರಮ ಕೈಗೊಂಡಿದ್ದು ವಿವರ ಈ ಕೆಳಗಿನಂತಿದೆ;

| ಒಟ್ಟು ಪ್ರಕರಣಗಳ ಸಂಖ್ಯೆ | ಪ್ರಾಥಮಿಕ ಸಂಪರ್ಕ | ದ್ವಿತೀಯ ಸಂಪರ್ಕ |
|---|---|---|
| 53 | 560 | 1721 |

**4. ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಮಾಡಿದೆಯೇ?**

ಹೌದು.

**5. ಕಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (50 ಪದಗಳಿಗೆ ಮೀರದಂತೆ ವರದಿ)**

ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿಸಲ್ಲಿಸಿ ಈ ಜಿಲ್ಲೆಗ್ಗೆ ಆಗಮಿಸುವವರ ಆರೋಗ್ಯ ತಪಾಸಣೆ ಮತ್ತು ಇತರೇ ಮಾಹಿತಿಯನ್ನು ಸಂಗ್ರಹಿಸಲು ಗದಗ ನಗರದ ಹೊಸ ಬಸ್ ನಿಲ್ದಾಣವನ್ನು ಪ್ರವೇಶ(Entry Point) ಕೇಂದ್ರವನ್ನಾಗಿ ಗುರುತಿಸಲಾಗಿದೆ. ಈವರೆಗೂ ಹೊರ ರಾಜ್ಯಗಳಿಂದ 5096 ಜನರು ಬಂದಿದ್ದು ಇವರಲ್ಲಿ 566



Scanned with CamScanner

ಜನರನ್ನು ಸಾಂಸ್ಥಿಕ ಕ್ವಾರಂಟೈನ್ ಹಾಗೂ 4530 ಜನರನ್ನು (ಗೋವಾ) ಹೋಮ್‌ಕ್ವಾರಂಟೈನ್ ಮಾಡಿಅವರ ಕೈಗೆ ಮುದ್ರೆ ಹಾಕಲಾಗಿದೆ. ಈವರೆಗೆ 5096 ವ್ಯಕ್ತಿಗಳ ಮಾಹಿತಿಯನ್ನುContact tracing App ನಲ್ಲಿ ನಮೂದಿಸಲಾಗಿದೆ. ಸದರಿ ಮಾಹಿತಿಯನ್ನು Quarantine Watch App ನಲ್ಲಿ ಜಿಲ್ಲೆಯ ಗ್ರಾಮ ಲೆಕ್ಕಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕರ ವಸೂಲಿಗಾರರು ಮನೆ ಮನೆಗೆ ತೆರಳಿ ಮಾಹಿತಿ ಕಲೆ ಹಾಕಲಾಗುತ್ತಿದೆ.

ದಿನಾಂಕ 02-06-2020 ರಿಂದ ದಿನಂಪ್ರತಿ ಮುಂಬೈಯಿಂದ ಮುಂಬೈ ಗದಗಎಕ್ಸ್‌ಪ್ರೆಸ್‌ರೈಲ್ವೆಮೂಲಕ ಬರುತ್ತಿದ್ದು, ಈ ವರೆಗೂ 780 ಜನರು ಬಂದಿದ್ದುಇದರಲ್ಲಿ 322 ಜನರು ಗದಗ ಜಿಲ್ಲೆಗೆ ಸಂಬಂಧಿಸಿದವರಾಗಿರುತ್ತಾರೆ. ಇವರನ್ನು ಬಂದ ತಕ್ಷಣ ಆರೋಗ್ಯ ತಪಾಸಣೆ ಮಾಡಿ ಸಾಂಸ್ಥಿಕ/ಹೋಮ್ ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ. ಇನ್ನುಳಿದ 458 ಜನರು ಇತರೆ ಜಿಲ್ಲೆಯವರಾಗಿದ್ದು ಇವರನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಕಳುಹಿಸಿ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಈ ಜಿಲ್ಲೆಗೆ ಸಂಬಂಧಿಸಿದ 325 ಜನರ ಪೈಕಿ 271 ಜನರ ವರದಿ ಬಂದಿದ್ದು, 260 ಜನ ನೆಗೆಟಿವ್ ಹಾಗೂ 11 ಜನರ ವರದಿ ಕೋವಿಡ್-19 ಪಾಸಿಟಿವ್ ಇರುತ್ತದೆ.

6. ಪ್ರಾಥಮಿಕಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳು ಉತ್ತಮ ಮತ್ತುಆರೋಗ್ಯಕರ ಸ್ಥಿತಿಯಲ್ಲಿವೆಯೇ?

   ಹೌದು. ಆಸ್ಪತ್ರೆ ಮತ್ತು ವಸತಿ ನಿಲಯಗಳು(ಹಾಸ್ಟಲ್) ಉತ್ತಮ ಮತ್ತುಆರೋಗ್ಯಕರ ಸ್ಥಿತಿಯಲ್ಲಿವೆ.

7. ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?

   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇತ್ತೀಚಿನ ಎಸ್.ಒ.ಪಿ ನಿರ್ದೇಶನದಂತೆ ಸಾಂಸ್ಥಿಕ/ಗೃಹ ಕ್ವಾರಂಟೈನ್ನಲ್ಲಿ ಇರುವ ಎಲ್ಲರನ್ನೂ ಕೋವಿಡ್-19 ಪರೀಕ್ಷೆಗೆ ಒಳಪಡಿಸಿ ಕೊರೋನಾ ಸೋಂಕು ಇಲ್ಲದಿರುವ ಬಗ್ಗೆ ವರದಿ ಬಂದಲ್ಲಿ, ಅಂತಹವರನ್ನು ಮನೆಗೆ ಕಳುಹಿಸಲಾಗುತ್ತಿದೆ.

## II. ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳು.

1. ಎಲ್ಲಾ ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?

   ಹೌದು.

   ಗದಗ ಜಿಲ್ಲೆಯಲಿ ಈವರೆಗೆ ಮೂಲತ: ಗದಗ ಜಿಲ್ಲೆಯಿಂದ ಪತ್ತೆಯಾಗಿರುವ ಕೋವಿಡ್-19 ಪಾಸಿಟೀವ್ ಕೇಸ್‌ಗಳಿದ್ದ ನಿರ್ಬಂಧಿತ ವಲಯಗಳಿಂದ ಯಾವುದೇ ಹೊಸ ಪ್ರಕರಣಗಳು ವರದಿಯಾಗದೇ ಇರುವುದರಿಂದ ಹಳೆಯ ನಿರ್ಬಂಧಿತ ವಲಯಗಳನ್ನು (Containment Zone) ಡಿನೋಟಿಫೈ ಮಾಡಲಾಗಿದೆ. ಆದರೆ, ಹೊಸದಾಗಿ ಕೋವಿಡ್-19 ಪಾಸಿಟೀವ್ ಕೇಸ್‌ಗಳು ವರದಿಯಾಗಿರುವ 7 ಪ್ರದೇಶಗಳನ್ನು ನಿರ್ಬಂಧಿತ ವಲಯಗಳೆಂದು ಜಿಲ್ಲಾಡಳಿತ ಘೋಷಿಸಿದ್ದು, ಕಂಟೈನ್‌ಮೆಂಟ್ ಝೋನ್ ಆ್ಯಪ್ ಮೂಲಕ ಒಟ್ಟು 2105 ಮನೆಗಳ ಪ್ರಾರಂಭಿಕ ಮಾಹಿತಿ ಹಾಗೂ ದೈನಂದಿನ ಆರೋಗ್ಯ ತಪಾಸಣೆ ಇಲ್ಲಿಯವರೆಗೂ ನಡೆಸಲಾಗಿದೆ.



Scanned with CamScanner

2. ನೀವು ಎಲ್ಲಾಕಂಟೈನ್ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನುಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿಮಾಡಿದ್ದಿರಾ?

ಸರ್ಕಾರದ ಅಧಿಸೂಚನೆಯನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ದಿನಾಂಕ 11-06-2020ರಂದು ಹೆಚ್ಚುವರಿಯಾಗಿ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ, ರಾಜ್ಯಾದ್ಯಂತ ದಿನಾಂಕ 18-06-2020ರಂದು ನಡೆಯಲಿರುವ ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ಇಂಗ್ಲೀಷ್ ಭಾಷಾ ಪರೀಕ್ಷೆಯ ಪೂರ್ವ ಸಿದ್ಧತೆಗಳ ನಿಮಿತ್ತ ದಿನಾಂಕ 17-06-2020 ರಂದು ಗದಗ ಜಿಲ್ಲೆಯ ಜಿಲ್ಲಾಡಳಿತದೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತ್ರ ಸಭೆ ನಡೆಸಿ ವರದಿ ಸಲಾಗುತ್ತಿರುವುದರಿಂದ ಮುಂದಿನ ಪ್ರವಾಸದಲ್ಲಿ ಭೇಟಿ ಮಾಡಿ ಪರಿಶೀಲಿಸಲಾಗುವುದು.

3. ಕಂಟೇನ್ಮೆಂಟ್ ಮತ್ತು ಬಫರ್ ವಲಯಕ್ಕೆ **Incident** ಕಮಾಂಡರ/ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?

ಹೌದು.

4. ಕಂಟೇನ್ಮೆಂಟ್ ಮತ್ತು ಬಫರ್ ವಲಯಗಳಲ್ಲಿILIs/SARIಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?

ಹೌದು.

ದಿನಾಂಕ:04-05-2020 ರಂದು (P-639) ಹಾಗೂ ದಿನಾಂಕ: 05-05-2020 ರಂದು (P-672) ಸವಣೂರು ಪಟ್ಟಣದ ಎಸ್. ಎಂ ಕೃಷ್ಣಾ ನಗರದಲ್ಲಿ ತಾಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿದ್ದು, Containment and Buffer Zone(CZ-1) ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ಸವಣೂರು ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ ಹಾಗೂ ದಿನಾಂಕ:22-05-2020 ರಂದು (P-1689) ಹೊಸ ಪ್ರಕರಣ ಪತ್ತೆಯಾಗಿದ್ದು, ತಹಶೀಲ್ದಾರ ಸವಣೂರು ಇವರನ್ನು Incident Commander ಅಂತಾ ನೇಮಿಸಿ ಮುಂದುವರೆಸಲಾಗಿರುತ್ತದೆ.

ದಿನಾಂಕ:11-05-2020 ರಂದು ಶಿಗ್ಗಾಂವ ತಾಲ್ಲೂಕ ಅಂದಲಗಿ ಗ್ರಾಮದಲ್ಲಿ ಒಂದು(P-853) ಪ್ರಕರಣ ಪತ್ತೆಯಾಗಿದ್ದು, Containment and Buffer Zone(CZ-2) ಗಳನ್ನು ಮಾಡಲಾಗಿರುತ್ತದೆ ಹಾಗೂ ಉಪ ವಿಭಾಗಾಧಿಕಾರಿಗಳು ಸವಣೂರು ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:22-05-2020 ರಂದು P-1690 ಸವಣೂರು ತಾಲ್ಲೂಕು ಯಲವಿಗಿ ಗ್ರಾಮ ಹಾಗೂ P-1691 ಬಂಗಾಪುರ ಪಟ್ಟಣದಲ್ಲಿ ತಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿದ್ದು, Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ಸವಣೂರು ಮತ್ತು ತಹಶೀಲ್ದಾರ ಶಿಗ್ಗಾಂವ ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:28-05-2020 ರಂದು ರಾಣೇಬೆನ್ನೂರು ತಾಲ್ಲೂಕ ಮಾಕನೂರು ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ P-2494, P-2495, P-2496, P2497 ಪ್ರಕರಣಗಳು

ಪತ್ತೆಯಾಗಿರುತ್ತವೆ Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ರಾಣೇಬೆನ್ನೂರು ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:29-05-2020 ರಂದು ರಾಣೇಬೆನ್ನೂರಿನ ಈಶ್ವರ ನಗರದ ಡಿ. ದೇವರಾಜ ಅರಸು ಪೋಸ್ಟ್ ಮೆಟ್ರಿಕ್ ಬಾಲಕಿಯವ ವಸತಿ ನಿಲಯದಲ್ಲಿ P-2856, P-2857, P-2858, P-2859 ಪ್ರಕರಣಗಳು ಪತ್ತೆಯಾಗಿರುತ್ತವೆ Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ರಾಣೇಬೆನ್ನೂರು ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:31-05-2020 ರಂದು P-3271 ಹಾಗೂ ದಿನಾಂಕ:02-06-2020 ರಂದು P-3668 ಹಾಗೂ ದಿನಾಂಕ:04-06-2020 ರಂದು 4534 ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆ ಜಕ್ಕಿನಕಟ್ಟಿ ತಾ:ಶಿಗ್ಗಾಂವ ನಲ್ಲಿ ಪ್ರಕರಣಗಳು ಪತ್ತೆಯಾಗಿರುತ್ತವೆ Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ಶಿಗ್ಗಾಂವ ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:22-05-2020 ರಂದು P-1691 ಹಾಗೂ 04-06-2020 ರಂದು P-4533 ಬಂಗಾಪುರ ಪಟ್ಟಣದಲ್ಲಿ ಪತ್ತೆಯಾಗಿದ್ದು, Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ಶಿಗ್ಗಾಂವ ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

ದಿನಾಂಕ:05-06-2020 ರಂದು P-5002, P-5003 ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಹಾವೇರಿಯಲ್ಲಿ ಹಾಗೂ P-5004 ಗುತ್ತಲ ಪಟ್ಟಣದ ಕಲಾಲ್ ಪ್ಲಾಟ್ ನಲ್ಲಿ ಪತ್ತೆಯಾಗಿದ್ದು, Containment and Buffer Zone ಗಳನ್ನು ಮಾಡಲಾಗಿರುತ್ತದೆ ಹಾಗೂ ತಹಶೀಲ್ದಾರ ಹಾವೇರಿ ಇವರನ್ನು Incident Commander ಅಂತಾ ನೇಮಿಸಲಾಗಿರುತ್ತದೆ.

Containment Zone ಹಾಗೂ Buffer Zone ನಲ್ಲಿ ಇಲ್ಲಿಯವರೆಗೆ ಪ್ರತಿ ದಿನ Survey ನಡೆಯುತ್ತಿರುತ್ತದೆ. ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರುವುದಿಲ್ಲ.

**Discharge Details:**

P-639, P-672, P-853 P-1689, P-1690, P-1691, P-2494, P-2496, P-2497, P-2856, P-2857, P-2858, P-2859, P-3271 ಒಟ್ಟು 14 ರೋಗಿಗಳು ಸಂಪೂರ್ಣ ಗುಣಮುಖರಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ.

**8. Availability of Money under SDRF and Health:**

ಜಿಲ್ಲೆಯಲ್ಲಿ SDRF ನಲ್ಲಿ ಒಟ್ಟು ರೂ. 2.10 ಕೋಟಿಗಳು ಶಿಲ್ಕು ಇದ್ದು, ಸದರಿ ಅನುದಾನವು ನೆರೆಹಾವಳಿಯಿಂದ ಹಾನಿಗೊಂಡ ಕಾಮಗಾರಿಗಳು ಮತ್ತು ಪರಿಹಾರದ ಕಾರ್ಯಕ್ಕೆ ಕಾಯ್ದಿರಿಸಿದ ಅನುದಾನವಾಗಿರುತ್ತದೆ. ಈ ಅನುದಾವನ್ನು ಹಾಲಿ ಕೊವಿಡ್-19 ವೆಚ್ಚಗಳಿಗೆ ಬಳಸಲಾಗುತ್ತಿದೆ.

9.Protection of frontline staff:

a. Health.

ಗಂಟಲು ದ್ರವದ ಮಾದರಿ ತೆಗೆಯುವ ಸಿಬ್ಬಂದಿಗಳಿಗೆ ಮತ್ತು ಐಸೊಲೆಶನ್ ವಾರ್ಡಿನಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯಾಧಿಕಾರಿಗಳು ಮತ್ತು ಸ್ಟಾಪ್ ನರ್ಸ್ ಗಳಿಗೆ PPE Kit ಗಳನ್ನು ಒದಗಿಸಲಾಗಿರುತ್ತದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ N-95 ಮಾಸ್ಕ ಹ್ಯಾಂಡ್ ಗ್ಲೌಸ್ ಹಾಗೂ ಸಿಬ್ಬಂದಿಗಳಿಗೆ Triple Layer ಮಾಸ್ಕ ಗಳನ್ನು ಅವಶ್ಯಕತೆ ಅನುಗುವಾಗಿ ವಿತರಿಸಲಾಗಿದೆ. ಅಲ್ಲದೆ ಕ್ಷೇತ್ರ ಮಟ್ಟದಲ್ಲಿ ಮನೆ ಮನೆಗಳಿಗೆ ಭೇಟಿ ನೀಡುವ ಆರೋಗ್ಯ ಸಹಾಯಕರು ಮತ್ತು ಆಶಾ ಕಾರ್ಯಕರ್ತೆಯರಿಗೆ ಹ್ಯಾಂಡ್ ಸ್ಯಾನಿಟೈಸರ್ ಮತ್ತು ಮಾಸ್ಕ ಗಳನ್ನು ವಿತರಿಸಲಾಗಿದೆ.

b. Municipalities.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ Triple Layer ಮಾಸ್ಕ ಮತ್ತು ಹ್ಯಾಂಡ್ ಗ್ಲೌಸ್ ಹಾಗೂ ಗಮ್ ಬೂಟುಗಳನ್ನು ನೀಡಲಾಗಿದೆ. ಅವಶ್ಯಕತೆ ಇದ್ದಲ್ಲಿ ಸುರಕ್ಷತೆಗಾಗಿ ಹೆಲ್ಮೆಟ್ ಗಳನ್ನು ನೀಡಲಾಗುತ್ತಿದೆ. ರೋಗ ಹರಡುವಿಕೆಯನ್ನು ತಡೆಗಟ್ಟಲು ಕೈಕೊಳ್ಳಬೇಕಾದ ಮುನ್ನೆಚರಿಕೆ ಕ್ರಮಗಳ ಬಗ್ಗೆ ಪೌರಕಾರ್ಮಿಕರಿಗೆ ಸೂಕ್ತ ತಿಳುವಳಿಕೆಯನ್ನು ಸಹ ನೀಡಲಾಗಿದೆ.

c.Police.

ಪೊಲೀಸ್ ಇಲಾಖೆಯ ಅಧಿಕಾರಿಗಳು/ ಸಿಬ್ಬಂದಿಗಳಿಗೆ Triple Layer ಮಾಸ್ಕ ಹಾಗೂ ಹ್ಯಾಂಡ್ ಸ್ಯಾನಿಟೈಸರ್ ಗಳನ್ನು ನೀಡಲಾಗಿದೆ.

10. Migrants Labour and Homeless:

ವಲಸೆ ಕಾರ್ಮಿಕರಿಗೆ ಹಾಗೂ ನಿರ್ಗತಿಕರಿಗೆ ವಸತಿ, ಊಟ ಇತ್ಯಾದಿ ಸೌಕರ್ಯ ಕಲ್ಪಿಸುವ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡಲು ಜಂಟಿ ಕೃಷಿ ನಿರ್ದೇಶಕರು ಮತ್ತು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 1066 ವಲಸೆ ಕಾರ್ಮಿಕರು ಇರುತ್ತಾರೆ ಇವರಿಗೆ 12 ವಿವಿಧ ಜಾಗೆಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗಿದೆ ಪ್ರತಿ ದಿವಸ ಆಹಾರ ದಾನ್ಯದ ಪೊಟ್ಟಣ, ಊಟ, ಹಾಲನ್ನು ಪೂರೈಸಲಾಗುತ್ತಿದೆ ಹಾಗೂ ಪ್ರತಿ ದಿವಸ ವೈದ್ಯಕೀಯ ಚಿಕಿತ್ಸೆಯನ್ನು ಕೈಕೊಳ್ಳಲಾಗುತ್ತಿದೆ. 1066 ವಲಸೆ ಕಾರ್ಮಿಕರ ಪೈಕಿ 573 ಜನರಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.

11. Essential Commodities- APMC/ Cocoon Markets/ Groceries/ Retail Shops/ Agricultural Operations:

ಜಿಲ್ಲೆಯಲ್ಲಿ ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಆಟ್ಟಾ, ರಾಗಿ, ಜೋಳ,ತೊಗರಿಬೇಳೆ, ಹೆಸರುಕಾಳು, ಅಲಸಂದಿ, ಕಡ್ಲೆಕಾಳು ಮತ್ತು ಖಾದ್ಯತೈಲ, ಕೂಕುನ್, ಮಾರ್ಕೆಟ್ ಮತ್ತು ದಿನಸಿ ವಸ್ತುಗಳು ಕೊರತೆ ಇರುವುದಿಲ್ಲ, ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುತ್ತದೆ.(ವಿವರವಾದ

ಮಾಹಿತಿಯನ್ನು ಲಗತ್ತಿಸಿದೆ) ಗ್ರಾಹಕರಿಗೆ ದಿನಸಿ ವಸ್ತುಗಳು ದೊರಕುವ ವ್ಯವಸ್ಥೆ ಮಾಡಲಾಗಿದೆ ಯಾವುದೇ ತೊಂದರೆ ಇರುವುದಿಲ್ಲ.

ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ತರಕಾರಿಗಳು ಅವಶ್ಯವಿರುವಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ಚಿಲ್ಲರೆ ಮಾರಾಟಗಾರರಿಗೆ ಮತ್ತು ಗ್ರಾಹಕರಿಗೆ ಅವಶ್ಯಕತೆ ಇರುವಷ್ಟು ಪೂರೈಸಲಾಗುತ್ತಿದೆ. ಯಾವುದೇ ಕೊರತೆ ಉಂಟಾಗಿರುವುದಿಲ್ಲ.

## Cocoon Market

ಜಿಲ್ಲೆಯಲ್ಲಿ 2356 ಜನ ರೇಷ್ಮೆ ಬೆಳೆಗಾರರಿದ್ದು, ವಾರ್ಷಿಕ 1109 ಟನ್ ಗೂಡು ಉತ್ಪಾದನೆ ಮಾಡಿ ಸ್ಥಳೀಯವಾಗಿ ಹಾಗೂ ರಾಮನಗರ ಮತ್ತು ಕೊಲಾರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ವಿಲೆವಾರಿ ಮಾಡುತ್ತಿದ್ದಾರೆ ಪ್ರಸ್ತುತ ಲಾಕ್ ಡೌನ್ ಆದೇಶ ಆದ ನಂತರ ರೇಷ್ಮೆ ಬೆಳೆಗಾರರು ಒಟ್ಟು 141.41ಟನ್ ಗೂಡು ಉತ್ಪಾದನೆ ಮಾಡಿ ಸ್ಥಳೀಯವಾಗಿ 19.92 ಟನ್ ಹಾಗೂ 121.49 ಟನ್ ಗಳನ್ನು ವಿಲೇವಾರಿ ಮಾಡಲು ಅವಶ್ಯವಾದ ಪಾಸ್ ಗಳನ್ನು ಜಿಲ್ಲಾಧಿಕಾರಿಗಳ ಮೂಲಕ ರೇಷ್ಮೆ ಬೆಳಗಾರರಿಗೆ ವಿತರಿಸಿ ಗೂಡುಗಳನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದ್ದು, ರೇಷ್ಮೆ ಬೆಳೆಗಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

## Agricultural Operations:

### ಕೃಷಿ ಪರಿಕರ ಸರಬರಾಜು ಹಾಗೂ ವಿತರಣೆ ಮಾಹಿತಿ

| ಕ್ರ ಸಂ | ಪರಿಕರದ ಹೆಸರು | 2020-2021 ನೇ ಸಾಲಿನ ಮುಂಗಾರು ಹಂಗಾಮಿನ ಬೇಡಿಕೆ (ಏಪ್ರಿಲ್ - ಸಪ್ಟಂಬರ್) | ದಾಸ್ತಾನು | ಸರಬರಾಜು | ವಿತರಣೆ | ಉಳಿಕೆ |
|---|---|---|---|---|---|---|
| 1 | ಬಿತ್ತನೆ ಬೀಜ (ಕ್ವಿಂಟಾಲಗಳಲ್ಲಿ) | 54050 | 10308 | 41700 | 20048 | 31960 |
| 2 | ರಸಗೊಬ್ಬರ (ಟನ್‌ಗಳಲ್ಲಿ) | | | | | |
| | ಯೂರಿಯಾ | 48200 | 6977 | 21601 | 7868 | 20710 |
| | ಡಿ.ಎ.ಪಿ. | 21720 | 12065 | 25502 | 9132 | 28435 |
| | ಎಂ.ಒ.ಪಿ | 4478 | 1735 | 4388 | 1090 | 5033 |
| | ಕಾಂಪ್ಲೆಕ್ಸ್ | 29650 | 8616 | 22692 | 8548 | 22760 |
| | ಎಸ್ ಎಸ್ ಪಿ | 1810 | 445 | 527 | 0 | 972 |
| | ಒಟ್ಟು | **105858** | **29836** | **74710** | **26638** | **77908** |
| 3 | ಕೀಟನಾಶಕ (ಲೀಟರ್‌ಗಳಲ್ಲಿ) | 391500 | 28950 | 6655 | 515 | 35090 |

12. Periodical updating of Data to State/ Monitoring tool:

ಜಿಲ್ಲಾ ಮಾಹಿತಿ ಅಧಿಕಾರಿಗಳು NIC ಇವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿದೆ ಪ್ರತಿದಿನ ಅಂಕಿ ಸಂಖ್ಯೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ
ನಿಯಮಿತ, ಬೆಂಗಳೂರು ಹಾಗೂ
ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಶ್ರೀ ಶಿವಯೋಗಿ ಸಿ. ಕಳಸದ ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ಸಂಸ್ಥೆ. ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು(ಕೋವಿಡ್-19), ಬಾಗಲಕೋಟೆ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ದಿ:05-06-2020 ರಂದು ಸಂಜೆ 04-00 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಹರಡದಂತೆ ನಿಯಂತ್ರಣ ಕ್ರಮಗಳ ಕುರಿತು ಹಾಗೂ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ನಡೆಸಿದ ಪರಿಶೀಲನಾ ಸಭೆಯ ನಡುವಳಿಗಳು.

## ಹಾಜರಿದ್ದ ಅಧಿಕಾರಿಗಳು.

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ.
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ.
4. ಉಪ ವಿಭಾಗಾಧಿಕಾರಿಗಳು, ಬಾಗಲಕೋಟೆ, ಜಮಖಂಡಿ
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬಾಗಲಕೋಟೆ
6. ಜಿಲ್ಲಾ ಶಸ್ತ್ರತಜ್ಞರು, ಬಾಗಲಕೋಟೆ.
7. ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳು, ಬಾಗಲಕೋಟೆ.
8. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಾಗಲಕೋಟೆ.
9. ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಬಾಗಲಕೋಟೆ.
10. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಾಗಲಕೋಟೆ.
11. ಉಪ ನಿರ್ದೇಶಕರು, ಪಶು ಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ, ಬಾಗಲಕೋಟೆ
12. ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬಾಗಲಕೋಟೆ.
13. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಾಗಲಕೋಟೆ.
14. ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಬಾಗಲಕೋಟೆ.
15. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಾಗಲಕೋಟೆ.
16. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಾಗಲಕೋಟೆ.
17. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ.
18. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ.
19. ಉಪ ನಿರ್ದೇಶಕರು, ಪದವಿ ಪೂರ್ವ ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ.
20. ವಿಭಾಗಿಯ ನಿಯಂತ್ರಣಾಧಿಕಾರಿ, ವಾಕರಸಾಸಂಸ್ಥೆ, ಬಾಗಲಕೋಟೆ ವಿಭಾಗ.
21. ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು.

ಅಪರ ಜಿಲ್ಲಾಧಿಕಾರಿಗಳು, ಸಭೆಗೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸ್ವಾಗತಿಸಿ, ಸಭೆಗೆ ಆಗಮಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಅಧ್ಯಕ್ಷರಲ್ಲಿ ಕೋರಿದರು. ಸಭೆಯನ್ನು ಪ್ರಾರಂಭಿಸಿ ಕೋವಿಡ್-19 ನಿಯಂತ್ರಣಕ್ಕಾಗಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿಯು ಇಲ್ಲಿಯವರೆಗೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲು ಸೂಚಿಸಲಾಯಿತು.

ಪ್ರಥಮವಾಗಿ ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ನಾಲ್ಕು ಚೆಕ್‌ಪೋಸ್ಟ್‌ಗಳು ಇದ್ದು, ಇದರಲ್ಲಿ ದಿನಾಂಕ:01-06-2020 ರವರೆಗೆ 55,578 ವಾಹನಗಳ ತಪಾಸಣೆ ಮಾಡಲಾಗಿ ಒಟ್ಟು 2,14,730 ಜನರನ್ನು ಥರ್ಮಲ್ ಸ್ಕ್ರೀನಿಂಗ್ ಮಾಡಲಾಗಿದೆ ಎಂದು ತಿಳಿಸಿದರು. ಅಲ್ಲದೇ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾಡುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ವಲಸೆ ಕಾರ್ಮಿಕರು ನಡೆದುಕೊಂಡು ಹೋಗದಂತೆ ನೋಡಿಕೊಳ್ಳುವುದು ಮತ್ತು ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಊಟದ ವ್ಯವಸ್ಥೆ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಲಾಯಿತು. ಅದೇ ರೀತಿ ಜಿಲ್ಲೆಯಲ್ಲಿ ವಲಸೆ ಬಂದ ಕಾರ್ಮಿಕರಿಗೆ ಕೂಲಿ ಕೆಲಸ ನೀಡುವಂತೆ ತಿಳಿಸಲಾಯಿತು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೋವಿಡ್-19 ಸಹಾಯವಾಣಿ ಕೇಂದ್ರ 24*7 ತೆರೆಯಲಾಗಿದ್ದು ಟೋಲ್ ಫ್ರೀ ಸಂಖ್ಯೆ 1077 ಹಾಗೂ ದೂರವಾಣಿ ಸಂಖ್ಯೆ 08354-236240 ಇದ್ದು, ಅದಕ್ಕೆ ಸಿಬ್ಬಂದಿ ಹಾಗೂ ನೋಡಲ್ ಅಧಿಕಾರಿಯನ್ನು ನೇಮಿಸಿದ್ದು, ಸಾರ್ವಜನಿಕರು ಕೋವಿಡ್-19 ಸಂಬಂಧಿಸಿದಂತೆ ಕುಂದುಕೊರತೆ ಹಾಗೂ ಸಲಹೆಗಳನ್ನು ನೀಡಲು ತಿಳಿಸಲಾಗಿದೆ. ದಿನಾಂಕ:05-06-2020ರ ಮಧ್ಯಾಹ್ನದವರೆಗೆ 604 ದೂರವಾಣಿ ಕರೆಗಳು ಸ್ವೀಕೃತವಾಗಿದ್ದು, ಎಲ್ಲಾ ಕರೆಗಳ ಆಕ್ಷೇಪಣೆಗಳಿಗೆ, ಸಂಬಂಧಿಸಿದ ಅಧಿಕಾರಿಗಳಿಂದ ಪರಿಹಾರ ಕಲ್ಪಿಸಲಾಗಿದೆ ಹಾಗೂ ಜಿಲ್ಲೆಯಲ್ಲಿ ವೈದ್ಯಕೀಯ ಸಿಬ್ಬಂದಿ ಯಾವುದೇ ಕೊರತೆ ಇರುವುದಿಲ್ಲವೆಂದು ಹಾಗೂ ಸಿಬ್ಬಂದಿಯವರಿಗೆ ಪಿ.ಪಿ ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯೆಂದು ಗುರುತಿಸಿ ಘೋಷಿಸಲಾಗಿದೆ. ಆಸ್ಪತ್ರೆಯಲ್ಲಿ 257 ಹಾಸಿಗೆಗಳನ್ನು ಸಿದ್ಧಪಡಿಸಿದ್ದು, 9 ವೆಂಟಿಲೇಟರ್‌ಗಳು ಲಭ್ಯ ಇರುತ್ತವೆ. ಅಲ್ಲದೇ, 23 ಹಾಸಿಗೆಗಳಿಗೆ ಐಸಿಯು ಸಂಪರ್ಕ ಕಲ್ಪಿಸಲಾಗಿದೆ. ಸದ್ಯ, ಆಸ್ಪತ್ರೆಯಲ್ಲಿ 16 ಕೋವಿಡ್-19 ಸೋಂಕಿತ ವ್ಯಕ್ತಿಗಳು ಚಿಕಿತ್ಸೆ ಪಡೆಯುತ್ತಿದ್ದು, ಎಲ್ಲರೂ ಆರೋಗ್ಯದಿಂದ ಇದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ 14 ಜ್ವರದ ಕ್ಲಿನಿಕ್‌ಗಳನ್ನು ಪ್ರಾರಂಭಿಸಲಾಗಿದ್ದು, ಕ್ಲಿನಿಕ್‌ಗಳಲ್ಲಿ ಈವರೆಗೆ 13,005 ಜನರ ಸ್ಕ್ರೀನಿಂಗ್ ಮಾಡಿದ್ದು, ಜಿಲ್ಲೆಯಲ್ಲಿ ಔಷಧಿಗಳ ದಾಸ್ತಾನುಗಳು ಸಮರ್ಪಕವಾಗಿದ್ದು, ಮುಂಬರುವ ದಿನಗಳಿಗೆ ಅವಶ್ಯವಿರುವ ಔಷಧ ಹಾಗೂ ಉಪಕರಣಗಳ ಬೇಡಿಕೆಯನ್ನು ಈಗಾಗಲೇ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

ಜಿಲ್ಲೆಯಲ್ಲಿ ದಿನಾಂಕ:05-06-2020 ರವರೆಗೆ ಒಟ್ಟು 8,627 ಮಾದರಿಗಳನ್ನು ಪಡೆದು ಪರೀಕ್ಷೆಗೆ ಸಲ್ಲಿಸಲಾಗಿದ್ದು, ಈ ಪೈಕಿ 8,354 ಮಾದರಿಗಳು ನೆಗೆಟಿವ್ ಎಂದು, 91 ಮಾದರಿಗಳು ಪಾಸಿಟಿವ್ ಎಂದೂ ವರದಿ ಬಂದಿದ್ದು, ಇನ್ನೂ 146 ಮಾದರಿಯ ವರದಿಯು ನಿರೀಕ್ಷೆಯಲ್ಲಿರುತ್ತವೆ. ಅಲ್ಲದೇ, 13 ಮಾದರಿಗಳು ತಿರಸ್ಕೃತವಾಗಿರುತ್ತವೆ. ಸದ್ಯ, 790 ವ್ಯಕ್ತಿಗಳು ಹೋಮ್ ಕ್ವಾರಂಟೈನ್‌ನಲ್ಲಿ ಇರುತ್ತಾರೆ. ಒಟ್ಟು ಪಾಸಿಟೀವ್ ಎಂದು ವರದಿಯಾದ 91 ಪ್ರಕರಣಗಳ ಪೈಕಿ, ಒಬ್ಬ ವ್ಯಕ್ತಿಯು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ: 03-04-2020 ರಂದು ರಾತ್ರಿ ಮರಣ ಹೊಂದಿರುತ್ತಾರೆ. ನಿಯಮಾನುಸಾರ 14 ದಿನಗಳ ಅವಧಿ ಮುಗಿದು ರಕ್ತದ ಮಾದರಿ

ನೆಗೆಟಿವ್ ಎಂದು ವರದಿ ಬಂದ 74 ವ್ಯಕ್ತಿಗಳನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿ, ಇನ್ನೂ 14 ದಿನಗಳ ಹೋಮ್ ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ ಎಂದು ವಿವರಿಸಿದರು.

ಜಿಲ್ಲೆಯಲ್ಲಿ ದಿನಾಂಕ:05-06-2020 ರವರೆಗೆ ಒಟ್ಟು 91 ಪಾಸಿಟಿವ್ ಪ್ರಕರಣಗಳು, ಬಾಗಲಕೋಟೆ ನಗರದಲ್ಲಿ 16, ಮುಧೋಳ ತಾಲ್ಲೂಕಿನಲ್ಲಿ 34, ಜಮಖಂಡಿ ತಾಲ್ಲೂಕಿನಲ್ಲಿ 11, ಬೀಳಗಿ ತಾಲ್ಲೂಕಿನಲ್ಲಿ 04 ಹಾಗೂ ಬಾದಾಮಿ ತಾಲ್ಲೂಕಿನಲ್ಲಿ 04 ವರದಿಯಾಗಿರುತ್ತವೆ. ಸದರಿ ಪ್ರಕರಣಗಳು ಕಂಡುಬಂದ ವ್ಯಕ್ತಿಗಳು ವಾಸಿಸುವ ಸ್ಥಳದಿಂದ 100 ಮೀಟರ್ ಪರಿಧಿ ಪ್ರದೇಶವನ್ನು ಕಂಟೈನ್‌ಮೆಂಟ್ ಝೋನ್ ಎಂದು ಹಾಗೂ ನಗರ ಪ್ರದೇಶದಲ್ಲಿ 5 ಕಿ.ಮೀ., ಮತ್ತು ಗ್ರಾಮೀಣ ಪ್ರದೇಶದಲ್ಲಿ 7 ಕಿ.ಮೀ., ಪರಿಧಿ ಪ್ರದೇಶವನ್ನು ಬಫರ್ ಝೋನ್ ಎಂದು ಗುರುತಿಸಲಾಗಿದೆ.

ಜಿಲ್ಲೆಯಲ್ಲಿ ಕಂಡುಬಂದ ಒಟ್ಟು 91 ಪ್ರಕರಣಗಳ ಪೈಕಿ, ಪುರುಷರು 61, ಮಹಿಳೆಯರು 30 ಜನರಿಗೆ ಸೋಂಕು ಹರಡಿದೆ. ಇವುಗಳ ಪೈಕಿ 05 ವರ್ಷಕ್ಕಿಂತ ಕಡಿಮೆ ವಯಸ್ಸಿನ 02 ಮಕ್ಕಳಿಗೆ, 06-10 ವರ್ಷದೊಳಗಿನ 02 ಮಕ್ಕಳಿಗೆ, 11-20 ವರ್ಷದೊಳಗಿನ 21 ಜನರಿಗೆ, 21-30 ವರ್ಷದೊಳಗಿನ 20 ಜನರಿಗೆ, 31-40 ವರ್ಷದೊಳಗಿನ 20 ಜನರಿಗೆ, 41-50 ವರ್ಷದೊಳಗಿನ 13 ಜನರಿಗೆ, 51-60 ವರ್ಷದೊಳಗಿನ 07 ಜನರಿಗೆ ಹಾಗೂ 61 ವರ್ಷ ಮೇಲ್ಪಟ್ಟ 06 ಜನರಿಗೆ ಸೋಂಕು ಹರಡಿದೆ.

ಜಿಲ್ಲೆಯಲ್ಲಿ ಕಂಡುಬಂದ 91 ಪ್ರಕರಣಗಳ ಪೈಕಿ ಮಹಾರಾಷ್ಟ್ರದಿಂದ 14 ಜನರಿಗೆ, ಗುಜರಾತ್‌ನಿಂದ 16 ಜನರಿಗೆ, ಮೈಸೂರಿನಿಂದ ಒಬ್ಬರಿಗೆ, ಐಎಲ್‌ಐ ಹಾಗೂ ಸಾರಿ 03, ಪ್ರಾಥಮಿಕ ಸಂಪರ್ಕದಿಂದ 47 ಹಾಗೂ ಮಾಧ್ಯಮಿಕ ಸಂಪರ್ಕದಿಂದ 07 ಪ್ರಕರಣಗಳು ಪಾಸಿಟಿವ್ ಎಂದು ಕಂಡುಬಂದಿವೆ.

ಜಿಲ್ಲೆಯಲ್ಲಿ ಪ್ರಸ್ತುತ ಬಾದಾಮಿ ತಾಲ್ಲೂಕಿನ ಢಾಣಕಶಿರೂರ ಹಾಗೂ ಮುಧೋಳ ಪಟ್ಟಣದ ಸೈದಾಪೂರ ವಡ್ಡರ ಗಲ್ಲಿಗಳಲ್ಲಿ ಮಾತ್ರ ಕಂಟೈನ್‌ಮೆಂಟ್ ಝೋನ್‌ಗಳ ಅವಧಿ ಇನ್ನೂ ಮುಗಿದಿರುವದಿಲ್ಲ. ಉಳಿದ 11 ಕಂಟೈನ್‌ಮೆಂಟ್ ಝೋನ್‌ಗಳನ್ನು ಸರ್ಕಾರದ ನಿಯಮಾನುಸಾರ ಡಿ-ನೋಟಿಫಿಕೇಶನ್ ಮಾಡಲಾಗಿದೆ.

ಆ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳಿಗೆ ದಿನಸಿ, ತರಕಾರಿ, ಹಣ್ಣು-ಹಂಪಲು, ಹಾಲು, ಔಷಧಿಗಳನ್ನು ಬೇಡಿಕೆ ಅನುಸಾರ ನಿಗದಿಪಡಿಸಿದ ವ್ಯಾಪಾರಸ್ಥರಿಂದ ಮನೆಬಾಗಿಲಿಗೆ ತಲುಪಿಸುವ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಸ್ಥಳೀಯ ಸಂಸ್ಥೆಗಳ ಮೂಲಕ ಆ ಪ್ರದೇಶದಲ್ಲಿ ಹೈಪೋಕ್ಲೋರೊಲೈಟ್ ದ್ರಾವಣವನ್ನು ಪ್ರತಿ 2 ದಿನಕೊಮ್ಮೆ ಸಿಂಪಡಿಸಿ, ಶುಚಿಗೊಳಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಸೋಂಕಿತ ವ್ಯಕ್ತಿಯ ಪ್ರೈಮರಿ ಸಂಪರ್ಕದವರೆಂದು ಗುರುತಿಸಿದ ವ್ಯಕ್ತಿಗಳನ್ನು ಕೋವಿಡ್-19 ಕೇರ್ ಸೆಂಟರ್[ಐಸೋಲೇಶನ್ ಸೆಂಟರ್]ನಲ್ಲಿ ಇರಿಸುವ ಸಲುವಾಗಿ ವಿವಿಧ ಇಲಾಖೆಗಳ ವಸತಿ ನಿಲಯ, ವಸತಿ ಶಾಲೆಗಳನ್ನು ಗುರುತಿಸಿದ್ದು, ಈ ಪೈಕಿ ಬಾಗಲಕೋಟೆಯ 20 ಕೇಂದ್ರಗಳಲ್ಲಿ 194 ಜನರು, ಬಾದಾಮಿ ತಾಲ್ಲೂಕಿನ 02 ಕೇಂದ್ರಗಳಲ್ಲಿ 12 ಜನರು, ಹುನಗುಂದ ತಾಲ್ಲೂಕಿನ 03 ಕೇಂದ್ರಗಳಲ್ಲಿ 23 ಜನರು, ಗುಳೇದಗುಡ್ಡ ತಾಲ್ಲೂಕಿನ 09 ಕೇಂದ್ರಗಳಲ್ಲಿ 111 ಜನರು, ಇಲಕಲ್ ತಾಲ್ಲೂಕಿನ 04 ಕೇಂದ್ರಗಳಲ್ಲಿ 36 ಜನರು, ಜಮಖಂಡಿ ತಾಲೂಕಿನ 18 ಕೇಂದ್ರಗಳಲ್ಲಿ 93 ಜನರು, ಮುಧೋಳ ತಾಲ್ಲೂಕಿನ 09 ಕೇಂದ್ರಗಳಲ್ಲಿ 33 ಜನರು, ಬೀಳಗಿ ತಾಲ್ಲೂಕಿನ 13 ಕೇಂದ್ರಗಳಲ್ಲಿ 76 ಜನರು ಹಾಗೂ ರಬಕವಿ-ಬನಹಟ್ಟಿ ತಾಲ್ಲೂಕಿನ 08 ಕೇಂದ್ರಗಳಲ್ಲಿ 57 ಜನರು, ಹೀಗೆ ಒಟ್ಟು 86 ಕೇಂದ್ರಗಳಲ್ಲಿ 635 ಜನರು ಕ್ವಾರಂಟೈನ್‌ನಲ್ಲಿ ಇರುತ್ತಾರೆ. ಅವರಿಗೆ ವೈದ್ಯಕೀಯ ತಪಾಸಣೆ ನಡೆಸಲಾಗುತ್ತಿದ್ದು ಊಟ, ಉಪಹಾರ, ಸ್ಯಾನಿಟೈಸರ್ ಹಾಗೂ ಇನ್ನಿತರ ಸಾಮಗ್ರಿಗಳನ್ನು ಪೂರೈಸಲಾಗಿದೆ.

ಅದೇರೀತಿ, ಹೋಮ್ ಕ್ವಾರಂಟೈನ್ ವಾಟ್ಸ್‌ಆ್ಯಪ್‌ನಲ್ಲಿ ಮಾಹಿತಿ ಇಂದೀಕರಿಸಲು ಹಾಗೂ ನಿಗಾವಹಿಸಲು ಗ್ರಾಮಲೆಕ್ಕಾಧಿಕಾರಿಗಳು, ಪಿಡಿಓ ಹಾಗೂ ಬಿಲ್‌ಕಲೆಕ್ಟರ್‌ಗಳನ್ನು ಒಳಗೊಂಡ ತಂಡ ರಚಿಸಿದ್ದು, ತಂಡದವರು ಪ್ರತಿದಿನ ಹೋಮ್ ಕ್ವಾರಂಟೈನ್‌ನಲ್ಲಿ ಇದ್ದ ವ್ಯಕ್ತಿಗಳ ಸೆಲ್ಫೀ ಫೋಟೊ ತೆಗೆದು, ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮಕೈಗೊಳ್ಳುತ್ತಿದ್ದಾರೆ. ಅದರಂತೆ, ಸರ್ಕಾರದ ಆರೋಗ್ಯ ಇಲಾಖೆಯ ನಿರ್ದೇಶನದಂತೆ ರಾಜ್ಯದ ಎಲ್ಲಾ ಕುಟುಂಬಗಳ ಆರೋಗ್ಯ ಸಮೀಕ್ಷೆ ಕಾರ್ಯವನ್ನು ಬಿಎಲ್‌ಓ ಹಾಗೂ ಶಾಲಾ ಶಿಕ್ಷಕರೊಂದಿಗೆ ಕೈಗೊಳ್ಳಲು ಸೂಚಿಸಿದ ಮೇರೆಗೆ, ಜಿಲ್ಲೆಯಲ್ಲಿ ಅಂದಾಜು 3,69,853 ಕುಟುಂಬಗಳನ್ನು ಗುರುತಿಸಿದ್ದು, ಈ ಪೈಕಿ ಮನೆ ಮನೆಗೆ ಭೇಟಿ ನೀಡಿ, 3,51,996 ಕುಟುಂಬಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿ, ಜಿಲ್ಲೆಯ ಪ್ರಗತಿ ಶೇ.95.17 ರಷ್ಟು ಸಾಧಿಸಿದೆ ಎಂದು ಸಭೆಗೆ ವಿವರಿಸಿದರು.

ಜಿಲ್ಲೆಯಲ್ಲಿ ಸ್ಥಾಪಿಸಿದ್ದ ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳಿಗೆ ತಾಲ್ಲೂಕಿನ ಎಲ್ಲಾ ತಹಶೀಲ್ದಾರರು ಭೇಟಿ ನೀಡಿ, ಪರಿಶೀಲನೆ ಮಾಡುವುದು. ಈ ಬಗ್ಗೆ ಚೆಕ್‌ಲಿಸ್ಟ್ ತಯಾರಿಸಿ, ಪ್ರತಿದಿನ ವರದಿಯನ್ನು ಉಪ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಯಿತು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆರವರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮುಂಜಾಗ್ರತೆಯ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಯಿತು. ಇದಕ್ಕೆ ಉಪ ನಿರ್ದೇಶಕರು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಯೋಜನೆ ರೂಪಿಸಿದ್ದು, ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಸ್ ಸೌಕರ್ಯದ ವ್ಯವಸ್ಥೆ ಹಾಗೂ ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಮಾಡಲು ಕ್ರಮ ವಹಿಸಲಾಗಿದೆ ಎಂದರು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿ, ಬಾಗಲಕೋಟೆ ವಿಭಾಗ, ವಾಕರಸಾಸಂಸ್ಥೆ., ಇವರಿಗೆ ವಾಹನ ಸೌಕರ್ಯ ಕೊರತೆಯಾಗದಂತೆ ಯೋಜನೆ

ರೂಪಿಸಿ, ಯಾವುದೇ ಒಬ್ಬ ವಿದ್ಯಾರ್ಥಿಯು ಪರೀಕ್ಷೆಗೆ ಗೈರುಹಾಜರಾಗದೇ ಇರುವಂತೆ ಕ್ರಮವಹಿಸಲು ಹಾಗೂ ಎಲ್ಲ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶದಂತೆ ಮಾಸ್ಕ್ ಧರಿಸಿಕೊಂಡು ಒಂದು ತಾಸು ಮುಂಚಿತವಾಗಿ ಪರೀಕ್ಷೆ ಕೇಂದ್ರಕ್ಕೆ ಬರುವಂತೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಯಿತು.

ವಿವಿಧ ಜಿಲ್ಲೆಗಳಿಂದ ದಿನಾಂಕ:09-05-2020 ರವರೆಗೆ ಈಗಾಗಲೇ 3,432 ವಲಸೆ ಕಾರ್ಮಿಕರು ಆಗಮಿಸಿದ್ದು, ಇವರಿಗೆ ಪಡಿತರ ಚೀಟಿ ಮತ್ತು ಆಹಾರ ಧಾನ್ಯ ಒದಗಿಸಲು ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬಾಗಲಕೋಟೆ ಇವರಿಗೆ ತಿಳಿಸಲಾಯಿತು.

ದಿನಾಂಕ:11-05-2020 ರಿಂದ 04-06-2020 ರವರೆಗೆ ಹೊರರಾಜ್ಯಗಳಿಂದ 2,346 ವಲಸೆ ಕಾರ್ಮಿಕರು ಜಿಲ್ಲೆಗೆ ಆಗಮಿಸಿದ್ದು, ಸದರಿ ಕಾರ್ಮಿಕರನ್ನು ಸರ್ಕಾರದ ಮಾರ್ಗಸೂಚಿಯಂತೆ ಮನೆ ಹಾಗೂ ಸಾಂಸ್ಥಿಕ ಕ್ವಾರಂಟೈನ್ ಮಾಡಿ, ಸರ್ಕಾರ ಕಡ್ಡಾಯ ಮಾಡಿದ ಮೊಬೈಲ್ ಆ್ಯಪ್‌ಗಳಲ್ಲಿ ಅವರ ಮಾಹಿತಿಯನ್ನು ಇಂದೀಕರಿಸಿ, ಸೂಕ್ತ ಕ್ರಮವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು. ಯಾರಾದರೂ ಮನೆ ಕ್ವಾರಂಟೈನ್ ಅವಧಿ ಮುಗಿಯುವುದರೊಳಗಾಗಿ ಮನೆ ಬಿಟ್ಟು ಹೊರಗೆ ಹೋದಲ್ಲಿ, ಅವರ ಮೇಲೆ ಎಫ್.ಐ.ಆರ್. ದಾಖಲಿಸುವಂತೆ ಹಾಗೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಮತ್ತು ಇದರ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಅರಿವು ಮೂಡಿಸಲು ಸೂಚಿಸಲಾಯಿತು.

ಜಿಲ್ಲೆಯಿಂದ ಹೊರರಾಜ್ಯಗಳಿಗೆ ಬಸ್ಸುಗಳ ಮೂಲಕ 859 ಹಾಗೂ ರೈಲುಗಳ ಮೂಲಕ 1,104 ವಲಸೆ ಕಾರ್ಮಿಕರನ್ನು ಅವರ ಸ್ವಂತ ಸ್ಥಳಗಳಿಗೆ ತೆರಳುವಂತೆ ಸೂಕ್ತ ಕ್ರಮವಹಿಸಲಾಗಿದೆ. ಹಾಗೂ ಮಹಾರಾಷ್ಟ್ರ ರಾಜ್ಯದಿಂದ 64 ವಲಸಿಗರು ರೈಲು ಮೂಲಕ ಜಿಲ್ಲೆಗೆ ಆಗಮಿಸಿದ್ದು, ಅವರ ಮೇಲುಸ್ತುವಾರಿಯಾಗಿ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು. ಹೊರರಾಜ್ಯದಿಂದ ಚೆಕ್‌ಪೋಸ್ಟ್‌ಗಳನ್ನು ಹೊರತುಪಡಿಸಿ, ಅನ್ಯಮಾರ್ಗದಿಂದ ಬರುವ ವಲಸಿಗರ ಬಗ್ಗೆ ಸೂಕ್ತ ಕ್ರಮವಹಿಸಿ, ಅಂಥವರ ಮಾಹಿತಿಯನ್ನು ಪಡೆದು, ಸರ್ಕಾರದ ಆದೇಶದನ್ವಯ ಮನೆ/ಸಾಂಸ್ಥಿಕ ಕ್ವಾರಂಟೈನ್ ಮಾಡುವಂತೆ ಹಾಗೂ ಹೊರರಾಜ್ಯಗಳಿಗೆ ಹೋಗುವ ವಲಸಿಗರ ಪಟ್ಟಿಯನ್ನು ತಯಾರಿಸಿ, ಅವರವರ ಸ್ವಂತ ಸ್ಥಳಗಳಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಯಿತು.

ಸರ್ಕಾರದಿಂದ ಹೊರಡಿಸಿದ ಮಾರ್ಗಸೂಚಿಯಂತೆ ಪ್ರತಿಯೊಬ್ಬ ವ್ಯಕ್ತಿಯು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ತಿಳಿಸಿದ್ದು, ಗ್ರಾಮ ಮಟ್ಟದಲ್ಲಿ ಮಾಸ್ಕ್ ಧರಿಸದೇ ಇದ್ದ ವ್ಯಕ್ತಿಗೆ ರೂ.100/- ಮತ್ತು ನಗರ ಪ್ರದೇಶಗಳಲ್ಲಿ ದಂಡ ವಿಧಿಸಿ ಕ್ರಮವಹಿಸಲು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಅದರಂತೆ ಉಪಯೋಗಿಸಿದ ಮಾಸ್ಕ್‌ಗಳನ್ನು ಪರಿಸರ ಸ್ನೇಹಿಯಾಗಿ ವಿಲೇವಾರಿ ಮಾಡಲು ಗ್ರಾಮ ಮಟ್ಟದಲ್ಲಿ ಅರಿವು

ಮೂಡಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆರವರಿಗೆ ಸೂಚಿಸಲಾಯಿತು. ಮಾಸ್ಕ್ ಧರಿಸದೇ ಇದ್ದ ವ್ಯಕ್ತಿಗಳಿಗೆ ದಂಡ ವಿಧಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಜನರಿಗೆ ಅರಿವು ಮೂಡಿಸಲು ಸೂಚಿಸಲಾಯಿತು ಹಾಗೂ ಅದರಂತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಉಗುಳಿದ ವ್ಯಕ್ತಿಗಳಿಗೆ ತಲಾ ರೂ.200/– ರಂತೆ ದಂಡ ವಿಧಿಸಲು ಈಗಾಗಲೇ ಕ್ರಮವಹಿಸಿದ ಬಗ್ಗೆ ತಿಳಿಸಲಾಯಿತು.

2019 ರಲ್ಲಿ ಉಂಟಾದ ಭೀಕರ ಪ್ರವಾಹದಿಂದ ಹಾನಿಗೊಳಗಾದ ಮನೆಗಳನ್ನು 'ಎ', 'ಬಿ' ಮತ್ತು 'ಸಿ' ವರ್ಗವೆಂದು ಗುರುತಿಸಿ ಅವುಗಳ ಪುನರ್‌ನಿರ್ಮಾಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಕೇಳಲಾಗಿ, ಅದಕ್ಕೆ ಜಿಲ್ಲಾಧಿಕಾರಿಗಳು 'ಎ' ವರ್ಗದ 577 ಮನೆಗಳ ಪೈಕಿ 468 ಮನೆಗಳನ್ನು ಪ್ರಾರಂಭಿಸಿದ್ದು, 'ಬಿ' ವರ್ಗದ 2,716 ಮನೆಗಳ ಪೈಕಿ 2,224 ಮನೆಗಳನ್ನು ಪ್ರಾರಂಭಿಸಿದ್ದು, ಇನ್ನೂ 'ಎ' ವರ್ಗದ 109 ಹಾಗೂ 'ಬಿ' ವರ್ಗದ 492 ಮನೆಗಳ ಕಟ್ಟಡಗಳನ್ನು ಪ್ರಾರಂಭಿಸಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಮನೆಗಳನ್ನು ಪ್ರಾರಂಭಿಸಿದೇ ಇದ್ದ ಗ್ರಾಮಗಳಿಗೆ ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಖುದ್ದಾಗಿ ಭೇಟಿ ನೀಡಿ, ಆದಷ್ಟು ತ್ವರಿತವಾಗಿ ಪ್ರಗತಿ ಸಾಧಿಸುವಂತೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ 2020–21ನೇ ಸಾಲಿನ ಯೋಜನೆಯಡಿಯಲ್ಲಿ ವಾರ್ಷಿಕ ಗುರಿ 42.00 ಇದ್ದು, ಏಪ್ರಿಲ್ ತಿಂಗಳಲ್ಲಿ ಸೃಜನೆ ಮಾಡಿದ ಮಾನವ ದಿನಗಳು 78,469 ಮತ್ತು ಮೇ–30ರವರೆಗೆ ಸೃಜನೆ ಮಾಡಿದ ಮಾನವ ದಿನಗಳು 3,25,256 ಮಾಡಲಾಗಿದೆ. ಅಲ್ಲದೇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಲ್ಲಿ ಎಲ್ಲಾ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಗ್ರಾಮಗಳಲ್ಲಿ ಇಲ್ಲಿಯವರೆಗೆ ಟ್ಯಾಂಕರ್ ಮುಖಾಂತರ ನೀರು ಪೂರೈಕೆ ಮಾಡಿರುವುದಿಲ್ಲ ಹಾಗೂ ಕುಡಿಯುವ ನೀರು ಅಭಾವ ಕಂಡುಬಂದಿರುವುದಿಲ್ಲ. ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಪ್ರಥಮ ಕಂಟಿನ್‌ಜೆನ್ಸಿ ಕ್ರಿಯಾ ಯೋಜನೆ ರೂ.180.00 ಲಕ್ಷ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ. 85 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಎರಡನೇ ಕಂಟಿನ್‌ಜೆನ್ಸಿ ಕ್ರಿಯಾ ಯೋಜನೆಯಲ್ಲಿ ರೂ.105.00 ಲಕ್ಷಕ್ಕೆ ಅನುಮೋದನೆಯಾಗಿದೆ. ಮೂರನೇ ಕಂಟಿನ್‌ಜೆನ್ಸಿ ಕ್ರಿಯಾ ಯೋಜನೆಯಲ್ಲಿ ರೂ.90.00 ಲಕ್ಷ ಅನುಮೋದನೆಗಾಗಿ ಆಯುಕ್ತರಿಗೆ ಸಲ್ಲಿಸಲಾಗಿದೆ. ಜಲಜೀವನ ಮಿಷನ್ ಅಡಿ ರೂ.366.95 ಕೋಟಿಯ ಜಿಲ್ಲಾ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಆಯುಕ್ತರ ಕಚೇರಿಗೆ ಸಲ್ಲಿಸಲಾಗಿದೆ. ಕೋವಿಡ್–19 ಭೀತಿ ಹಿನ್ನೆಲೆಯಲ್ಲಿ ಲಾಕ್‌ಡೌನ್‌ದಿಂದಾಗಿ ಕೆಲಸಕ್ಕೆ ಬರದೇ ಇರುವುದರಿಂದ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಶೇಕಡ 46.62 ರಷ್ಟು ಮಾತ್ರ ಸಾಧನೆ ಮಾಡಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ 19ನೇ ಸ್ಥಾನದಲ್ಲಿದೆ. ಲಾಕ್‌ಡೌನ್

ಸಡಿಲಿಕೆಯಿಂದ ಈಗ ಜನರು ಕೆಲಸಕ್ಕೆ ಬರುತ್ತಿದ್ದು, ಕೃಷಿಹೊಂಡ, ಬದು ನಿರ್ಮಾಣ, ದನದ ಶೆಡ್, ತೋಟಗಾರಿಕೆ, ಸಿಸಿ ರಸ್ತೆ, ಚರಂಡಿ ಸೇರಿ ಇತರೆ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

ಕೋವಿಡ್-19 ನಿಯಂತ್ರಣ ಕಾರ್ಯದಲ್ಲಿ ತೊಡಗಿಕೊಂಡಿದ್ದ ಬಾದಾಮಿ ತಾಲ್ಲೂಕಿನ ನಂದಿಕೇಶ್ವರ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಕರ್ತವ್ಯ ನಿರ್ವಹಿಸುವಾಗ ಅಪಘಾತದಿಂದ ಮೃತರಾಗಿದ್ದು, ಈಗಾಗಲೇ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು, ರವರಿಗೆ ಪರಿಹಾರಕ್ಕಾಗಿ ಪತ್ರ ಬರೆಯಲಾಗಿದೆಯೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಾಗಲಕೋಟೆರವರು ತಿಳಿಸಿದರು.

ಕೃಷಿ ಇಲಾಖೆ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬೀಜ ದಾಸ್ತಾನು ಇದ್ದು, ಯಾವುದೇ ರೀತಿಯ ಕೊರತೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು ಮತ್ತು ತೋಟಗಾರಿಕೆ ಇಲಾಖೆ ರವರು ಸಹ ತಮ್ಮ ಇಲಾಖೆಯಿಂದ ಯಾವುದೇ ಸಮಸ್ಯೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಕೈಮಗ್ಗ ಮತ್ತು ಜವಳಿ ಇಲಾಖೆಯವರು ಮಾತನಾಡಿ, ಕೋವಿಡ್-19 ಕ್ಕೆ ಒಳಗಾದ ಕೈಮಗ್ಗ ನೇಕಾರರಿಗೆ ರೂ.2000/- ರಂತೆ ಪರಿಹಾರ ಧನ ನೀಡಲು ಸರ್ಕಾರದಿಂದ ಆದೇಶವಿದ್ದು, ಅದರಂತೆ ಜಿಲ್ಲೆಯಲ್ಲಿ ಕೈಮಗ್ಗ ನೇಕಾರರು 13,183 ಹಾಗೂ ವಿದ್ಯುತ್ ಮಗ್ಗ ನೇಕಾರರು 17,723 ಹೀಗೆ ಒಟ್ಟು 30,906 ನೇಕಾರರು ನೋಂದಾಯಿತರಾಗಿದ್ದು, ಪ್ರಸ್ತುತ ಸೇವಾಸಿಂಧು ತಂತ್ರಾಂಶ ಅಭಿವೃದ್ಧಿ ಪಡಿಸುವುದು ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು.

ಕಾರ್ಮಿಕ ಇಲಾಖೆಯಡಿ ಒಟ್ಟು 35,886 ನೋಂದಾಯಿತ ಕಟ್ಟಡ ಕಾರ್ಮಿಕರಿದ್ದು, ಈವರೆಗೆ 26,973 ಕಾರ್ಮಿಕರಿಗೆ ರೂ.13,48,65,000/- ಗಳ ಪರಿಹಾರವನ್ನು ಸೇವಾಸಿಂಧು ತಂತ್ರಾಂಶ ಮೂಲಕ ಪಾವತಿಸಲಾಗಿದೆ. ಪ್ರತಿ ಫಲಾನುಭವಿಗಳಿಗೆ ಒಂದು ಬಾರಿ ರೂ.5,000/- ಗಳನ್ನು ಪಾವತಿಸಲಾಗುತ್ತಿದೆ.

ಪ್ರಾದೇಶಿಕ ಸಾರಿಗೆ ಇಲಾಖೆಯಡಿ ನೋಂದಾಯಿತ ಚಾಲನಾ ಪತ್ರ ಹೊಂದಿದ ಕ್ಯಾಬ್ ವಾಹನ ಚಾಲಕರು 3,887 ಹಾಗೂ ನೋಂದಾಯಿತ ಚಾಲನಾ ಪತ್ರ ಹೊಂದಿದ ಅಟೋರಿಕ್ಷಾ ಚಾಲಕರು 1,019 ಹೀಗೆ ಒಟ್ಟು 4,906 ವಾಹನ ಚಾಲಕರು ಇದ್ದು, ಇವರುಗಳ ಪೈಕಿ ಈವರೆಗೆ 328 ಜನರಿಗೆ ರೂ.16,40,000/- ಗಳ ಪರಿಹಾರ ಪಾವತಿಸಲಾಗಿದೆ. ಇಲ್ಲಿಯೂ ಸಹಿತ ಪ್ರತಿ ಫಲಾನುಭವಿಗಳಿಗೆ ಒಂದು ಬಾರಿ ರೂ.5,000/- ಪಾವತಿಸಲಾಗುತ್ತಿದೆ.

ತೋಟಗಾರಿಕೆ ಇಲಾಖೆಯಡಿ ಒಟ್ಟು 169 ಹೂ ಬೆಳೆಯುವ ರೈತರು ಬೆಳೆ ಸಮೀಕ್ಷೆಯನ್ವಯ ಗುರುತಿಸಿದ್ದು, ಉಳಿದಂತೆ ಇನ್ನೂ ಸುಮಾರು 799 ಅರ್ಜಿಗಳು ಸ್ವೀಕೃತಿಯಾಗಿದ್ದು, ಶೇಕಡಾ 80 ರಷ್ಟು ಕ್ಷೇತ್ರಗಳ ಸಮೀಕ್ಷೆ ಮುಕ್ತಾಯಗೊಂಡಿದ್ದು, ಇನ್ನುಳಿದ ಕ್ಷೇತ್ರಗಳನ್ನು ತೀವ್ರವಾಗಿ ಸಮೀಕ್ಷೆ ಕೈಗೊಂಡು ಪರಿಹಾರ ಪಾವತಿಸಲು ಕ್ರಮ ವಹಿಸಲಾಗುವುದೆಂದು ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಾಗಲಕೋಟೆರವರು ವಿವರಿಸಿದರು. ಒಬ್ಬ ರೈತನಿಗೆ ಒಂದು ಬಾರಿ ಗರಿಷ್ಠ ಒಂದು ಹೆಕ್ಟರಿಗೆ ರೂ.25,000/- ಪರಿಹಾರ ಪಾವತಿಸಲು ಅವಕಾಶವಿರುತ್ತದೆ.

ಕೋವಿಡ್-19 ನಿಯಂತ್ರಣಕ್ಕಾಗಿ ಜಿಲ್ಲಾ ಆಸ್ಪತ್ರೆ, ಬಾಗಲಕೋಟೆರವರಿಗೆ ಸಿ.ಆರ್.ಎಫ್. ಹಾಗೂ ಡಿ.ಎಂ.ಎಫ್. ಅನುದಾನದಲ್ಲಿ ರೂ.3,56,55,969/- ಗಳ ಯಂತ್ರೋಪಕರಣ ಹಾಗೂ ಪೂರಕ ಸಾಮಗ್ರಿಗಳ ಕಾರ್ಯಾದೇಶ ನೀಡಿದ್ದು, ಇವುಗಳ ಪೈಕಿ ರೂ.1,44,01,464/- ಸಿ.ಆರ್.ಎಫ್. ಅನುದಾನದಲ್ಲಿ ಹಾಗೂ ರೂ.47,55,582/- ಗಳನ್ನು ಹೀಗೆ ಒಟ್ಟು ರೂ.1,91,57,046/- ಗಳ ಅನುದಾನ ಬಿಡುಗಡೆಗೊಳಿಸಲಾಗಿದೆ. ಇನ್ನುಳಿದ ಯಂತ್ರೋಪಕರಣಗಳು ಸ್ವೀಕೃತಿಗೊಂಡ ನಂತರ ಬಾಕಿ ಉಳಿದ ಮೊತ್ತ ಪಾವತಿಸಲಾಗುವುದು.

ಸಿ.ಆರ್.ಎಫ್. ಅನುದಾನದಲ್ಲಿ ಕೋವಿಡ್-19 ನಿಯಂತ್ರಣಕ್ಕಾಗಿ ಬೂತ್ ಸ್ಪ್ರೇ ಮಷಿನ್, ಕರಪತ್ರಗಳು, ಪೆಂಡಾಲ್, ಸಾಫ್ಟ್‌ವೇರ್ ಅಳವಡಿಕೆ, ಸೀಲ್‌ಡೌನ್ ಏರಿಯಾದಲ್ಲಿರುವ ಜಾನುವಾರುಗಳಿಗೆ ಮೇವು, ಎ.ಎಸ್.ಎಫ್, ಮಷಿನ್ ಸಾಗಾಣಿಕೆ ವೆಚ್ಚ ಹಾಗೂ ಆಹಾರ ಪೊಟ್ಟಣಗಳನ್ನು ವಿತರಿಸಿದ್ದು, ಇವುಗಳ ಒಟ್ಟು ಮೊತ್ತ ರೂ.17,12,309/- ಗಳನ್ನು ಪಾವತಿಸಲಾಗಿದೆ.

ಕೋವಿಡ್-19 ನಿಯಂತ್ರಣಕ್ಕಾಗಿ ಸಿ.ಆರ್.ಎಫ್. ಅನುದಾನದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಾಗಲಕೋಟೆರವರಿಗೆ ಎನ್.ಎಚ್.ಎಂ. ಅನುದಾನ ಬಂದ ನಂತರ, ಪರತ್ ಸಲ್ಲಿಸುವ ಷರತ್ತಿಗೆ ಒಳಪಟ್ಟು ರೂ.5,23,410/- ಗಳ ಅನುದಾನ ಬಿಲ್ ಸಂದಾಯ ಮಾಡಿದ್ದು ಇರುತ್ತದೆ.

ಕೊನೆಯದಾಗಿ ಎಲ್ಲ ಪ್ರಗತಿಯ ವರದಿ ಅವಲೋಕಿಸಿ, ಈ ಕೆಳಗಿನ ಅಂಶಗಳ ಬಗ್ಗೆ ಕ್ರಮವಹಿಸಲು ಆದೇಶಿಸಲಾಯಿತು:

1. ಸರ್ಕಾರದ ನಿರ್ದೇಶನದಂತೆ ಮಾಸ್ಕ್ ಧರಿಸದೇ ಇದ್ದ ವ್ಯಕ್ತಿಗಳಿಗೆ ರೂ.100/- ದಂಡ ವಿಧಿಸಲು ಹಾಗೂ ಈ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲು ಕ್ರಮ ವಹಿಸುವುದು.
2. ಕಳೆದ ವರ್ಷ ಉಂಟಾದ ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಕಟ್ಟಡ ಪ್ರಾರಂಭಕ್ಕೆ ಕ್ರಮಕೈಗೊಳ್ಳುವುದು.

3. ಮಹಾರಾಷ್ಟ್ರದಲ್ಲಿ ಮಳೆಯಾಗುತ್ತಿದ್ದು, ಕೃಷ್ಣಾ ನದಿ ಪ್ರವಾಹದಿಂದ ಬಾಧಿತಗೊಳ್ಳುವ ಪ್ರದೇಶದಲ್ಲಿ ಮುನ್ನೆಚರಿಕೆ ಕ್ರಮಕೈಗೊಳ್ಳುವುದು.

4. ಮೊಬೈಲ್ ಕ್ಲಿನಿಕ್ ಬಸ್ಸನ್ನು ಕೋವಿಡ್-19 ನಿಯಂತ್ರಣಕ್ಕಾಗಿ ಸಿದ್ಧಪಡಿಸಿದ್ದು, ಸದರಿ ಬಸ್ಸಿಗಾಗಿ ಮಾರ್ಗ ಯೋಜನೆಯನ್ನು ಸಿದ್ಧಪಡಿಸಿ, ಜನರಲ್ಲಿ ಅರಿವು ಮೂಡಿಸುವುದು ಹಾಗೂ ಅದರ ಸದುಪಯೋಗ ಪಡೆಯುವುದು.

ಕೊನೆಯದಾಗಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

08/6/2020

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ,
ಬೆಂಗಳೂರು, ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
(ಕೋವಿಡ್-19) ಬಾಗಲಕೋಟೆ ಜಿಲ್ಲೆ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 26.06.2020 ರಂದು ಜರುಗಿದ ಉಡುಪಿ ಕೋವಿಡ್ 19 ನ ಪ್ರಸ್ತುತ ಪರಿಸ್ಥಿತಿ ಬಗ್ಗೆ ಹಾಗೂ ಮರಳು ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಅಪರಾಹ್ನ 4.30 ಗಂಟೆ** **ಸ್ಥಳ: ಡಾ.ವಿ.ಎಸ್ ಆಚಾರ್ಯ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ **ಪ್ರಧಾನ** ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋತ್ , ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ವಿಷ್ಣುವರ್ಧನ್, ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

***********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್-19 ಸ್ಥಿತಿಗತಿಗಳ ಬಗ್ಗೆ ವಿವರ ಮತ್ತು ಈ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ ನೀಡುವಂತೆ ಜಿಲ್ಲಾಕೋವಿಡ್-19 ನೋಡಲ್ ಅಧಿಕಾರಿಯವರಿಗೆ ಸೂಚಿಸಿದರು. ಕೋವಿಡ್-19 ನೋಡಲ್ ಅಧಿಕಾರಿಯವರು ಕೋವಿಡ್-19 ವೈರಸ್ ನಿಯಂತ್ರಣದ ಬಗ್ಗೆ ಕೈಗೊಂಡ ಕ್ರಮಗಳ ಮತ್ತು ಈಗಿನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳೊಂದಿಗೆ ಬಗ್ಗೆ ಕ್ವಾರೈಂಟೈನ್ ಮಾಡಿದ ಬಗ್ಗೆ ವಿವರ, SARI Cases ,ILI , Swab test ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿದರು.
- ಈ ಬಗ್ಗೆ ಒಟ್ಟು 25,653 ಜನರನ್ನು ಕ್ವಾರಂಟೈನ್‌ಗೆ ಒಳಪಡಿಸಿರುವುದಾಗಿ, ಹಾಗೂ ಈವರೆಗೆ ಸುಮಾರು 14,000 ಜನರ Swab ಪರೀಕ್ಷೆ ನಡೆಸಿರುವುದಾಗಿ, ಅವುಗಳಲ್ಲಿ ಈವರೆಗೆ 1116 ಖಚಿತ ಪ್ರಕರಣಗಳು ವರದಿಯಾಗಿರುವುದಾಗಿ ಪ್ರಸ್ತುತ 116 ಸಕ್ರಿಯ ಪ್ರಕರಣಗಳು ಇರುವುದಾಗಿ ಜಿಲ್ಲಾ ಕೋವಿಡ್-19 ನೋಡಲ್ ಅಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು. ಹಾಗೂ ಜಿಲ್ಲೆಯ ಮರಣ ಪ್ರಮಾಣವು 0.2% ಇದ್ದು, ಗುಣಮುಖ ಪ್ರಮಾಣವು 92% ಇದ್ದು, ಗುಣಮುಖ ಹಾಗೂ ಕಡಿಮೆ ಮರಣ ದರದಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿರುವುದಾಗಿ ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು.
- ಜಿಲ್ಲೆಯ ಒಟ್ಟು ಖಚಿತ ಪ್ರಕರಣಗಳಲ್ಲಿ 3% Symptomatic, 97% Asymptomatic ವರದಿಯಾಗಿದ್ದು, ಇವರುಗಳಲ್ಲಿ Local Cases 2.5% , ಹೊರರಾಜ್ಯಗಳಿಂದ ಹಾಗೂ ಅಂತರ್‌ರಾಷ್ಟ್ರೀಯ ಪ್ರಕರಣಗಳು 97.5% ಇರುವುದಾಗಿ ಕೋವಿಡ್ ನೋಡಲ್ ಅಧಿಕಾರಿಯವರು ತಿಳಿಸಿದರು.
- ಜಿಲ್ಲಾ ಕೋವಿಡ್-19 ನೋಡಲ್ ಅಧಿಕಾರಿಯವರು ಮಾತನಾಡಿ ಹಿಂದಿನ ಸಭೆಯಲ್ಲಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದಂತೆ ಜಿಲ್ಲೆಯ ಆಸ್ಪತ್ರೆಗಳಲ್ಲಿ ಈಗಾಗಲೇ 2400 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗಾಗಿ ಕಲ್ಪಿಸಿರುವುದಾಗಿ ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲೆಯಲ್ಲಿರುವ Fever Clinic ಗಳ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು, ಈ ಬಗ್ಗೆ ಜಿಲ್ಲಾ ಕೋವಿಡ್ ನೋಡಲ್ ಅಧಿಕಾರಿಯವರು ಜಿಲ್ಲೆಯಲ್ಲಿ 9 ಸರಕಾರಿ ಹಾಗೂ 1 ಖಾಸಗಿ ಆಸ್ಪತ್ರೆಗಳಲ್ಲಿ Fever Clinic ಚಾಲ್ತಿಯಲ್ಲಿರುವುದಾಗಿ ತಿಳಿಸಿದರು. ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಗ್ರಾಮ ಪಂಚಾಯತ್ ಮಟ್ಟದಲ್ಲಿ ಖಾಸಗಿ ವೈದ್ಯರು ಹಾಗೂ ಆಯುರ್ವೇದಿಕ್ ವೈದ್ಯರಿಗೆ SOP ಯಂತೆ ರೋಗಿಗಳನ್ನು ತಪಾಸಣೆ ನಡೆಸುವಲ್ಲಿ ಪ್ರತಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

(ಕ್ರಮ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)

- ಸರ್ಕಾರಿ ಆಸ್ಪತ್ರೆಯಲ್ಲಿ ರಚಿಸಲಾಗುವ ಲ್ಯಾಬ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು ಶೀಘ್ರದಲ್ಲಿ ಕಾರ್ಯ ಆರಂಭಿಸಲಿದೆಯೆಂದು ಜಿಲ್ಲಾ ಸರ್ಜನ್ ಉಡುಪಿ ಇವರು ಸಭೆಗೆ ಮಾಹಿತಿ ನೀಡಿದರು.

- ಜಿಲ್ಲಾ ಕೋವಿಡ್-19 ನೋಡಲ್ ಅಧಿಕಾರಿಯವರು ಮಾತನಾಡಿ ಸರಕಾರದ ಮಾರ್ಗಸೂಚಿಯಂತೆ ವೈದ್ಯರಿಗೆ ಹಾಗೂ ಸಿಬ್ಬಂದಿಯವರಿಗೆ ಪುನರ್ಮನನ ತರಬೇತಿಗಳನ್ನು ನೀಡಲಾಗುತ್ತಿರುವುದಾಗಿ ತಿಳಿಸಿದರು.

- ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ Bed Management & Ambulance Management ಬಗ್ಗೆ Softwareನ್ನು ಈಗಾಗಲೇ ಅಭಿವೃದ್ಧಿಪಡಿಸಿದ್ದು, ಕೂಡಲೇ ಕಾರ್ಯಗತಗೊಳಿಸುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

- ಜಿಲ್ಲೆಯಲ್ಲಿರುವ ವೆಂಟಿಲೇಟರ್ಸ್ ಹಾಗೂ ಸೆಂಟ್ರಲ್ ಆಕ್ಸಿಜನ್ ಬೆಡ್‌ಗಳ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರು ವಿಚಾರಿಸಲಾಗಿ, ಜಿಲ್ಲೆಯಲ್ಲಿ ಒಟ್ಟು 120 ವೆಂಟಿಲೆಟರ್‌ಗಳು ಇರುವುದಾಗಿ, ಈವರೆಗೆ ಓರ್ವ ಕೊವಿಡ್ ಖಚಿತ ರೋಗಿ ವೆಂಟಿಲೆಟರ್ ಚಿಕಿತ್ಸೆ ಪಡೆದಿರುವುದಾಗಿ ತಿಳಿಸಿದರು. ಜಿಲ್ಲೆಯಲ್ಲಿ 2400 ರಷ್ಟು ಬೆಡ್ ಗಳಿಗೆ ಸೆಂಟ್ರಲ್ ಆಕ್ಸಿಜನ್ ಸೌಲಭ್ಯ ಇದೆ ಎಂದು ಕೋವಿಡ್-19 ನೋಡಲ್ ಅಧಿಕಾರಿಯವರು ತಿಳಿಸಿದರು.

- ಕ್ವಾರಂಟೈನ್ watch app ಅಡಿಯಲ್ಲಿ ಕಟ್ಟುನಿಟ್ಟಾಗಿ ಕ್ವಾರಂಟೈನ್ ನಲ್ಲಿ ಇರುವವರ ಬಗ್ಗೆ ನಿಗಾ ವಹಿಸಲಾಗುತ್ತಿದ್ದು, ಉಲ್ಲಂಘನೆ ಮಾಡಿದವರ ಮೇಲೆ FIR ದಾಖಲಿಸುತ್ತಿರುವುದಾಗಿ ಪೊಲೀಸ್ ಅಧೀಕ್ಷಕರು ಸಭೆಗೆ ಮಾಹಿತಿ ನೀಡಿದರು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಈವರೆಗೆ ಇಂತಹ ಉಲ್ಲಂಘನೆಯಾದ 3 ಪ್ರಕರಣಗಳನ್ನು ದಾಖಲಿಸಿರುವುದಾಗಿ ತಿಳಿಸಿದರು. ಹಾಗೂ ಕ್ವಾರಂಟೈನ್ ವಾಚ್ ನಿಗಾದಲ್ಲೂ ಜಿಲ್ಲೆ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿ ಇದೆ ಎಂದು ಸಭೆಗೆ ತಿಳಿಸಿದರು.

- ಜಿಲ್ಲೆಯಲ್ಲಿ ಸರ್ವೇಕ್ಷಣೆ ನಡೆಸುವ ಸಿಬ್ಬಂದಿಗಳ ಕೊರತೆ ಇರುವ ಬಗ್ಗೆ ಚರ್ಚಿಸಲಾಗಿ, ಈವರೆಗೆ ಪುರುಷ ಆರೋಗ್ಯ ಸಹಾಯಕರ ಹುದ್ದೆ ಶೇಕಡಾ 83% ನಷ್ಟು ಖಾಲಿ ಇರುವುದಾಗಿ, ಹಾಗೂ ಮಹಿಳಾ ಆರೋಗ್ಯ ಸಹಾಯಕರ ಹುದ್ದೆ ಶೇ.53% ನಷ್ಟು ಖಾಲಿ ಇರುವುದಾಗಿ ತಿಳಿಸಿದರು. ಈ ಬಗ್ಗೆ ಮೇಲಾಧಿಕಾರಿಯವರೊಂದಿಗೆ ಚರ್ಚಿಸುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

- ಜಿಲ್ಲೆಯಲ್ಲಿ ಇತರೆ ಸಾಂಕ್ರಾಮಿಕ ರೋಗಗಳಾದ ಹೆಚ್1ಎನ್1 ಹಾಗೂ ಮಲೇರಿಯಾ, ಡೆಂಗ್ಯೂ ರೋಗಗಳ ಪ್ರಸಕ್ತ ಮಾಹಿತಿಯನ್ನು ನೀಡುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಈ ಬಗ್ಗೆ ಜಿಲ್ಲಾ ಸರ್ವೇಕ್ಷಣಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು.

**ಇತರೆ ವಿಷಯಗಳು :**

- ಜಿಲ್ಲೆಯಲ್ಲಿ ಅಕ್ರಮ ಮರಳುಗಾರಿಕೆ ಮತ್ತು ಮರಳು ಸಾಗಾಟ ತಡೆಯುವ ಕುರಿತಂತೆ ಎಸಿ ಹಾಗೂ ಪೊಲೀಸ್ ಅಧೀಕ್ಷಕರ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಮರಳುಗಾರಿಕೆ ನಡೆಯುವ ಪ್ರದೇಶಗಳ ಮೇಲೇ ದಿಢೀರ್ ದಾಳಿ ನಡೆಸುವುದರ ಹಾಗೂ ನಿರಂತರ ಪರಿಶೀಲನೆ ನಡೆಸುವುದರ ಮೂಲಕ ಜಿಲ್ಲೆಯಲ್ಲಿ ಯಾವುದೇ ಅಕ್ರಮ ಮರಳುಗಾರಿಕೆ ನಡೆಯದಂತೆ ಎಚ್ಚರವಹಿಸುವಂತೆ ಹಾಗೂ ಎಲ್ಲಾ ತಹಶೀಲ್ದಾರರು, ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು ಹಾಗೂ ಗ್ರಾಮಕರಣಿಕರುಗಳು ಅವರವರ ವ್ಯಾಪ್ತಿಯಲ್ಲಿ ನಿಗಾ ಇಡುವುದು, ಎಲ್ಲಿಯಾದರೂ ಅಕ್ರಮ ಕಂಡು ಬಂದಲ್ಲಿ ಕ್ರಮ ವಹಿಸುವುದು ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸುವುದಾಗಿ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

- ಸಿ.ಆರ್.ಝಡ್ ವ್ಯಾಪ್ತಿಯಲ್ಲಿ ಅಕ್ರಮ ಮರಳು ಸಾಗಾಟಕ್ಕೆ ಸಂಬಂಧಿಸಿದ ಯಾವುದೇ ವಾಹನ ಕಂಡುಬಂದಲ್ಲಿ ಕೂಡಲೇ ಮುಟ್ಟುಗೋಲು ಹಾಕಿಕೊಂಡು ಸಂಬಂಧಪಟ್ಟವರ ವಿರುದ್ಧ ಎಫ್.ಐ.ಆರ್ ದಾಖಲಿಸುವಂತೆ ಹಾಗೂ ಮರಳುಗಾರಿಕೆ ನಡೆಸಲು ಅನುಮತಿ ಪಡೆದು ನಿಯಮ ಉಲ್ಲಂಘಿಸಿರುವ ವಾಹನಗಳ ವಿರುದ್ಧ ಕೂಡಲೇ ಕ್ರಮ ಜರುಗಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

- ಅಕ್ರಮ ಮರಳುಗಾರಿಕೆ ತಡೆಯುವ ಜವಾಬ್ದಾರಿ ಹೊಂದಿರುವ ಸಂಬಂಧಪಟ್ಟ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯನಿರ್ವಹಣಾಧಿಕಾರಿಯವರುಗಳು ಮರಳುಗಾರಿಕೆ ನಡೆಯುವ ಪ್ರದೇಶಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅಕ್ರಮ ನಡೆಯದಂತೆ ಎಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿಯವರು ಸೂಚಿಸಿದರು. ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತಂಡಗಳನ್ನು ರಚಿಸುವಂತೆ ಹಾಗೂ ತಂಡದಲ್ಲಿ ಪೊಲೀಸ್ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

- ಹೆಜಮಾಡಿ ಮೀನುಗಾರಿಕಾ ಬಂದರು, ತಾಲೂಕು ಕಛೇರಿ ಸಂಕೀರ್ಣ, ಮಿನಿ ವಿಧಾನ ಸೌಧ, ಹಾಗೂ ಬೀಚ್ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರವು ಮಂಜೂರಾತಿ ನೀಡಿದ್ದು ಈ ಕಾಮಗಾರಿಗಳ ಪ್ರಾರಂಭಕ್ಕೆ ಪೂರ್ವಭಾವಿಯಾಗಿ ಸರ್ಕಾರದ ಸೂಚನೆಯಂತೆ ಸ್ಥಳ ಸಮೀಕ್ಷೆ ಮತ್ತು ಯೋಜನಾ ಗಾತ್ರವನ್ನು ಪುನರ್ ಪರಿಶೀಲಿಸುವ ಬಗ್ಗೆ ಸದ್ರಿ ಸ್ಥಳಗಳಿಗೆ ಉಸ್ತುವಾರಿ ಕಾರ್ಯದರ್ಶಿಯವರು ಭೇಟಿ ಮಾಡಿ ಸ್ಥಳ ಪರಿಶೀಲನೆ ನಡೆಸಿದರು.

.ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

# ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲಾ ಕೋವಿಡ್-19 ಹಾಗೂ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ

ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನಾನು ದಿನಾಂಕ: 06-06-2020 ಮತ್ತು 07-06-2020 ರಂದು ಜಿಲ್ಲೆಗೆ ಭೇಟಿ ಪರಿಶೀಲನಾ ಸಭೆ ನಡೆಸಿರುತ್ತೇನೆ. ಸದರಿ ಪರಿಶೀಲನಾ ಸಭೆಯ ವರದಿ ಈ ಕೆಳಕಂಡಂತಿದೆ:

**ದಿನಾಂಕ: 06-06-2020 ರಂದು ಮಧ್ಯಾಹ್ನ 03:00 ರಿಂದ 05:00 ರವರೆಗೆ ನಡೆದ ಸಭೆಯ ವರದಿ:**

- ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 260 ಕೋವಿಡ್ ಪಾಸಿಟೀವ್ ಪ್ರಕರಣಗಳು ಇದ್ದು 1 ಸಾವು ಸಂಭವಿಸಿದೆ. 126 ಜನ ಗುಣಮುಖರಾಗಿದ್ದು, 133 ಸಕ್ರೀಯ (active) ಪ್ರಕರಣಗಳು ಇರುತ್ತವೆ.

- ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 54 ಪ್ರದೇಶಗಳನ್ನು ಕಂಟೈನ್ಮೆಂಟ್ ಝೋನ್ ಎಂದು ಗುರುತಿಸಲಾಗಿದ್ದು, 10 ಪ್ರದೇಶಗಳನ್ನು ಅವಧಿ ಮುಕ್ತಾಯವಾದ ಕಂಟೈನ್ಮೆಂಟ್ ವಲಯ ಎಂದು ಘೋಷಿಸಲಾಗಿದ್ದು, 44 ಪ್ರದೇಶಗಳು ಚಾಲ್ತಿಯಲ್ಲಿರುವ ಕಂಟೈನ್ಮೆಂಟ್ ಝೋನ್‌ಗಳಾಗಿವೆ.

- ಜಿಲ್ಲೆಯಲ್ಲಿ ಕೋವಿಡ್-19 ರೋಗ ತಪಾಸಣೆಗಾಗಿ ಒಟ್ಟು 13,325 ಗಂಟಲು ದ್ರವ ಮಾದರಿಗಳನ್ನು ಪರೀಕ್ಷೆಗಾಗಿ ತೆಗೆದುಕೊಳ್ಳಲಾಗಿದ್ದು, 260 ಪಾಸಿಟೀವ್ ಪ್ರಕರಣಗಳಾಗಿದ್ದು, 12,015 ಪ್ರಕರಣಗಳಲ್ಲಿ ನೆಗೆಟೀವ್ ವರದಿ ಬಂದಿರುತ್ತದೆ. 836 ಪ್ರಕರಣಗಳಲ್ಲಿ ವರದಿ ಬಾಕಿ ಇರುತ್ತದೆ.

- ಜಿಲ್ಲೆಯಲ್ಲಿ ಪಾಸಿಟೀವ್ ಪ್ರಕರಣಗಳ ಪ್ರಥಮ ಸಂಪರ್ಕಿಗಳು 3092 ಇದ್ದು, ಅವರ ಅಂಪರ್ಕಿತ ವ್ಯಕ್ತಿಗಳ ಸಂಖ್ಯೆ 891 ಪ್ರಕರಣಗಳಾಗಿರುತ್ತವೆ. ದ್ವಿತೀಯ ಸಂಪರ್ಕಿಗಳ ಸಂಖ್ಯೆ 4939 ಇದ್ದು, ಅವರ ಸಂಪರ್ಕಿತ ವ್ಯಕ್ತಿಗಳ ಸಂಖ್ಯೆ 1579 ಆಗಿರುತ್ತದೆ.

- ಮನೆ-ಮನೆ ಆರೋಗ್ಯ ಸಮೀಕ್ಷೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಜಿಲ್ಲೆಯಲ್ಲಿ ಒಟ್ಟು 13,10,317 ಕುಟುಂಬಗಳಿದ್ದು, 12,69,646 ಕುಟುಂಬಗಳ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದ್ದು, 40,671 ಕುಟುಂಬಗಳ ಸಮೀಕ್ಷೆ ಬಾಕಿ ಇರುತ್ತದೆ.

- ವಿವಿಧ ರಾಜ್ಯಗಳಿಂದ ಆಗಮಿಸಿದ ವಲಸೆ ಕಾರ್ಮಿಕರ/ಪ್ರವಾಸಿಗರ/ ವಿದ್ಯಾರ್ಥಿಗಳ/ಭಕ್ತಾದಿಗಳ ಮತ್ತು ಇತರೆ ಜನರ ಒಟ್ಟು ಸಂಖ್ಯೆ 7722 ಆಗಿದ್ದು, ಇವುಗಳಲ್ಲಿ 6149 ಜನರು ಹೈ ರಿಸ್ಕ್ ರಾಜ್ಯಗಳಿಂದ ಆಗಮಿಸಿರುತ್ತಾರೆ.

* ಹಾಗೇಯೇ, ಬೆಳಗಾವಿ ಜಿಲ್ಲೆಯಿಂದ ತಮ್ಮ ಸ್ವಂತ ರಾಜ್ಯಗಳಿಗೆ ಒಟ್ಟು 5,358 ಜನರು ಪ್ರಯಾಣಿಸಿರುತ್ತಾರೆ.

**ದಿನಾಂಕ: 07–06–2020 ರಂದು ಕ್ಷೇತ್ರ ಭೇಟಿ ಮಾಡಿರುತ್ತೇನೆ. ಈ ಕೆಳಕಂಡ ಗ್ರಾಮಗಳಿಗೆ ಭೇಟಿ ನೀಡಿರುತ್ತೇನೆ. ಸದರಿ ದಿನದ ವರದಿ:**

* ಕಾಕತಿ ಪಂಚಾಯ್ತಿಗೆ ಭೇಟಿ ನೀಡಿ ಜಲ್ ಜೀವನ್ ಮಿಷನ್ ಅಡಿ ಸಿದ್ಧಪಡಿಸಿದ ಗ್ರಾಮದ ಕ್ರಿಯಾ ಯೋಜನೆ (Village Action Plan) ಅನ್ನು ಗ್ರಾಮದಲ್ಲಿ ಪರಿಶೀಲಿಸಿರುತ್ತೇನೆ.

* ಪ್ರತಿ ಮನೆಗೆ ನಲ್ಲಿ ಸಂಪರ್ಕ ನೀಡಲು ಮಾಡಿರುವ ವ್ಯವಸ್ಥೆ ಬಗ್ಗೆ ಗ್ರಾಮ ಪಂಚಾಯ್ತಿಯ ಸದಸ್ಯರುಗಳು, ಪಿ.ಡಿ.ಓ ಮತ್ತು ವಾಟರ್ ಮೆನ್‌ಗಳೊಂದಿಗೆ ಚರ್ಚಿಸಿರುತ್ತೇನೆ.

* ನೆರೆ ಪರಿಹಾರದಲ್ಲಿ ಮನೆ ನಿರ್ಮಾಣ ಮಾಡಲು ಮಂಜೂರಾಗಿರುವ ಅನುದಾನದ ಬಳಕೆಯ ಬಗ್ಗೆ ಒಂದು ಮನೆಗೆ ಭೇಟಿ ನೀಡಿ ಪ್ರಗತಿ ಪರಿಶೀಲಸಿರುತ್ತೇನೆ.

* ಕಾಕತಿ, ಹೊನಗ, ಕೆಡನೂರು, ಹಂದಿಗನೂರು ಗ್ರಾಮಗಳಲ್ಲಿ ನರೇಗಾ ಕಾಮಗಾರಿಗಳನ್ನು ವೀಕ್ಷಿಸಿರುತ್ತೇನೆ. ನರೇಗಾ ಕಾಮಗಾರಿಯ ಪ್ರಗತಿ ಸಮಾಧಾನಕರವಾಗಿರುತ್ತದೆ.

(ಎಲ್.ಕೆ.ಅತೀಕ್)
ಸರ್ಕಾರ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ದಿನಾಂಕ : 01.06.2020 ರಂದು ಕೋಲಾರ ಜಿಲ್ಲೆಗೆ ಪ್ರವಾಸ ಮಾಡಿದ ಬಗ್ಗೆ ವರದಿ.

---

1 ನೇ ಜೂನ್ 2020 ಕೋಲಾರಕ್ಕೆ ಭೇಟಿ

- ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು- ಕೆ.ಜಿ.ಎಫ್., ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ, ಅಪರ ಜಿಲ್ಲಾಧಿಕಾರಿ, ಸಹಾಯಕ ಕಮೀಷನರ್ ಹಾಗೂ ಇತರೆ ಅಧಿಕಾರಿಗಳೊಂದಿಗೆ ಕೋಲಾರ ಜಿಲ್ಲೆಯ ಪ್ರಗತಿ ಕುರಿತು ಚರ್ಚಿಸಲಾಯಿತು.

- ಕೋವಿಡ್ ಪಾಸಿಟಿವ್ ಪ್ರಕರಣಗಳು, ಸಂಪರ್ಕಹೊಂದಿದ ವ್ಯಕ್ತಿಗಳ ಪತ್ತೆಹಚ್ಚುವಿಕೆ, ಕಂಟೈನ್‌ಮೆಂಟ್ ಪ್ರದೇಶಗಳು, ಮನೆ-ಮನೆ ಭೇಟಿ, ಕೋವಿಡ್ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸುವುದರ ಕುರಿತಂತೆ ಪರಿಶೀಲನೆ ಕೈಗೊಳ್ಳಲಾಯಿತು.

- ಕೃಷಿ ಉತ್ಪನ್ನಗಳ ಕುರಿತು ಉಪನಿರ್ದೇಶಕರು, ತೋಟಗಾರಿಕೆ ಇವರೊಂದಿಗೆ ಚರ್ಚಿಸಲಾಯಿತು.

- ಕೋಲಾರ ಮತ್ತು ಕೆ.ಜಿ.ಎಫ್‌ನಲ್ಲಿ ಕೃಷಿ ಮಾರುಕಟ್ಟೆಗಳ ಕುರಿತು ಚರ್ಚಿಸಲಾಯಿತು.

- ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಲಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

# Report by District In-charge Secretary

**Date: 11-06-2020**

A. Name of District: **CHIKKAMAGALURU**

**B.** Name of District In-charge Secretary: **DR SHALINI RAJANEESH, IAS., ADDITIONAL CHIEF SECRETARY TO THE GOVERNMENT PLANNING PROGRAMME MONITORING AND STATISTICS DEPARTMENT**

## I. Contact Tracing of Covid-19 positive persons:

1. Have sufficient no. of Contact Tracing teams formed to enable tracing of contacts of Covid-19 positive person within 24 hours?

**Team 1 – 48**
**Team 2 - 168**

| **YES** | |
|---|---|

2. Any suggestions on improving contact tracing in the district (In not more than 50 words).

**No Suggestions**

| | **NO** |
|---|---|

3. No. of primary and secondary contacts per COVID positive case:

| Sl No | Case Number | No. Of Primary Contacts | No.of Secondary Contacts |
|---|---|---|---|
| 1 | P-1388 | 03 | 07 |
| 2 | P-1389 | 05 | 05 |
| 3 | P-1390 | 03 | 04 |
| 4 | P-1625 | 01 | 09 |
| 5 | P-1626 | 01 | 10 |
| 6 | P-1627 | 01 | 11 |
| 7 | P-1628 | 01 | 08 |
| 8 | P-1629 | 01 | 09 |
| 9 | P-2402 | 13 | 17 |
| 10 | P-2404 | 18 | 09 |
| 11 | P-2405 | 09 | 07 |
| 12 | P-2451 | 07 | 10 |
| 13 | P-2468 | 01 | 10 |
| 14 | P-2485 | 29 | 08 |
| 15 | P-2765 | 04 | 09 |
| 16 | P-2766 | 04 | 08 |

4. Has the district administration done exhaustive contact tracing without leaving out any contacts?

| YES | |
|---|---|

**(For Primary and Secondary Contact of Covid-19 Positive cases from outside the District)**

5. Any shortcoming notice in Contract Tracing (In not more than 50 words).

   **NO**

6. Whether the Hospitals and Hostels where Primary contacts are kept in isolation are in good and hygienic conditions?

| YES | |
|---|---|

7. Whether the tests on 12th day of Primary and Secondary contacts before release from isolation are being done?

| YES | |
|---|---|

## II. Containment and Buffer Zones:

1. Whether all Containment and Buffer Zones have been notified for various Covid-19 positive cases (within 28 days of them being identified)?

| YES | |
|---|---|

2. Have you checked the maps of all Containment Zone and visited few (with necessary precaution)?

| YES | |
|---|---|

Details of Containment Zone visited:

Observation (In not more than 50 words):

3. Whether Incident Commander/Executive Magistrate is appointed for Containment Zone and Buffer Zone?

| | |
|---|---|
| **YES** | |

4. Whether there is effective surveillance for ILIs/SARI in Containment Zone and Buffer Zone?

| | |
|---|---|
| **YES** | |

Any improvements required / Observations (In not more than 50 words).

| | |
|---|---|
| | **NO** |

## III. Surveillance and Facilities for Covid:

1. Whether any reports on samples sent for testing to the designated lab are pending in the districts?
(Your suggestions on lab tests: (In not more than 50 words)).

**A total number of 3467 Samples have been sent till 10-06-2020 out of which 16 Samples have received with Positive, 3408 Samples Negative and remaining 43 samples report are pending.**

2. Whether Hydroxy Chloroquine Sulphate (HCQ) been given to health workers/health staff as per circular issued by HFW?

| | |
|---|---|
| **Yes** | |

3. Whether you have visited the dedicated Covid Hospitals?

| Yes | |
|---|---|

Observation on dedicated Covid Hospital (In not more Than 100 words)

**Advise to Increase the No of Ventilators to atleast 10.**

4. Whether Contingency plan as per targets given by state is prepared?

| Yes | |
|---|---|

5. (a) Whether staff required for Contingency Plan has been identified.

| Yes | |
|---|---|

(b) Whether staff above is trained?

| Yes | |
|---|---|

**Overall Observation:**

1. Chikkamagaluru District is well prepared in terms of Planning, Logistics & Personal Protective Equipments.
2. Cloth mask have been provided to the citizen at free of cost
3. 54 Contact Tracing teams have been tracing primary and secondary contacts under team 01 and team 02
4. Team-01 contains 48 members and Team-02 contains 168 members
5. Of 16 Positive cases; all 16 cases were declared cured and discharged from the Dedicated Covid Hospital

**Date: 11-06-2020**

Shali

**Name of the District In-charge Secretary**
**Designation**

CNo - 14294-35/2020 / ACS-WRD
16/06/2020.

## Note on Tumkur District, related to COVID-19 as on 06.06.2020.

**01. Review status of Surveillance activities in the District - SARI and ILI and their monitoring protocols.**

a. Total No of SARI Cases : 289
b. Total No of ILI Cases : 3182

**02. Formation of Committees as per the instructions issued by Revenue (DM)**

As per direction issued by GOK vide Circular NO:ಕಂಇ 83 ಟಿಎನ್‌ಆರ್ 2020, Dated:04.04.2020 Committees has been constituted and committees are working as per the GOK Circular. (Copy Attached)

**03. Has the Contingency/District level Crisis Management plan been prepared for the District.**

Contingency/District level Crisis Management plan has been prepared. (Plan attached)

**04. Have the formats for review been filled in by the district:** Yes

**05. Status of Supplies-Medicines, Medical Materials.**

The details of Medicines, Medical Materials Available as fallows

a. PPE's - 770
b. N-95 Mask –10093
c. Triple Layer Mask – 0
d. Sanitizers 500 ml – 323
e. Sanitizers 5000 ml – 986
f. Viral Transport media 1X25 - 207

**06. Has the HR plan been prepared as per the Contingency/District level Crisis Management plan:** Yes.(Plan attached)

**07. Containment plan for affected areas for the District.**

a. On 30th of May containment area for Tumkur Town-Ward No-08 has been de notified Since 28 days has been completed from the date of Patient No. P-535(Deceased) & P-553 and not further patients has been tested positive in the same containment zone.
b. On 31st of May P-2922 positive case in Tumkur Town, as soon as positive diagnosed, the area where the P-2922 house located from his house 100 mt's boundary was fixed entire containment zone was cordoned to barricades only one entry and one exit point was planned. People movements are restricted in containment area.

a. Proper arrangements are made to provide daily necessaries those who are in containment zone.
b. Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.
c. As total 19 patients who came from Other States tested positive and all of they were Quarantined in Govt Hostel from the day of their arrival. Hence no need of notifying containment zone.(Patient No:- P-792, P-793, P-794, P-1401, P-1402, P-1403, P-1404, P-1611, P-1612, P-1613, P-1614, P-1615, P-1623, P-1970, P-2343, P-2771, P-2772, P-3732 & P-3733)

08. **Availability of Money under SDRF and Health.**

Availability of Money Under SDRF – 167.50 Lakhs (Uncommitted Amount)
Availability of Money Under Health – 0

09. **Protection of frontline staff**

a. Health – PPE and N95 masks has been distributed to Frontline Health workers and direction has been given to Health workers regarding use of PPE Equipment.
b. Municipalities – Masks given to municipality workers and instructions given to all workers.
c. Police – Instructions has been given to police officials to wear mask.

10. **Migrant Labour and Homeless:**

As per the direction given by the Govt all the migrant labuors sheltered in Govt relief camp were sent to their natives.

11. **Essential commodities - APMC/Cocoon Markets/Groceries/Retail Shops/ Agriculture operations.**

All are functioning normal after unlock.

12. **Periodical updating of Data to State/Monitoring tool.**

Nodal Officer has been appointed for updating information to State/Monitoring tool and its being updated regularly.

13. **Establishment of Lab:**

Lab has been established in district Hospital, Tumkur and it has been started working from 29th of May. Process of sample test has been started.

RAKESH SINGH, I.A.S.
Additional Chief Secretary to Govt.,
Water Resources Department

## III. ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು

1. ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಗಳಲ್ಲಿ ಬಾಕಿ ಉಳಿದಿದೆಯೇ?

   **ಜಿಲ್ಲೆಯಲ್ಲಿ ಯಾವುದೇ ವರದಿ ಬಾಕಿ ಇರುವುದಿಲ್ಲ.**

   **ದಿನಾಂಕ: 17-06-2020ರವರೆಗೆ ಒಟ್ಟು 3644 ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಎಲ್ಲಾ ಮಾದರಿಗಳನ್ನು ಪರೀಕ್ಷಿಸಲಾಗಿದೆ.**

ಲ್ಯಾಬ್ ಪರೀಕ್ಷೆಗಳ ಮಾಹಿತಿ: (50 ಪದಗಳಿಗಿಂತ ಮೀರದಂತೆ).

**ಜಿಲ್ಲೆಯಲ್ಲಿ ಅತ್ಯುನ್ನತವಾದ ಪಿ.ಸಿ.ಆರ್ ಲ್ಯಾಬ್‌ನ್ನು ಸ್ಥಾಪಿಸಲಾಗಿದ್ದು, ಪ್ರತಿ ದಿನ 300 ಕ್ಕೂ ಹೆಚ್ಚು ಪರೀಕ್ಷೆಯ ಸಾಮರ್ಥ್ಯವನ್ನು ಹೊಂದಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ಪರೀಕ್ಷೆ ವರದಿ ಬಾಕಿ ಇರುವುದಿಲ್ಲ.**

2. ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ಆರೋಗ್ಯ ಸಿಬ್ಬಂದಿಯ ಹೈಡ್ರಾಕ್ಸಿನ್ ಸಲ್ಫೇಟ್ (ಎಚ್‌ಸಿಕ್ಯು) ನೀಡಲಾಗಿದೆಯೇ?

   **ಹೌದು**

3. ನೀವು ಮೀಸಲಿರಿಸಿದ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ?

   **ಹೌದು**

4. ನೀವು ಮೀಸಲಾದ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಗಮನಿಸಿದ ಅಂಶಗಳು (50 ಪದಗಳಿಗೆ ಮೀರದಂತೆ)

   **ಜಿಲ್ಲೆಯ ಕೋವಿಡ್-19 ಆಸ್ಪತ್ರೆಯಲ್ಲಿ ಒಟ್ಟು 98 ಹಾಸಿಗೆಗಳಿದ್ದು, ಅದರಲ್ಲಿ 14 ಹಾಸಿಗೆಗಳನ್ನು ಐ.ಸಿ.ಯು ಆಗಿ ಮಾರ್ಪಾಡಿಸಲಾಗಿದೆ. 50 ಹಾಸಿಗೆಗಳಿಗೆ ಹೊಸದಾಗಿ ಸೆಂಟ್ರಲೈಸ್ಡ್ ಆಕ್ಸಿಜನ್ ಸೌಲಭ್ಯ ಕಲ್ಪಿಸಲಾಗಿದೆ, 05 ವೆಂಟಿಲೇಟರ್‌ಗಳನ್ನು ಹೊಸದಾಗಿ ಅಳವಡಿಸಲಾಗಿದ್ದು, ಇನ್ನು 10 ವೆಂಟಿಲೇಟರ್‌ಗಳು ಖರೀದಿಸಲು ಕ್ರಮವಹಿಸಲಾಗಿದೆ.**

5. ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?

ಹೌದು

5(ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?

ಹೌದು

5(ಬಿ) ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?

ಹೌದು

ಒಟ್ಟಾರೆ ವೀಕ್ಷಿಸಿದ ಅಂಶಗಳು:

ಚಾಮರಾಜನಗರ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಭೋದನಾ ಆಸ್ಪತ್ರೆಯನ್ನು **COVID 19 Hospital with ICU (14 Beds)** ಗುರುತಿಸಲಾಗಿದ್ದು, **200 Beds COVID Care Centre, 60 Beds dedicated COVID Health Centre** ಮತ್ತು **3 Fever Clinics** ಗಳನ್ನು ಗುರುತಿಸಲಾಗಿದೆ. ಸದರಿ ಕೇಂದ್ರಗಳಿಗೆ ಅವಶ್ಯವಿರುವ **Medicos/ Paramedicos**ಗಳ ಸಂಖ್ಯೆ ಅಂದಾಜಿಸಿದ್ದು, ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳಿಂದ ನಿರ್ವಹಣೆ ಮಾಡಬಹುದಾಗಿದೆ. ಚಾಮರಾಜನಗರ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಭೋದನಾ ಆಸ್ಪತ್ರೆಯಲ್ಲಿ **RT-PCR virology lab** ಸಿದ್ಧವಾಗಿದೆ ಹಾಗೂ ಪರೀಕ್ಷೆಗಳು ನಡೆಯುತ್ತಿದೆ. **N95 Masks, PPE, Thermal Scanners Sufficient Stock** ಅಗತ್ಯಗೆ ಅನುಗುಣವಾಗಿ ದಾಸ್ತಾನಿನಲ್ಲಿ ಲಭ್ಯವಿದೆ. ಇದಲ್ಲದೇ ಜಿಲ್ಲಾಡಳಿತದಿಂದ ಪ್ರತ್ಯೇಕವಾಗಿ ಅಗತ್ಯವಿರುವ ಸಾಮಗ್ರಿಗಳನ್ನು ಖರೀದಿ ಮಾಡಲಾಗುತ್ತಿದೆ. ಜಿಲ್ಲಾಡಳಿತದಿಂದ ಕೋವಿಡ್-19 ನಿಯಂತ್ರಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ದಿನಾಂಕ: 19/06/2020

(ಬಿ.ಬಿ.ಕಾವೇರಿ)
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಚಾಮರಾಜನಗರ.

## Report by Ramanagara District In-charge Secretary

Dated:11/6/20 Dated 11/6/20

A. Name of the District: **Ramanagara**

B. Name of the District In-charge Secretary: **Dr. K G Jagadeesha, I. A. S, Commissioner of Public Instruction**

### I. Contact Tracing of COVID positives persons:

1. Have sufficient no of contact tracing teams formed to enable tracing of contacts of COVID positive person within 24 hours?

Yes

| Taluk Name | No of teams | |
|---|---|---|
| | A | B |
| Channapatana | 40 | 62 |
| Kanakapura | 19 | 97 |
| Magadi | 40 | 40 |
| Ramanagara | 45 | 73 |
| **Total** | **144** | **272** |

2. Any suggestions on improving contact tracing in the district?

Booth level teams have been formed with BLO, PDO, and Revenue staff, these teams are working as Gram Panchayat Taskforce. BLOand ASHA are visiting door to door surveys and using **Health watch app** for tracking the health details of the population. For enforcement of quarantine measures after tracing, PDO and Revenue staff are using as **Quarantine watch app.** Health staff are doing contact tracing by using **Contact tracing app. Containment App** is being used to track people in the Containment zone.

3. Number of primary and secondary contacts per COVID positive cases:

   a. Primary contacts (High risk):**213**
   b. Secondary contacts (Low risk):**460**

   **Remarks:**

   1. **3 tested positive for COVID with Contact from P4337** at **DCH**
   2. **2 tested positive for COVID with contact from P 3360**(Bangalore) at **DCH**

Scanned with CamScanner

3. **Family of 3** returned to Magadi Taluk from**Maharastra**and tested and quarantined at institution, **1 female**among 3 **tested positive for COVID**currently at **DCH**
4. Male aged about 17 years from Kanakapura with symptoms of ILI got tested at Kanakapura GH and tested positive for COVID, suffering from valvular heart disease shifted to Victoria hospital Bangalore.
5. Cancer patient from Channapatna Taluk who is on chemotherapy at KIMS, Bangalore with ILI was tested positive and shifted to Victoria hospital for further treatment.
6. A person from Ramanagar Taluk, with symptoms of ILI, went to Bangalore for treatment and was diagnosed as COVID positive, he was **accompanied by his son, who was tested positive for COVID in our Ramanagara District** and currently admitted at DCH (Ramanagar COVID referral hospital).
7. Another**police working in Ramanagar jail**, wanted to go to Belgaum for training, so he wanted to get tested and volunteered for test, later he was tested positive for COVID and currently admitted at DCH.
8. A family of 4 members had travelled from Tamil Nadu to Marasandra village, KudurHobli, Magadi Taluk, Ramanagara on 9/05/2020, all 4 were tested at Magadi GH. among 4-person, 1 Antenatal mother, **1 child of 2 years** were there in the family, so they were asked for strict home quarantine at their village. On their 12th day swabbing, 2-year child turned positive for COVID-19. Child had no symptoms of COVID, for managing the infection, child was shifted to Victoria hospital, Bangalore along with his father for treatment.
9. This list also includes contacts of positive cases among Padarayanapura, Bangalore offenders who were imprisoned at Ramanagara District prison patients and contacts of positive cases identified in other Districts.

4. Has the District administration done exhaustive contact tracing without leaving out any contacts?

| |
|---|
| Yes |

**Remarks:** All primary and secondary contacts have been traced within 8 hours of initiation. Secondary contacts of Kanakapura patients is in progress. Secondary contacts of Magadi bus depot KSRTC bus driver have been identified at various districts, letter to the respective District DSO has been corresponded to track them at the earliest, **contact tracing** app is also being used for this purpose.

Scanned with CamScanner

5. Any shortcoming notices in Contact tracing

NIL

6. Whether the hospitals and hostels where primary contacts are kept in isolationare in good and hygienic conditions?

Yes

   b. N-95 Mask –8023
   c. Triple Layer Mask – 4660
   d. Sanitizers 500 ml – 285
   e. Sanitizers 5000 ml – 740
   f. Viral Transport media 1X25 - 155

06. **Has the HR plan been prepared as per the Contingency/District level Crisis Management plan:** Yes.(Plan attached)

07. **Containment plan for affected areas for the District.**

   a. On 06th of June containment area for Sira Town has been de notified Since 28 days has been completed from the date of Patient No. P-764 and not further patients has been tested positive in the same containment zone.
   b. On 10th of June, P-5813 positive case in Sira Town, & on 13.06.2020 P-6400, P-6401, P-6402, P-6403, P-6404 & P-6405 positive cases in Sira Town(All these cases are primary contact of P-5813) as soon as positive diagnosed, the area where the Patients house located from his

## ಶ್ರೀ ವಿ.ಅನ್ಬುಕುಮಾರ್ ಭಾ.ಆ.ಸೇ., ವಿಶೇಷ ಆಯುಕ್ತರು (ಆಡಳಿತ), ಬಿಬಿಎಂಪಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ

## ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | ವರದಿ |
|---|---|---|
| 1. | ಉಸ್ತುವಾರಿ ಜಿಲ್ಲೆಯ ಹೆಸರು | ಕೊಡಗು |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ವಿ.ಅನ್ಬುಕುಮಾರ್ |
| 3. | ಪ್ರವಾಸ ಕೈಗೊಂಡ ದಿನಾಂಕ | ದಿನಾಂಕ:21-06-2020 & 22-06-2020 |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಮಳೆಗಾಲವನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ಹಾನಿ ಬಗ್ಗೆ ತುರ್ತು ಸೂಕ್ತ ಕ್ರಮಕ್ಕಾಗಿ ಹೋಬಳಿವಾರು ನೋಡಲ್ ಅಧಿಕಾರಿಯವರನ್ನು ನೇಮಿಸಲಾಗಿದ್ದು, ಎನ್‌ಡಿಆರ್‌ಎಫ್ ತಂಡವನ್ನು ರಕ್ಷಣಾ ಕಾರ್ಯಕ್ಕೆ ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದ್ದು, ಅಗತ್ಯ ರಕ್ಷಣಾ ಸಾಮಗ್ರಿಗಳನ್ನು ಖರೀದಿಸಲಾಗಿರುತ್ತದೆ.<br><br>ಜಿಲ್ಲೆಯಲ್ಲಿ ಕೋವಿಡ್-19 ಟೆಸ್ಟಿಂಗ್ ಲ್ಯಾಬ್ ಸ್ಥಾಪಿಸಲಾಗಿದ್ದು, ಸದರಿ ಲ್ಯಾಬ್‌ನಲ್ಲಿ ದಿನಕ್ಕೆ ಸರಾಸರಿ 1000 ಮಾದರಿಯನ್ನು ಪರೀಕ್ಷಿಸಬಹುದಾಗಿದೆ. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಜಿಲ್ಲೆಯಲ್ಲಿ ಈವರೆಗೆ 5 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಈ ಪೈಕಿ ಒಬ್ಬರು ಗುಣಮುಖರಾಗಿದ್ದು, ಹಾಲಿ 4 ಪ್ರಕರಣ ಚಿಕಿತ್ಸೆಯಲ್ಲಿರುತ್ತದೆ ಇದರಲ್ಲಿ ದಿನಾಂಕ:22-06-2020ರಂದು ದೃಢಪಟ್ಟ 2 ಪ್ರಕರಣಗಳ ಪೈಕಿ 1 ಮಹಾರಾಷ್ಟ್ರ ರಾಜ್ಯದಿಂದ ಬಂದ ವ್ಯಕ್ತಿಯ ಪ್ರಕರಣವು ನೇರವಾಗಿ ಕೋವಿಡ್ ಆಸ್ಪತ್ರೆಗೆ ದಾಖಲಾಗಿದ್ದು, ಇನ್ನೊಬ್ಬರು ಬೆಂಗಳೂರಿನಿಂದ ಬಂದಿದ್ದು, ಇವರ ಸಂಪರ್ಕಿತರನ್ನು ಪತ್ತೆ ಹಚ್ಚಲಾಗುತ್ತಿದೆ ಮತ್ತು ಜಿಲ್ಲೆಯಲ್ಲಿ ಕೋವಿಡ್-19 ಟೆಸ್ಟಿಂಗ್ ಲ್ಯಾಬ್ ಸ್ಥಾಪಿಸಲಾಗಿದ್ದು, ಸದರಿ ಲ್ಯಾಬ್‌ನಲ್ಲಿ ದಿನಕ್ಕೆ ಸರಾಸರಿ 1000 ಮಾದರಿಯನ್ನು ಪರೀಕ್ಷಿಸಬಹುದಾಗಿದ್ದು, ಲ್ಯಾಬ್ ಟೆಕ್ನಿಷಿಯನ್ ಕೊರತೆಯಿದ್ದು, ಸರ್ಕಾರಕ್ಕೆ ಕೋರಿಕೆ ಸಲ್ಲಿಸಲಾಗಿದ್ದು, ಕ್ವಾರಂಟೈನ್ ವಾಚ್ ಆಪ್‌ನ್ನು ತಾಲ್ಲೂಕುವಾರು ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿರುತ್ತದೆ. |

| | | |
|---|---|---|
| b) | | ಜಿಲ್ಲೆಯಲ್ಲಿ ಕೋವಿಡ್ ಸೋಂಕು ಮಾದರಿ ಪರೀಕ್ಷೆ ಹೆಚ್ಚಾಗಿ ಮಾಡಬೇಕು. ಹೋಮ್ ಸ್ಟೆ, ಟೂರಿಸ್ಟ್, ಕೆಎಸ್ಆರ್‌ಟಿಸಿ, ಕಂದಾಯ ಇಲಾಖೆ, ಗ್ರಾಮ ಪಂಚಾಯತ್ ಸಿಬ್ಬಂದಿಗಳು ಹಾಗೂ ಇತರೆ ಎಲ್ಲಾ ಇಲಾಖೆಯ ಸಿಬ್ಬಂದಿಗಳು ಮತ್ತು ರಾಜಕೀಯ ಪ್ರತಿನಿಧಿಗಳನ್ನು ಚೆಕ್ ಮಾಡಲು ಮತ್ತು ಎಲ್ಲಾ ಪ್ರದೇಶಗಳ ವ್ಯಕ್ತಿಗಳನ್ನು ಪರೀಕ್ಷಿಸತಕ್ಕದ್ದು. ಜಿಲ್ಲೆಯಲ್ಲಿನ ಖಾಸಗಿ ಆಸ್ಪತ್ರೆಗೆ ಸಹ ಅಸ್ವಸ್ಥತೆಗೆ ಚಿಕಿತ್ಸೆಗೆ ದಾಖಲಾಗುವವರ ಮಾದರಿ ಪರೀಕ್ಷಿಸಲು ಕಟ್ಟುನಿಟ್ಟು ಕ್ರಮ ತೆರೆಯಲು ಹಾಗೂ ಪಾಸಿಟಿವ್ ದೃಢಪಟ್ಟಲ್ಲಿ ಸದರಿ ಆಸ್ಪತ್ರೆ ಮುಚ್ಚಿಸುವುದಿಲ್ಲವೆಂದು ಮಾಲೀಕರಿಗೆ ಮನದಟ್ಟು ಮಾಡತಕ್ಕದ್ದು. ಜಿಲ್ಲೆಯಲ್ಲಿ ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ಸಂಬಂಧ ಜಿಲ್ಲಾಧಿಕಾರಿಗಳು ಆದೇಶಿಸಲು ಹಾಗೂ ಹೋಮ್ ಕ್ವಾರೆಂಟೆನ್ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಸೂಚಿಸಲಾಯಿತು.<br><br>ಸರ್ಕಾರದ ಸೂಚನೆಯಂತೆ ಸಿಬ್ಬಂದಿಗಳ ಪ್ರಮಾಣ ಕಡಿಮೆ ಮಾಡಬೇಕು, ಆದಷ್ಟು ಸಭೆಗಳನ್ನು ಮೊಬೈಲ್, ಆನ್‌ಲೈನ್, ವಿಡಿಯೋ ಸಂವಾದ ಮುಖೇನ ಮಾಡಲು ವ್ಯವಸ್ಥೆ ಮಾಡತಕ್ಕದ್ದು. ಮುಂಬರುವ ಶಾಲಾ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗುಂಪುಗೂಡದಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಹಗೂ ಪರೀಕ್ಷೆ ಮಾಹಿತಿಯ ಫಲಕವನ್ನು ಜಾಸ್ತಿ ಹಾಕಬೇಕು, ಶುದ್ಧ ನೀರಿನ ವ್ಯವಸ್ಥೆ ಮತ್ತು ಆಸನ ವ್ಯವಸ್ಥೆ ಮಾಡತಕ್ಕದ್ದೆಂದು ನಿರ್ದೇಶಿಸಲಾಯಿತು.<br><br>ಕೋವಿಡ್ ಆಸ್ಪತ್ರೆಯ ಪ್ರತಿ ವಾರ್ಡ್‌ಗೆ ಪ್ರತ್ಯೇಕ ಶೌಚಾಲಯ ಇರಬೇಕು ಮತ್ತು ಶೌಚಾಲಯದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಮತ್ತು ರೋಗಿಗೆ ಉತ್ತಮ ಆಹಾರ ಒದಗಿಸಬೇಕು, ಹೊರ ಜಿಲ್ಲೆಯಿಂದ ಬರುವವರನ್ನು ರೋಗದ ಗುಣ ಲಕ್ಷಣ ಇರುವವರನ್ನು ಮತ್ತು ಇಲ್ಲದವರನ್ನು ಸಹ ಪರೀಕ್ಷಿಸಲು ತಿಳಿಸಲಾಯಿತು. |
| | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | |

...3

| | | |
|---|---|---|
| | | ಕಳೆದ ಸಾಲಿನಲ್ಲಿ ಭಾಗಮಂಡಲದಲ್ಲಿ ಬೋಟ್ ಉಪಯೋಗಿಸುವ ಸಂದರ್ಭದಲ್ಲಿ ಅಗತ್ಯ ಉಪಸಾಧನಗಳು ಮತ್ತು ಅದರ ಬಳಕೆಯ ಜ್ಞಾನದ ಕೊರತೆಯಿಂದ ರಕ್ಷಣಾ ಕಾರ್ಯಗಳು ವಿಳಂಭವಾಗುತ್ತಿರುವುದು ಸ್ವತಃ ಕಂಡು ಬಂದಿದ್ದು, ಈ ರೀತಿ ಮುಂದೆ ಆಗದಂತೆ ರಕ್ಷಣಾ ಸಾಮಗ್ರಿಗಳನ್ನು ಬಳಸಲು ಸಂಬಂಧಿಸಿದವರಿಗೆ ಅಗತ್ಯ ತರಭೇತಿ ನೀಡುವುದು ಮತ್ತು ಅಣಕು ಪ್ರದರ್ಶನ ಮಾಡುವುದು ಮತ್ತು ಮುಂಜಾಗ್ರತೆಯಾಗಿ ಸಂತ್ರಸ್ಥರ ಕಾಳಜಿ ಕೇಂದ್ರಕ್ಕೆ ಸೂಕ್ತ ಕಟ್ಟಡ ಗುರುತಿಸಲು ಹಾಗೂ ಪ್ರಕೃತಿ ವಿಕೋಪದಿಂದ ಕೋವಿಡ್ ಹೆಚ್ಚಾಗಿ ಹರಡುವ ಸಂಭವವಿದ್ದು, ಇದಕ್ಕೆ ಎಡೆಮಾಡಿ ಕೊಡದಂತೆ ಕ್ರಮ ವಹಿಸಲು ಸೂಚಿಸಲಾಯಿತು. |
| B | ಕ್ಷೇತ್ರ ವೀಕ್ಷಣೆ | ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ರೋಗಿಗಳಿಗೆ ಮುಂಜಾಗ್ರತಾ ಕ್ರಮವಾಗಿ ಮಾಡಿರುವ ವ್ಯವಸ್ಥೆಗಳನ್ನು ವೀಕ್ಷಿಸಲಾಯಿತು. |

(ವಿ.ಅನ್ಬುಕುಮಾರ್)

ವಿಶೇಷ ಆಯುಕ್ತರು (ಆಡಳಿತ) ಹಾಗೂ

ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:22.06.2020 ರಂದು ಉಪ ಆಯುಕ್ತರು, (ಆಡಳಿತ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ, ಕೋವಿಡ್–19 ಮತ್ತು ಮುಂಬರುವ ಮಳೆ ಹಾನಿ ಮುಂಜಾಗ್ರತ ಸಂಬಂಧ ನಡೆದ ಸಭೆಯ ನಡವಳಿ**

*****

**ಹಾಜರಾತಿ: ಹಾಜರಾತಿ ವಹಿಯಂತೆ.**

ಅಪರ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಇವರು ಸಭೆಗೆ ಆಗಮಿಸಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿ ಕೊಡಗು ಜಿಲ್ಲೆ, ಇವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್–19 ರ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ ಜಿಲೆಯಲ್ಲಿ ಇಲ್ಲಿಯವರೆಗೆ ಒಟ್ಟು 5 ಕೋವಿಡ್–19 ದೃಢಪಟ್ಟಿದ್ದು ಈ ಪೈಕಿ 1 ಗುಣಮುಖರಾಗಿದ್ದು ಹಾಲಿ 4 ಪ್ರಕರಣ ಚಿಕಿತ್ಸೆಯಲ್ಲಿರುತ್ತದೆ ಇದರಲ್ಲಿ ಈ ದಿನ ದೃಢಪಟ್ಟ 2 ಪ್ರಕರಣಗಳ ಪೈಕಿ 1 ಮಹಾರಾಷ್ಟ್ರ ರಾಜ್ಯದಿಂದ ಬಂದ ವ್ಯಕ್ತಿಯ ಪ್ರಕರಣವು ನೇರವಾಗಿ ಕೋವಿಡ್ ಆಸ್ಪತ್ರೆಗೆ ದಾಖಲಾಗಿದ್ದು, ಇನ್ನೊಬ್ಬರು ಬೆಂಗಳೂರಿನಿಂದ ಬಂದಿದ್ದು ಇವರ ಸಂಪರ್ಕಿತರನ್ನು ಪತ್ತೆಹಚ್ಚಲಾಗುತ್ತಿದೆ. ಮತ್ತು ಜಿಲ್ಲೆಯಲ್ಲಿ ಕೋವಿಡ್–19 ಟೆಸ್ಟಿಂಗ್ ಲ್ಯಾಬ್ ಸ್ಥಾಪಿಸಲಾಗಿದ್ದು, ಸದರಿ ಲ್ಯಾಬ್‌ನಲ್ಲಿ ದಿನಕ್ಕೆ ಸರಸಾರಿ 1000 ಮಾದರಿಯನ್ನು ಪರೀಕ್ಷಿಸಬಹುದು, ಲ್ಯಾಬ್ ಟೆಕ್ನಿಷಿಯನ್ ಕೊರತೆಯಿದ್ದು ಸರ್ಕಾರಕ್ಕೆ ಕೋರಿಕೆ ಸಲ್ಲಿಸಲಾಗಿದೆ. ಮತ್ತು ಕ್ವಾರಂಟೈನ್ ವಾಚ್ ಆ್ಯಪ್‌ನ್ನು ತಾಲ್ಲೂಕುವಾರು ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ. ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಉತ್ತಮ ತಂಡ ಮತ್ತು ಸೌಕರ್ಯಗಳು ಇದ್ದು ಕೋವಿಡ್ ಸೊಂಕು ಇರುವ ಬಗ್ಗೆ ಮಾದರಿ ಪರೀಕ್ಷೆ ಜಾಸ್ತಿ ಮಾಡಬೇಕು ಹೋಮ್ ಸ್ಟೇ, ಟೂರಿಸ್ಟ್, ಕೆಎಸ್‌ಆರ್‌ಟಿಸಿ, ಕಂದಾಯ ಇಲಾಖೆ, ಗ್ರಾಮ ಪಂಚಾಯತ್ ಸಿಬ್ಬಂದಿಗಳು ಹಾಗೂ ಇತರೆ ಎಲ್ಲಾ ಇಲಾಖೆಯ ಸಿಬ್ಬಂದಿಗಳು, ಮತ್ತು ರಾಜಕೀಯ ಪ್ರತಿನಿಧಿಗಳನ್ನು ಚೆಕ್ ಮಾಡಲು ಮತ್ತು ಎಲ್ಲಾ ಪ್ರದೇಶಗಳ ವ್ಯಕ್ತಿಗಳನ್ನು ಪರಿಕ್ಷೀಸಲು ತಿಳಿಸಿದರು.

ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗೆ ಸಹ ಅಸ್ವಸ್ಥತೆಗೆ ಚಿಕಿತ್ಸೆಗೆ ದಾಖಲಾಗುವವರ ಮಾದರಿ ಪರೀಕ್ಷಿಸಲು ಕಟ್ಟುನಿಟ್ಟು ಕ್ರಮತೆಗೆದುಕೊಳ್ಳಬೇಕು ಈ ಸಂದರ್ಭದಲ್ಲಿ ಪಾಸಿಟಿವ್ ಧೃಢಪಟ್ಟಲ್ಲಿ ಆಸ್ಪತ್ರೆ ಮುಚ್ಚಿಸುವುದಿಲ್ಲ ಎಂಬುದನ್ನು ಆಸ್ಪತ್ರೆಯವರಿಗೆ ಮನದಟ್ಟು ಮಾಡಿ ಸದರಿಯವರ ಸಹಕರ ಪಡೆದು ಪೂರ್ಣವಾಗಿ ಎಲ್ಲರನ್ನು ಪರೀಕ್ಷಿಸಲು ಕ್ರಮತೆಗೆದುಕೊಳ್ಳಲು ಸೂಚಿಸಿದರು.

ಜಿಲ್ಲೆಯಲ್ಲಿ ಮಾಸ್ಕ್ ಧರಿಸದಿದ್ದರೆ ದಂಢ ವಿಧಿಸಲು ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಆದೇಶಿಸಲು ಅಧಿಕಾರವಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು, ಮತ್ತು ಹೋಮ್ ಕ್ವಾರೆಂಟಿನ್ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಮತ್ತು ಕಛೇರಿಯಲ್ಲಿ ಸರ್ಕಾರದ ಸೂಚನೆಯಂತೆ ಸಿಬ್ಬಂದಿಗಳ ಪ್ರಮಾಣ ಕಡಿಮೆ ಮಾಡಬೇಕು ಸಭೆಗಳನ್ನು ಆದಷ್ಟು ಮೊಬೈಲ್ . ಆನ್‌ಲೈನ್, ವೀಡಿಯೋ ಸಂವಾದ ಮೂಲಕ ಮಾಡಬೇಕು. ಮಾರುಕಟ್ಟೆಯಲ್ಲಿ ಎಲ್ಲರು ಮಾಸ್ಕ್ ಧರಿಸುತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಶಾಲಾ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗುಂಪುಗೂಡದಂತೆ ಪರೀಕ್ಷೆ ಮಾಹಿತಿಯ ಫಲಕವನ್ನು ಜಾಸ್ತಿ ಹಾಕಬೇಕು. ಸೂಕ್ತ ನೀರಿನ ವ್ಯವಸ್ಥೆ, ಮತ್ತು ಆಸನ ವ್ಯವಸ್ಥೆ ಮಾಡಲು ತಿಳಿಸಿದರು.

ಕೋವಿಡ್ ಆಸ್ಪತ್ರೆಯ ಪ್ರತಿ ವಾರ್ಡ್‌ಗೆ ಪ್ರತ್ಯೇಕ ಶೌಚಲಾಯ ಇರಬೇಕು ಮತ್ತು ಶೌಚಲಾಯದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು, ಮತ್ತು ರೋಗಿಗೆ ಉತ್ತಮ ಆಹಾರ ಒದಗಿಸಬೇಕು ಹೊರ ಜಿಲ್ಲೆಯಿಂದ ಬರುವವರನ್ನು ರೋಗದ ಗುಣ ಲಕ್ಷಣ ಇರುವವರನ್ನು ಮತ್ತು ಇಲ್ಲದವರನ್ನು ಸಹ ಪರೀಕ್ಷಿಸಲು ತಿಳಿಸಿದರು.

ಮುಂದುವರಿದು ಜಿಲ್ಲೆ ಮುಂಬರುವ ಮಳೆಯಿಂದಾಗುವ ಹಾನಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಮತ್ತು ಈ ಸಾಲಿನ ಮಳೆಗೆ ಆದ ಹಾನಿಯ ಮಾಹಿತಿ ನೀಡಲು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ಹಾನಿ ಬಗ್ಗೆ ತುರ್ತು ಸೂಕ್ತ ಕ್ರಮಕ್ಕೆ ಹೋಬಳಿವಾರು ನೋಡಲ್ ಅಧಿಕಾರಿಯವರನ್ನು ನೇಮಿಸಲಾಗಿದೆ. ಮತ್ತು ಎನ್‌ಡಿಆರ್‌ಎಫ್ ತಂಡವನ್ನು ರಕ್ಷಣಾ ಕಾರ್ಯಕ್ಕೆ ಸನ್ನದ ಸ್ಥಿತಿಯಲ್ಲಿರಿಸಲಾಗಿದೆ, ಮತ್ತು ಅಗತ್ಯ ರಕ್ಷಣಾ ಸಾಮಾಗ್ರಿಗಳನ್ನು ಖರೀದಿಸಲಾಗಿದೆ. ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಕಳೆದ ಸಾಲಿನಲ್ಲಿ ಭಾಗಮಂಡಲದಲ್ಲಿ ಬೋಟ್ ಉಪಯೋಗಿಸುವ ಸಂದರ್ಭದಲ್ಲಿ ಅಗತ್ಯ ಉಪಸಾಧನಗಳು ಮತ್ತು ಅದರ ಬಳಕೆಯ ಜ್ಞಾನದ ಕೊರತೆಯಿಂದ ರಕ್ಷಣಾ ಕಾರ್ಯಗಳು ವಿಳಂಭವಾಗುತಿರುವುದು ಸ್ವತಃ ಕಂಡು ಬಂದಿದ್ದು ಈ ರೀತಿ ಮುಂದೇ ಆಗದಂತೆ ರಕ್ಷಣಾ ಸಾಮಾಗ್ರಿಗಳನ್ನು ಬಳಸಲು ಸಂಬಂಧಿಸಿದವರಿಗೆ ಅಗತ್ಯ ತರಬೇತಿ ನೀಡುವುದು. ಮತ್ತು ಅಣಕು ಪ್ರದರ್ಶನ ಮಾಡುವುದು ಮತ್ತು ಮುಂಜಾಗ್ರತೆಯಾಗಿ ಸಂತ್ರಸ್ಥರ ಕಾಳಜಿ ಕೇಂದ್ರಕ್ಕೆ ಸೂಕ್ತ ಕಟ್ಟಡವನ್ನು ಗುರುತಿಸಲು ತಿಳಿಸಿದರು.

ಮುಂದುವರಿದು ಪ್ರಕೃತಿ ವಿಕೋಪ ಸಂದರ್ಭದಲ್ಲಿ ಕೋವಿಡ್ ಹರಡದಂತೆ ಮುಂಜಾಗ್ರತೆ ವಹಿಸಬೇಕಾಗಿರುವುದರಿಂದ ಹೆಚ್ಚು ಕಾಳಜಿ ಕೇಂದ್ರ ಸ್ಥಾಪಿಸಲು ಕಟ್ಟಡ ಗುರುತಿಸುವುದು. ಹಾಗೂ ಇತರೆ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಕಾಮಗಾರಿಯನ್ನು ಮಾಡುವುದು. ಮತ್ತು ಸಂತ್ರಸ್ಥರಿಗೆ ನೀಡಲಾಗುವ ಪರಿಹಾರ ಅನಗತ್ಯವಾಗಿ ತಡ ಅಥವಾ ಬಾಕಿ ಆಗಬಾರದು, ಎಂದು ಸೂಚಿಸಿ ಮುಂಬರುವ ಮಳೆಗೆ ಎಚ್ಚರಿಕೆಯಿಂದ ಎಲ್ಲರೂ ಕಾರ್ಯ ನಿರ್ವಹಿಸಲು ತಿಳಿಸಿ ಈ ಸಂಬಂಧ ಸರ್ಕಾರದಿಂದ ಯಾವುದಾದರೂ ಅಗತ್ಯವಿದ್ದಲ್ಲಿ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ಮುಗಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಅಪರ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ. | ವಿಶೇಷ ಆಯುಕ್ತರು, (ಆಡಳಿತ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಕರ್ನಾಟಕ ಸರ್ಕಾರ |

ಸಂಖ್ಯೆ:ಪ್ರವಿ/23/2020-21, ದಿನಾಂಕ:22.06.2020.

ಪ್ರತಿಯನ್ನು: ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 01.06.2020 ರಂದು ಜರುಗಿದ ಉಡುಪಿ ಕೋವಿಡ್ 19 ನ ಪ್ರಸ್ತುತ ಪರಿಸ್ಥಿತಿ ಬಗ್ಗೆ ಮರಳು ಸಮಸ್ಯೆ ಹಾಗೂ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.30 ಗಂಟೆ** **ಸ್ಥಳ: ಡಾ. ವಿ. ಎಸ್ ಆಚಾರ್ಯ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋತ್ , ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
5) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್ -19 ಸ್ಥಿತಿಗತಿಗಳ ಬಗ್ಗೆ ವಿವರ ಮತ್ತು ಈ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ ನೀಡುವಂತೆ ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರಿಗೆ ಸೂಚಿಸಿದರು. ಕೋವಿಡ್ -19 ನೋಡಲ್ ಅಧಿಕಾರಿಯವರು ಕೋವಿಡ್ -19 ವೈರಸ್ ನಿಯಂತ್ರಣದ ಬಗ್ಗೆ ಕೈಗೊಂಡ ಕ್ರಮಗಳ ಮತ್ತು ಈಗಿನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳೊಂದಿಗೆ ಬಗ್ಗೆ ಕ್ವಾರೈಂಟೈನ್ ಮಾಡಿದ ಬಗ್ಗೆ ವಿವರ , SARI Cases ,ILI , Swab test ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿದರು.

- ಈ ಬಗ್ಗೆ ಒಟ್ಟು 13,242 ಜನರನ್ನು ಕ್ವಾರಂಟೈನ್‌ಗೆ ಒಳಪಡಿಸಿರುವುದಾಗಿ , ಇವುಗಳಲ್ಲಿ yenepoya ಆಸ್ಪತ್ರೆಗೆ 3,369 ಪರೀಕ್ಷೆಗೆ ಕಳುಹಿಸಿದ್ದು, 258 ಪರೀಕ್ಷೆ ವರದಿ ಸ್ವೀಕೃತವಾಗಿರುತ್ತದೆ, ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ 3,536 ಪರೀಕ್ಷೆಗೆ ಕಳುಹಿಸಿದ್ದು, 2,270 ಪರೀಕ್ಷೆ ವರದಿ ಸ್ವೀಕೃತವಾಗಿರುತ್ತದೆ ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ವರದಿ ಬರಲು ಬಾಕಿ ಇರುವ Sample ಗಳ ವರದಿಯನ್ನು ಶೀಘ್ರವಾಗಿ ಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. ಹಾಗೂ Swab test ಗಳ ಬಗ್ಗೆ ಚರ್ಚಿಸಲಾಗಿ ಸರ್ಕಾರಿ Protocol ಪ್ರಕಾರ ಕ್ರಮಕೈಗೊಳ್ಳಲು ಸೂಚಿಸಿದರು .

  **(ಕ್ರಮ: ಜಿಲ್ಲಾ ಸರ್ವೇಕ್ಷಣಾಧಿಕಾರಿ, ಉಡುಪಿ ಜಿಲ್ಲೆ)**

- ಸರ್ಕಾರದ ಇತ್ತೀಚಿನ ಮಾರ್ಗ ಸೂಚಿಯಂತೆ ಸಾಂಸ್ಥಿಕ 07 ದಿನಗಳ ಕ್ವಾರಂಟೈನ್ ಮುಗಿಸಿದರವರಿಗೆ ಪುನ: 07 ದಿನಗಳ ಹೋಮ್ ಕ್ವಾರಂಟೈನ್ ಎಂಬುದಾಗಿ ಸಭೆಗೆ ಮಾಹಿತಿ ನೀಡಿದರು .

- ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರು ಮಾತನಾಡಿ ಜಿಲ್ಲೆಯ ಆಸ್ಪತ್ರೆಗಳಲ್ಲಿ 2500 ಹೆಚ್ಚುವರಿ ಹಾಸಿಗೆಗಳನ್ನು ಸೃಷ್ಟಿಸಲು ಸರ್ಕಾರದ ಆದೇಶವಿದ್ದು , ಈವರೆಗೆ ಜಿಲ್ಲೆಯಲ್ಲಿ 420 ಬೆಡ್ ಗಳು ಲಭ್ಯವಿರುವುದಾಗಿ ಸಭೆಗೆ ಮಾಹಿತಿ ನೀಡಿದರು 2500 ಹೆಚ್ಚುವರಿ ಹಾಸಿಗೆಗಳ ವ್ಯವಸ್ಥೆ ಕಲ್ಪಿಸುವರೇ ಆರೋಗ್ಯ ಇಲಾಖೆಗೆ ಹೆಚ್ಚುವರಿ ಮಾನವ ಸಂಪನ್ಮೂಲ ಅಗತ್ಯವಿರುವುದಾಗಿ ಸಭೆಯಲ್ಲಿ ತಿಳಿಸಿದರು . ಹಾಗೂ ಹೊಸ ಕೋವಿಡ್ ಆಸ್ಪತ್ರೆಗಳಿಗೆ ಗುತ್ತಿಗೆ ಆಧಾರದಲ್ಲಿ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗಳನ್ನು ನೇಮಕಾತಿ ಮಾಡುವರೆ ಸರ್ಕಾರದಿಂದ ಅನುಮತಿ ದೊರಕಿಸಿ ಕೊಡುವಂತೆ ಕೋರಿದರು.

- ಸರ್ಕಾರಿ ಆಸ್ಪತ್ರೆಯಲ್ಲಿ ರಚಿಸಲಾಗುವ ಲ್ಯಾಬ್ ಕಾಮಗಾರಿಯನ್ನು ಕೂಡಲೇ ಮುಕ್ತಾಯಗೊಳಿಸಿ ಲ್ಯಾಬ್ ಕಾರ್ಯಾರಂಭ ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾ ಸರ್ಜನ್ ರವರಿಗೆ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್ ಪ್ರಯೋಗಾಲಯದ ಮೂಲಸೌಕರ್ಯ ಕಾಮಗಾರಿ ಅಂತಿಮ ಹಂತದಲ್ಲಿದ್ದು, 10 ದಿನಗಳೊಳಗೆ ಪೂರ್ಣಗೊಳ್ಳಲಿದೆ. ಬಳಿಕ ಪ್ರಯೋಗಾಲಯದಲ್ಲಿ ಅಗತ್ಯ ಉಪಕರಣಗಳ ಅಳವಡಿಕೆಯಾಗಿ, ಪ್ರಯೋಗಾಲಯದಲ್ಲಿ ಗಂಟಲ ದ್ರವ ಪರೀಕ್ಷೆ ಉಡುಪಿಯಲ್ಲಿಯೇ ಆರಂಭಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

- ಕೋವಿಡ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುವ ವೈಧ್ಯರು ಮತ್ತು ಆರೋಗ್ಯ ಸಿಬ್ಬಂದಿಗಳಿಗೆ ಮೂರು ಹಂತದಲ್ಲಿ ತರಬೇತಿ ನೀಡುವ ಬಗ್ಗೆ ಕ್ರಮಕೈಗೊಳ್ಳುವಂತೆ ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರು ಮೇಲ್ವಿಚಾರಣೆ ನಡೆಸುವಂತೆ ಸೂಚಿಸಿದರು. ಸದ್ರಿ ತರಬೇತಿಯನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕರು /ಕೋವಿಡ್ ನೋಡಲ್ ಆಫೀಸರ್ ಮತ್ತು ಕೆ.ಎಂ.ಸಿ ಮತ್ತು ಟಿ.ಎಂ.ಎ ಪೈ ವೈದ್ಯರು ಸೇರಿ ನೀಡಲು ಕ್ರಮವಹಿಸುವಂತೆ ಸೂಚಿಸಿದರು. ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರು ಮಾತನಾಡಿ ತರಬೇತಿ ನೀಡುವ ವಿಚಾರದಲ್ಲಿ ಈಗಾಗಲೇ ಯೋಜನೆ ತಯಾರಿಸಲಾಗಿದ್ದು, ಅದರಂತೆ ಕ್ರಮವಹಿಸುವುದಾಗಿ ತಿಳಿಸಿದರು.

- ಟಿ.ಎಂ.ಎ ಪೈ ಆಸ್ಪತ್ರೆಯ ಡಾ.ಶಶಿಕಿರಣ್ ಇವರು ಮಾತನಾಡಿ , Patient Management, Bed & Ambulance Management ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬಹುದಾಗಿ ಸಲಹೆ ನೀಡಿದರು.

- ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸಲಾಗುವ ಉಪಕರಣಗಳ ಕಾರ್ಯಕ್ಷಮತೆ ಹಾಗೂ ಸಿಬ್ಬಂದಿಗಳ ತರಭೇತಿ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಬೇಕು. ತಾಲೂಕು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗೆ ವೆಂಟಿಲೇಟರ್ ಸೌಲಭ್ಯ ಒದಗಿಸುವುದರೊಂದಿಗೆ, ಹೆಚ್ಚುವರಿಯಾಗಿ ಖಾಸಗೀ ಆಸ್ಪತ್ರೆಗಳನ್ನು ಇದಕ್ಕಾಗಿ ಗುರುತಿಸಬೇಕು ಎಂದು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

- ಹೊರರಾಜ್ಯದಿಂದ ಬಂದವರ ಮಾಹಿತಿ ಆಯಾ ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯತ್‌ಗಳಲ್ಲಿ ಇರಬೇಕು. ಅವರ ಕ್ವಾರೆಂಟೈನ್ ಅವಧಿಯ ಮೇಲೆ ನಿಗಾ ಇಡಬೇಕು ಹಾಗೂ ಸಾಂಸ್ಥಿಕ ಕ್ವಾರಂಟೈನ್ ವ್ಯವಸ್ಥೆಯನ್ನು ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ನೋಡಿಕೊಳ್ಳಲು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

**<u>ಇತರೆ ವಿಷಯಗಳು :</u>**

- 2020 ರ ಮಾನ್ಸೂನ್ ಮುಂಗಾರು ಮಳೆ ಪ್ರಾರಂಭವಾಗಿದ್ದು, ಈ ಸಂಧರ್ಭದಲ್ಲಿ ಅತಿವೃಷ್ಟಿ ಮಳೆಯಿಂದ ಉಂಟಾಗಬಹುದಾದ ಪ್ರವಾಹ, ನೆರೆಹಾವಳಿ, ಬಿರುಗಾಳಿ, ಸಿಡಿಲು, ಇತ್ಯಾದಿಗಳಿಂದಾಗುವ ಸಾರ್ವಜನಿಕರಿಗೆ ಹಾಗೂ ಆಸ್ತಿಪಾಸ್ತಿಗಳಿಗೆ ಉಂಟಾಗುವ ಅನಾಹುತಗಳ ಮತ್ತು ಕೋವಿಡ್-19 ರೋಗ ಹರಡದಂತೆ ಮುಂಜಾಗ್ರತ ಕ್ರಮ ಹಾಗೂ ರಕ್ಷಣಾ ಕ್ರಮ ಗಳನ್ನು ತೆಗೆದುಕೊಳ್ಳುವ ಕುರಿತು ಈಗಾಗಲೇ ಸಂಬಂಧ ಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು. ಹಾಗೂ ಈ ಬಗ್ಗೆ ದಿನಾಂಕ:22.05.2020 ರಂದು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಗಳ ಸಭೆ ನಡೆಸಿ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಪರೀಶಿಲಿಸಲಾಗಿದೆ ಹಾಗೂ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಯವರು ತಿಳಿಸಿದರು, ಈ ಸಂದರ್ಭದಲ್ಲಿ ಸಂತ್ರಸ್ತರಿಗೆ ತುರ್ತಾಗಿ ಹಾನಿಯ ಪರಿಹಾರ ನೀಡಬೇಕಾಗಿರುತ್ತದೆ. ಇದನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಕುರಿತು ಸಂಬಂಧಪಟ್ಟ ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳು ಈ ಬಗ್ಗೆ ಸಹಕರಿಸುವುದಲ್ಲದೇ ತಮ್ಮ ಅಧೀನ ಕಛೇರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ : ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು)

- 2019ನೇ ಸಾಲಿನ ಪ್ರವಾಹ ಪರಿಹಾರ ಕಾಮಗಾರಿಗಳಲ್ಲಿ ಒಟ್ಟು 814 ಕಾಮಗಾರಿಗಳನ್ನು ನೀಡಲಾಗಿದ್ದು ಅದರಲ್ಲಿ 667 ಕಾಮಗಾರಿಗಳು ಮುಕ್ತಾಯವಾಗಿದ್ದು ಉಳಿದ 146 ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ ಎಂದು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ತಿಳಿಸಿದರು. ಸದ್ರಿ ಕಾಮಗಾರಿಗಳನ್ನು ಈ ವಾರದಲ್ಲಿ ಮುಕ್ತಾಯಗೊಳಿಸಿ ಬಿಲ್ ಪಾವತಿಗಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಉಸ್ತುವಾರಿ ಕಾರ್ಯದರ್ಶಿವರು ಸೂಚಿಸಿದರು. **(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ ವಿಭಾಗ/ ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ ಹಾನಿಯಾಗಿರುವ ಮನೆಗಳ ಪುನರ್ ನಿರ್ಮಾಣ ಹಾಗೂ ರಿಪೇರಿಯ ವರದಿಯನ್ನು ಈ ಕೆಳಕಂಡಂತೆ ತಹಶೀಲ್ದಾರರು ಸಭೆಯಲ್ಲಿ ನೀಡಿದ್ದು,

| ಕ್ರ.ಸಂ. | ಜಿಲ್ಲೆ | ಮನೆಗಳ ಮರುನಿರ್ಮಾಣ ಮಾಡುವ ಸಂಖ್ಯೆ | ತಳಪಾಯ (Foundation) | ಗೋಡೆ (Lintal) | ಛಾವಣಿ | ದುರಸ್ಥಿ ಮಾಡಲು ಬಾಕಿಇರುವ ಮನೆಗಳ ಸಂಖ್ಯೆ |
|---|---|---|---|---|---|---|
| 1 | Udupi | 10 | 4 | 3 | 1 | 2 |
| 2 | Kudapura | 21 | 12 | 3 | 0 | 6 |
| 3 | Karkal | 2 | 1 | 1 | 0 | 0 |
| 4 | Brhamvara | 14 | 2 | 6 | 3 | 3 |
| 5 | Byndoor | 7 | 6 | 1 | 0 | 0 |
| 6 | Kapu | 13 | 8 | 2 | 0 | 3 |
| 7 | Hebri | 7 | 7 | 0 | 0 | 0 |
| Total | | 74 | 40 | 16 | 4 | 14 |

ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಒಂದು ವರ್ಷ ಕಳೆಯುತ್ತ ಬಂದಿದ್ದು, ಪುನರ್ ನಿರ್ಮಾಣ ಮಾಡುವಂತಹ ಮನೆಗಳನ್ನು ಶೀಘ್ರವಾಗಿ ನಿರ್ಮಿಸಲು ಕ್ರಮವಹಿಸುವಂತೆ ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು, ಹೆಬ್ರಿ)**

- ಕೋವಿಡ್ ಹಿನ್ನೆಲೆಯಲ್ಲಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆ, ಉದ್ಯಮಿಗಳಿಗೆ ಕೇಂದ್ರ ಸರಕಾರ ಘೋಷಿಸಿರುವ ಹಣಕಾಸು ನೆರವು ಯೋಜನೆ ಜಾರಿಗೆ ಜಿಲ್ಲೆಯಲ್ಲಿ ಕೆಲವು ಖಾಸಗೀ ಬ್ಯಾಂಕುಗಳು ಸ್ಪಂದಿಸುತ್ತಿಲ್ಲ ಎಂಬ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಜಿಲ್ಲೆಯ ಬ್ಯಾಂಕುಗಳ ಜತೆ ಸಭೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಅಲ್ಲದೇ ಈ ಬಗ್ಗೆ ಪ್ರತೀ ವಾರ ಪರಿಶೀಲನೆ ನಡೆಸುವಂತೆ ಸೂಚಿಸಿದರು. **(ಕ್ರಮ : ಲೀಡ್ ಬ್ಯಾಂಕ್ ಮೇನೆಜರ್, ಉಡುಪಿ/ ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ಉಡುಪಿ )**

- ಉಡುಪಿ ತಾಲ್ಲೂಕಿನ ಶಿರೂರು ಹಾಗೂ ಬೊಮ್ಮರಬೆಟ್ಟು ಗ್ರಾಮ ವ್ಯಾಪ್ತಿಯ ಸ್ವರ್ಣ ನದಿ ಪಾತ್ರದಲ್ಲಿ ನದಿ ಹೂಳೆತ್ತುವ ನೆಪದಲ್ಲಿ ಮರಳನ್ನು ಅಕ್ರಮವಾಗಿ ತೆಗೆದು ದಾಸ್ತಾನು ಇರಿಸಿದ ಪ್ರದೇಶದ ಸ್ಥಳ ಹಾಗೂ ಎಲ್ಲಾ ದಾಖಲೆಗಳನ್ನು ಅಧಿಕಾರಿ/ಸಿಬ್ಬಂದಿಗಳೊಂದಿಗೆ ಪರಿಶೀಲನೆ ನಡೆಸಿ, ಸಂಬಂಧಿಸಿದ ಪಟ್ಟಾದಾರರನ್ನು ಪತ್ತೆಹಚ್ಚಿ ಹಾಗೂ ಹೂಳೆತ್ತುವ ಗುತ್ತಿಗೆದಾರರು ಲಾಕ್ಡೌನ್ ಸಮಯದಲ್ಲಿ ಅನಧಿಕೃತ ಹೂಳೆತ್ತುವ ಕಾಮಗಾರಿ ನಡೆಸಿದ್ದಲ್ಲಿ ಸದರಿಯವರು ಮೇಲೆ ಸಿ.ಆರ್ ಪಿ.ಸಿ (188) ಮತ್ತು ಪ್ರಕೃತಿ ವಿಕೋಪ ನಿರ್ವಾಹಣಾ ಕಾಯ್ದೆ 2005 (Disaster Management Act) ರಡಿಯಲ್ಲಿ ಅಗತ್ಯ ಕ್ರಮಕೈಗೊಂಡು, ವರದಿ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಈ ವಿಷಯದಲ್ಲಿ ಪಟ್ಟಾ ಜಮೀನಿನಲ್ಲಿ ಮರಳು ಸಂಗ್ರಹಣೆ ಸೇರಿದಂತೆ ಲಾಕ್‌ಡೌನ್ ಅವಧಿಯಲ್ಲಿ ಅಕ್ರಮ ಮರಳುಗಾರಿಕೆ ನಡೆದಿರುವ ಬಗ್ಗೆ ಉಪವಿಭಾಗಾಧಿಕಾರಿಗಳು, ಪ್ರತೀ ಜಮೀನಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಸಮಗ್ರ ವರದಿಯನ್ನು ಜಿಲ್ಲಾಧಿಕಾರಿಯವರಿಗೆ 3 ದಿನಗಳ ಒಳಗಾಗಿ ನೀಡುವಂತೆ ನಿರ್ದೇಶಿಸಿದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ವಿವರ ನೀಡಿ, ಈಗಾಗಲೇ ಇಂತಹ ಪ್ರಕರಣಗಳ ವಿರುದ್ಧ ಕೇಸು ದಾಖಲಿಸಲಾಗಿದೆ. 5 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೇ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳುವ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೆ

ನ್ಯಾಯಾಲಯದ ಅನುಮತಿ ಪಡೆದು ಮರಳನ್ನು ಹರಾಜು ಹಾಕಲು ಕ್ರಮವಹಿಸುವುದಾಗಿ ತಿಳಿಸಿದರು. **(ಕ್ರಮ: ಸಹಾಯಕ ಕಮೀಷನರ್, ಕುಂದಾಪುರ ಉಪವಿಭಾಗ ಕುಂದಾಪುರ / ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ)**

- ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಕೋವಿಡ್-19 ಲಾಕ್ ಡೌನ್ ನಿಂದಾಗಿ ಸಂಕಷ್ಟಕ್ಕೊಳಗಾದ ಹೂವಿನ ಬೆಳೆಗಾರರಿಗೆ ಹಾಗೂ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ ಪಾವತಿಸುವ ಬಗ್ಗೆ ಮಾಹಿತಿಯನ್ನು ನೀಡುವಂತೆ ತಿಳಿಸಲಾಗಿ, ಈ ಬಗ್ಗೆ ತೋಟಗಾರಿಕೆ ಉಪನಿರ್ದೇಶಕರು ವಿವರಿಸುತ್ತಾ ಹೂವಿನ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮದಡಿ ಬೆಳೆ ಸಮೀಕ್ಷೆಯಲ್ಲಿ ಒಟ್ಟು 1319 ರೈತರು ನಮೂದಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗದೆ ಇರುವ ರೈತರ ಅರ್ಜಿಗಳನ್ನು ದಿನಾಂಕ: 28-05-2020 ರ ವರೆಗೆ ಸ್ವೀಕರಿಸಲಾಗಿದ್ದು ಒಟ್ಟು 3014 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸದರಿ ಅರ್ಜಿಗಳನ್ನು ಮಾರ್ಗಸೂಚಿ ಪ್ರಕಾರ ಹೋಬಳಿ ಮಟ್ಟದ ಸಮಿತಿಯು ಪರಿಶಿಲಿಸಬೇಕಾಗಿದ್ದು, ಪ್ರಸಕ್ತ ಪರಿಶೀಲನೆ ಚಾಲ್ತಿಯಲ್ಲಿದ್ದು, ಪರಿಹಾರಧನವನ್ನು ಪಾವತಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಈ ಬಗ್ಗೆ ಶೀಘ್ರವಾಗಿ ಪರಿಹಾರಧನವನ್ನು ಪಾವತಿಸುವಲ್ಲಿ ಕ್ರಮವಹಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಉಡುಪಿ)**

- ಹಣ್ಣು ಮತ್ತು ತರಕಾರಿ ಬೆಳೆಗಳಿಗೆ ಪರಿಹಾರ ನೀಡುವ ಬಗ್ಗೆ ದಿನಾಂಕ: 30-05-2020 ರಂದು ಮಾರ್ಗಸೂಚಿ ಬಂದಿದ್ದು, ಸದರಿ ಪರಿಹಾರವನ್ನು ಬೆಳೆ ಸಮೀಕ್ಷೆ ಆಧಾರದಲ್ಲಿ ನೀಡಲು ಕ್ರಮವಹಿಸಲಾಗುತ್ತಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗಿರುವ ರೈತರ ವಿವರವು ನಿರ್ದೇಶನಾಲಯದಿಂದ ಬಂದ ನಂತರ, ರೈತರಿಂದ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ ಜಿಲ್ಲಾ ಸಮಿತಿಯ ನಿರ್ಣಯದಂತೆ ಕ್ರಮವಹಿಸಲಾಗುವುದು ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದರು.

- ಮಳೆ ಮತ್ತು ಕೃಷಿ ಪರಿಕರಗಳ ಸರಬರಾಜಿನ ಸ್ಥಿತಿಗತಿಗಳ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ವಿವರಿಸುತ್ತಾ, ಜಿಲ್ಲೆಯಲ್ಲಿಸರಾಸರಿ 201.60 ಮಿ.ಮೀ. ವಾಡಿಕೆ ಮಳೆ ಆಗಬೇಕಾಗಿದ್ದು,ಈವರೆಗೆ 172.62ಮಿ.ಮೀ. ಮಳೆ ಆಗಿರುತ್ತದೆ. ಅದೇರೀತಿಯಾಗಿ ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ಒಟ್ಟು2780 ಕ್ವಿಂ ಬೀಜ ಬೇಡಿಕೆ ನೀಡಿದ್ದು, 2443 ಕ್ವಿಂ ಬೀಜ ಸರಬರಾಜಾಗಿದ್ದು, 2307.75 ಕ್ವಿಂ ವಿತರಣೆಯಾಗಿದೆ. ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ಯಾವುದೇ ಕೊರತೆಯಿರುವುದಿಲ್ಲ ಎಂದು ಮಾಹಿತಿ ನೀಡಿದರು.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಸಂಬಂಧಪಟ್ಟಂತೆ ಮಾಹಿತಿ ಕೇಳಲಾಗಿ ವಿವಿಧ ಇಲಾಖೆ ಹಾಗೂ ಸಂಸ್ಥೆಗಳಾದ ಕೃಷಿ ಇಲಾಖೆಯಿಂದ ರೂ. 244.50 ಲಕ್ಷ, ತೋಟಗಾರಿಕೆ ಇಲಾಖೆಯಿಂದ ರೂ. 50.00ಲಕ್ಷ, ಮೀನುಗಾರಿಕೆ ಇಲಾಖೆಯಿಂದ ರೂ. 170.00 ಲಕ್ಷ, ಕೃಷಿ ಉತ್ಪನ್ನ ಮಾರುಕಟ್ಟೆ ಸಂಸ್ಥೆಯಿಂದ ರೂ. 125.00 ಲಕ್ಷ, ಪಶುಸಂಗೋಪನೆ ಇಲಾಖೆಯಿಂದ ರೂ. 116.40 ಲಕ್ಷ, ವಲಯ ಕೃಷಿ ಮತ್ತು ತೋಗಾರಿಕಾ ಸಂಶೋಧನಾ ಕೇಂದ್ರದಿಂದ ರೂ. 260.00 ಲಕ್ಷ, ಕೃಷಿ ವಿಜ್ಞಾನ ಕೇಂದ್ರ ರೂ. 228.00ಲಕ್ಷ ಸೇರಿದಂತೆ ಒಟ್ಟು ರೂ.1193.90 ಲಕ್ಷದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕುರಿತು ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಸಭೆ ನಡೆಸಿ ಪ್ರಸ್ತಾವನೆಯ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ ಹಾಗೂ ಕೃಷಿ ಕಾಲೇಜು ಸ್ಥಾಪನೆಯ ವಿಷಯವು ಪ್ರಸ್ತಾವನೆಯಲ್ಲಿರುತ್ತದೆ ಎಂದು ಮಾಹಿತಿ ನೀಡಿದರು

.ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ. ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಜಿಲ್ಲೆ:ವಿಜಯಪುರ

ಡಾ:ಜೆ.ರವಿಶಂಕರ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ.ಮಂಡಳ,
ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ.

ದಿ:05-06-2020

| | |
|---|---|
| | **1.ಕೋವಿಡ್ -ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ:** |
| 1. | 24 ಗಂಟೆಗಳ ಒಳಗೆ ಕೋವಿಡ್-ಪಾಸಿಟಿವ್ ವ್ಯಕ್ತಿಯ ಸಂಪರ್ಕಗಳನ್ನು ಪತ್ತೆ ಹಚ್ಚಲು ರಚಿಸಲಾದ ಸಂಪರ್ಕ ಟ್ರೇಸಿಂಗ್ ತಂಡಗಳು ಸಾಕಷ್ಟು ಇವೆಯೇ?<br>ಹೌದು ಇರುತ್ತದೆ. |
| 2. | ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ 50 ಪದಗಳಿಗೆ ಮೀರದಂತೆ ವರದಿ.<br>ಮಾನ್ಯ ಮುಖ್ಯ ಕಾರ್ಯದರ್ಶಿಗಳರವರ ಸೂಚನೆಯಂತೆ, ಕಂಟೇನ್ಮೆಂಟ್ ಝೋನ್ ಮತ್ತು ಕಂಟೇನ್ಮೆಂಟ್ ಝೋನ್ ಪ್ರದೇಶ ಹೊರತುಪಡಿಸಿ ಎ.ಎನ್.ಎಂ.. ಆಶಾ ಕಾರ್ಯಕರ್ತರಿಂದ ನಿರಂತರವಾಗಿ 07 ದಿನಗಳವರೆಗೆ ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಕೊಳ್ಳಲಾಗಿದ್ದು, ಈ ಸಮೀಕ್ಷೆ ಕಾರ್ಯದಲ್ಲಿ ಪ್ರತಿದಿನ ಕಂಡು ಬಂದ SARI ಮತ್ತು ILI ಪ್ರಕರಣಗಳನ್ನು ಗುರುತಿಸಿ, ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸುವ ಕುರಿತು ಕ್ರಮ ಜರುಗಿಸಲಾಗಿದೆ. |
| 3. | ಪ್ರತಿ ಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ ಸಂಖ್ಯೆ:<br>ಪ್ರಾಥಮಿಕ (ಹೆಚ್ಚಿನ ಅಪಾಯ) ಸಂಪರ್ಕ: 932<br>ದ್ವಿತೀಯ (ಕಡಿಮೆ ಅಪಾಯ) ಸಂಪರ್ಕ: 1052 |
| 4. | ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಮಾಡಿದೆಯೇ?<br>ಹೌದು |
| 5. | ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (50 ಪದಗಳಿಗಿಂತ ಮೀರದಂತೆ ವರದಿ)<br>ಪಾಸಿಟಿವ್ ಪ್ರಕರಣದ ಎಲ್ಲ ಜನರ ಪ್ರಥಮ ಹಾಗೂ ದ್ವಿತೀಯ ಸಂಪರ್ಕದ ಮಾಹಿತಿಯನ್ನು ಪತ್ತೆ ಹಚ್ಚಲಾಗಿರುತ್ತದೆ. |
| 6. | ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್ ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?<br>ಹೌದು<br>ಯಾವುದೇ ಸಲಹೆಗಳಿದ್ದಲ್ಲಿ : ಸರ್ಕಾರದ ನಿರ್ದೇಶನ ಅನುಸಾರ ಕ್ರಮಗಳನ್ನು ಕೈಕೊಳ್ಳಲಾಗಿದೆ. |

| | |
|---|---|
| | ಪ್ರಾಥಮಿಕ ಸಂಪರ್ಕಗಳನ್ನು ಬಿ.ಸಿ.ಎಂ., ಸಮಾಜ ಕಲ್ಯಾಣ ಇಲಾಖೆ, ರೆಸಿಡೇನ್ಸಿಯಲ್ ಸ್ಕೂಲ್, ಮತ್ತು ಹಾಸ್ಟೆಲ್ಸ್‌ಗಳಲ್ಲಿ ಸಾಂಸ್ಥಿಕ ಕ್ವಾರಂಟೈನ್‌ನಲ್ಲಿಡಲಾಗಿದೆ. ಅಲ್ಲಿ ಅವರಿಗೆ ಎಲ್ಲ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಆರೋಗ್ಯ ಇಲಾಖೆಯಿಂದ ಪ್ರತಿ ಎರಡು ದಿನಗಳಿಗೊಮ್ಮೆ ಅವರ ಆರೋಗ್ಯ ತಪಾಸಣೆಯನ್ನು ಕೈಕೊಳ್ಳಲಾಗುತ್ತಿದೆ. |
| 7. | ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?<br>ಹೌದು<br>ಮಾಡಲಾಗಿದೆ. |
| | **2.ಕಂಟೆನ್ಮೆಂಟ್ ಮತ್ತು ಬಫರ್ ವಲಯಗಳು** |
| 1. | ಎಲ್ಲಾ ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?<br>ಹೌದು |
| 2. | ನೀವು ಎಲ್ಲಾ ಕಂಟೈನ್‌ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದೀರಾ?<br>ಹೌದು<br>ಭೇಟಿ ನೀಡಿದ ನಿಯಂತ್ರಣ ವಲಯದ ವಿವರಗಳು:<br>ಕಂಟೈನ್‌ಮೆಂಟ್ ವಲಯ ನಂ-06 — ವಿಜಯಪುರ ನಗರದ ಅಲ್ಲಾಪೂರ ಬೇಸ್<br>ಪರಿಶೀಲನೆಯ ಬಗ್ಗೆ 50 ಪದಗಳು ಮೀರದಂತೆ ವರದಿ:<br>ಸರಕಾರದ ನಿರ್ದೇಶನದಂತೆ ಸದರ ಕಂಟೇನ್ಮೆಂಟ್ ವಲಯ ಪ್ರದೇಶವನ್ನು ಸೀಲ್ ಡೌನ್ ಮಾಡಲಾಗಿದ್ದು, ಜನರಿಗೆ ಅಗತ್ಯ ವಸ್ತುಗಳನ್ನು ಅವರ ಮನೆ ಬಾಗಿಲಿಗೆ ಪೂರೈಸಲಾಗುತ್ತಿದೆ. |
| 3. | ಕಂಟೈನ್‌ಮೆಂಟ್ ವಲಯ ಮತ್ತು ಬಫರ್ ವಲಯಕ್ಕೆ Incident ಕಮಾಂಡರ್/ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?<br>ಹೌದು<br>ನೇಮಿಸಲಾಗಿದೆ. |
| 4. | ಕಂಟೇನ್ಮೆಂಟ್ ವಲಯಗಳಲ್ಲಿ ಮತ್ತು ಬಫರ್ ವಲಯಗಳಲ್ಲಿ ILIs /SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?<br>ಹೌದು<br>ಯಾವುದೇ ಸುಧಾರಣೆಗಳ ಅಗತ್ಯವಿದ್ದಲ್ಲಿ/ಅವಲೋಕಿಸಿದ ಅಂಶಗಳು (50 ಪದಗಳಿಗಿಂತ ಮೀರದಂತೆ)<br>• ಮಾನ್ಯ ಮುಖ್ಯ ಕಾರ್ಯದರ್ಶಿಗಳರವರ ಸೂಚನೆಯಂತೆ, ಕಂಟೇನ್ಮೆಂಟ್ ಝೋನ್ |

| | |
|---|---|
| | ಮತ್ತು ಕಂಟೇನ್ಮಂಟ್ ಝೋನ್ ಪ್ರದೇಶ ಹೊರತುಪಡಿಸಿ ಎ.ಎನ್.ಎಂ., ಆಶಾ ಕಾರ್ಯಕರ್ತರಿಂದ ನಿರಂತರವಾಗಿ 07 ದಿನಗಳವರೆಗೆ ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಕೊಳ್ಳಲಾಗಿದ್ದು. ಈ ಸಮೀಕ್ಷೆ ಕಾರ್ಯದಲ್ಲಿ ಪ್ರತಿದಿನ ಕಂಡು ಬಂದ SARI ಮತ್ತು ILI ಪ್ರಕರಣಗಳನ್ನು ಗುರುತಿಸಿ, ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸುವ ಕುರಿತು ಕ್ರಮ ಜರುಗಿಸಲಾಗಿದೆ.<br>• ಸರಕಾರದ ನಿರ್ದೇಶನದಂತೆ ಮಹಾರಾಷ್ಟ್ರದಿಂದ ಬಂದವರನ್ನು 07 ದಿನಗಳ ಸಾಂಸ್ಥಿಕ ಕ್ವಾರಂಟೈನ್ ಪೂರ್ಣಗೊಳಿಸಿದವರನ್ನು ಹೋಮ್ ಕ್ವಾರಂಟೈನ್‌ನಲ್ಲಿರಿಸಲಾಗಿದ್ದು. ಸದರಿಯವರು ಹೊರಗಡೆ ತಿರುಗಾಡದಂತೆ ನೋಡಿಕೊಳ್ಳಲು, ಕಂದಾಯ ಮತ್ತು ಪಂಚಾಯತ ರಾಜ್ಯ ಇಲಾಖೆಯ ಸಿಬ್ಬಂದಿಗಳಿಗೆ ಕ್ವಾರೆಂಟೈನ್ ವಾಚ್ ಆ್ಯಪ್‌ನಲ್ಲಿ ಕ್ವಾರೆಂಟೈನ್ ನಲ್ಲಿರುವವರ ಸೆಲ್ಫಿ ಫೋಟೊ ತೆಗೆದು ಅಪಲೋಡ್ ಮಾಡಲು ಸೂಚಿಸಿದ್ದು ಇರುತ್ತದೆ.<br>• ಹೋಮ್ ಕ್ವಾರಂಟೈನ್‌ನಲ್ಲಿರುವವರು ಹೊರಗಡೆ ತಿರುಗಾಡದಂತೆ ನೋಡಿಕೊಳ್ಳಲು ಮೇಲ್ವಿಚಾರಣಿ ಕುರಿತು ನೋಡಲ್ ಅಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.<br>• ಹೋಮ್ ಕ್ವಾರಂಟೈನ್ ದಿಂದ ಹೊರಗಡೆ ತಿರುಗಾಡುವವರ ಮೇಲೆ ಎಫ್.ಐ.ಆರ್ ದಾಖಲಿಸುವುದು ಮತ್ತು ಅವರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇಡಲು ತಹಶೀಲದಾರರಿಗೆ ಸೂಚನೆ ನೀಡಲಾಗಿದೆ.<br>• ಖಾಸಗಿ ಆಸ್ಪತ್ರೆಗಳಲ್ಲಿ ವರದಿಯಾಗುವ ILI ಪ್ರಕರಣಗಳ ಪ್ರತಿ ದಿನದ ಮಾಹಿತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪಡೆದುಕೊಂಡು ಅವುಗಳನ್ನು ತಾಲೂಕಾ ಆಸ್ಪತ್ರೆಗೆ ಶಿಫಾರಸ್ಸು ಮಾಡಲು ಸೂಚಿಸಲಾಗಿದೆ. |
| | **<u>3.ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು:</u>** |
| 1. | ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಗಳಲ್ಲ ಬಾಕಿ ಉಳಿದಿದೆಯೇ?<br>ಲ್ಯಾಬ್ ಪರೀಕ್ಷೆಗಳ ಬಗ್ಗೆ ನಿಮ್ಮ ಸಲಹೆಗಳು: (50 ಪದಗಳಿಗಿಂತ ಮೀರದಂತೆ)<br>ಜಿಲ್ಲೆಯಲ್ಲಿ ಇದುವರೆಗೂ ಒಟ್ಟು 27,884-ಜನರನ್ನು ನಿರೀಕ್ಷಣೆಯಲ್ಲಿರಿಸಲಾಗಿದ್ದು, ಎಲ್ಲ 25,422 ಜನರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟ್ ಪರೀಕ್ಷೆಗೆ ಕಳುಹಿಸಲಾಗಿದ್ದು, ಅವರಲ್ಲಿ 23,035 ಜನರ ಲ್ಯಾಬ್ ಟೆಸ್ಟ್ ವರದಿ ನೆಗೆಟಿವ್ ಆಗಿದ್ದು, 2,200 ಜನರ ಲ್ಯಾಬ್ ಟೆಸ್ಟ್ ವರದಿ ನಿರೀಕ್ಷಿಸಲಾಗಿದೆ.<br>ಮಹಾರಾಷ್ಟ್ರ ಮತ್ತು ಇತರೆ ರಾಜ್ಯಗಳಿಂದ ಒಟ್ಟು 26,324 ಜನರು ಜಿಲ್ಲೆಗೆ ಆಗಮಿಸಿದ್ದು, ಅವರನ್ನು ವಿವಿಧ ತಾಲೂಕಾಗಳಾದ್ಯಂತ ಸ್ಥಾಪಿಸಲಾದ ಒಟ್ಟು 576 ಸಾಂಸ್ಥಿಕ ಕ್ವಾಂರಟೈನ್‌ಗಳಲ್ಲಿರಿಸಲಾಗಿದ್ದು ಇರುತ್ತದೆ. ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸಲಾಗಿರುತ್ತದೆ. |
| 2. | ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ಆರೋಗ್ಯ ಸಿಬ್ಬಂದಿಗೆ ಹೈಡ್ರಾಕ್ಸಿ ಕ್ಲೋರೊಕ್ವಿನ್ ಸಲ್ಫೇಟ್ (ಎಚ್.ಸಿ.ಕ್ಯೂ) ನೀಡಲಾಗಿದೆಯೇ?<br>ಹೌದು |
| 3. | ನೀವು ಮೀಸಲಿರಿಸಿದ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ? |

| | |
|---|---|
| | ಹೌದು |
| 4. | ನೀವು ಮೀಸಲಾದ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಗಮನಿಸಿದ ಅಂಶಗಳು (50 ಪದಗಳಿಗೆ ಮೀರದಂತೆ)<br><br>80- ಹಾಸಿಗೆವುಳ್ಳ ಕೋವಿಡ್ ಆಸ್ಪತ್ರೆ, 187 ಕೋವಿಡ್ ಪಾಸಿಟಿವ್ ಪ್ರಕರಣಗಳು, ಇದರಲ್ಲಿ 65- ರೋಗಿಗಳನ್ನು ಬಿಡುಗಡೆಗೊಳಿಸಲಾಗಿದೆ. ಆಸ್ಪತ್ರೆಯಲ್ಲಿ ಈಗ ಸಧ್ಯ 117 ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಮುಂಜಾನೆ ತಿಂಡಿ ಹಾಗು ಚಹಾ, ಮಧ್ಯಾಹ್ನ ಮತ್ತು ರಾತ್ರಿ ಒಳ್ಳೆಯ ಊಟದ ವ್ಯವಸ್ಥೆ ಮಾಡಲಾಗಿದೆ.<br><br>ಕೋವಿಡ್-19 ಪ್ರಕರಣಗಳಿಗೆ ಉತ್ತಮ ಚಿಕಿತ್ಸೆಯನ್ನು ಜಿಲ್ಲಾ ಆಸ್ಪತ್ರೆಯಲ್ಲಿ ನೀಡುವ ಕುರಿತು ಹಿರಿಯ ವೈದ್ಯಾಧಿಕಾರಿಗಳು ಪ್ರತಿದಿನ ಕೋವಿಡ್ ವಾರ್ಡಿಗೆ ಭೇಟಿ ನೀಡಿ ಸರಿಯಾಗಿ ಚಿಕಿತ್ಸೆ ನೀಡುತ್ತಿರುವ ಬಗ್ಗೆ ಪರಿಶೀಲಿಸಲು ಸೂಚಿಸಲಾಗಿದೆ. |
| 5. | ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?<br>ಹೌದು |
| 5. | (ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?<br>ಹೌದು |
| | (ಬಿ) ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?<br>ಹೌದು |
| ಒಟ್ಟಾರೆ ವೀಕ್ಷಿಸಿದ ಅಂಶಗಳು: | ಸರ್ಕಾರದ ಒಟ್ಟಾರೆ ನಿರ್ದೇಶನಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ. ಮಹರಾಷ್ಟ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ವಿಜಯಪುರಕ್ಕೆ ಬಂದಿರುವುದರಿಂದ, ಕೋವಿಡ್ ಪಾಸಿಟಿವ್ ಸಂಖ್ಯೆ ಹೆಚ್ಚಳವಾಗುತ್ತಿದೆ. ಉಳಿದಂತೆ, ಪರಿಸ್ಥಿತಿ ನಿಯಂತ್ರಣದಲ್ಲಿದೆ. |

ದಿನಾಂಕ:05-06-2020

ಡಾ: ಜೆ.ರವಿಶಂಕರ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ.ಮಂಡಳಿ,
ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ.

ಜಿಲ್ಲೆ:ವಿಜಯಪುರ

ಡಾ:ಜಿ.ರವಿಶಂಕರ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ.ಮಂಡಳ,
ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ.

ದಿ:05-06-2020

| | |
|---|---|
| | **<u>1.ಕೋವಿಡ್ -ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ:</u>** |
| 1. | 24 ಗಂಟೆಗಳ ಒಳಗೆ ಕೋವಿಡ್-ಪಾಸಿಟಿವ್ ವ್ಯಕ್ತಿಯ ಸಂಪರ್ಕಗಳನ್ನು ಪತ್ತೆ ಹಚ್ಚಲು ರಚಿಸಲಾದ ಸಂಪರ್ಕ ಟ್ರೇಸಿಂಗ್ ತಂಡಗಳು ಸಾಕಷ್ಟು ಇವೆಯೇ?<br>ಹೌದು ಇರುತ್ತದೆ. |
| 2. | ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ 50 ಪದಗಳಿಗೆ ಮೀರದಂತೆ ವರದಿ.<br>ಮಾನ್ಯ ಮುಖ್ಯ ಕಾರ್ಯದರ್ಶಿಗಳರವರ ಸೂಚನೆಯಂತೆ, ಕಂಟೇನ್ಮೆಂಟ್ ಝೋನ್ ಮತ್ತು ಕಂಟೇನ್ಮೆಂಟ್ ಝೋನ್ ಪ್ರದೇಶ ಹೊರತುಪಡಿಸಿ ಎ.ಎನ್.ಎಂ., ಆಶಾ ಕಾರ್ಯಕರ್ತರಿಂದ ನಿರಂತರವಾಗಿ 07 ದಿನಗಳವರೆಗೆ ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಕೊಳ್ಳಲಾಗಿದ್ದು, ಈ ಸಮೀಕ್ಷೆ ಕಾರ್ಯದಲ್ಲಿ ಪ್ರತಿದಿನ ಕಂಡು ಬಂದ SARI ಮತ್ತು ILI ಪ್ರಕರಣಗಳನ್ನು ಗುರುತಿಸಿ, ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸುವ ಕುರಿತು ಕ್ರಮ ಜರುಗಿಸಲಾಗಿದೆ. |
| 3. | ಪ್ರತಿ ಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ ಸಂಖ್ಯೆ:<br>ಪ್ರಾಥಮಿಕ (ಹೆಚ್ಚಿನ ಅಪಾಯ) ಸಂಪರ್ಕ: 932<br>ದ್ವಿತೀಯ (ಕಡಿಮೆ ಅಪಾಯ) ಸಂಪರ್ಕ: 1052 |
| 4. | ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಮಾಡಿದೆಯೇ?<br>ಹೌದು |
| 5. | ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (50 ಪದಗಳಿಗಿಂತ ಮೀರದಂತೆ ವರದಿ)<br>ಪಾಸಿಟಿವ್ ಪ್ರಕರಣದ ಎಲ್ಲ ಜನರ ಪ್ರಥಮ ಹಾಗೂ ದ್ವಿತೀಯ ಸಂಪರ್ಕದ ಮಾಹಿತಿಯನ್ನು ಪತ್ತೆ ಹಚ್ಚಲಾಗಿರುತ್ತದೆ. |
| 6. | ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್ ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?<br>ಹೌದು<br>ಯಾವುದೇ ಸಲಹೆಗಳಿದ್ದಲ್ಲಿ : ಸರ್ಕಾರದ ನಿರ್ದೇಶನ ಅನುಸಾರ ಕ್ರಮಗಳನ್ನು ಕೈಕೊಳ್ಳಲಾಗಿದೆ. |

| | |
|---|---|
| | ಪ್ರಾಥಮಿಕ ಸಂಪರ್ಕಗಳನ್ನು ಬಿ.ಸಿ.ಎಂ., ಸಮಾಜ ಕಲ್ಯಾಣ ಇಲಾಖೆ, ರೆಸಿಡೇನ್ಸಿಯಲ್ ಸ್ಕೂಲ್, ಮತ್ತು ಹಾಸ್ಟೇಲ್ಸ್‌ಗಳಲ್ಲಿ ಸಾಂಸ್ಥಿಕ ಕ್ವಾರಂಟೈನ್‌ನಲ್ಲಿಡಲಾಗಿದೆ. ಅಲ್ಲಿ ಅವರಿಗೆ ಎಲ್ಲ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಆರೋಗ್ಯ ಇಲಾಖೆಯಿಂದ ಪ್ರತಿ ಎರಡು ದಿನಗಳಗೊಮ್ಮೆ ಅವರ ಆರೋಗ್ಯ ತಪಾಸಣೆಯನ್ನು ಕೈಕೊಳ್ಳಲಾಗುತ್ತಿದೆ. |
| 7. | ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?<br>ಹೌದು<br>ಮಾಡಲಾಗಿದೆ. |
| | **<u>2.ಕಂಟೆನ್ಮೆಂಟ್ ಮತ್ತು ಬಫರ್ ವಲಯಗಳು</u>** |
| 1. | ಎಲ್ಲಾ ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?<br>ಹೌದು |
| 2. | ನೀವು ಎಲ್ಲಾ ಕಂಟೈನ್‌ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದೀರಾ?<br>ಹೌದು<br>ಭೇಟಿ ನೀಡಿದ ನಿಯಂತ್ರಣ ವಲಯದ ವಿವರಗಳು:<br>ಕಂಟೈನ್‌ಮೆಂಟ್ ವಲಯ ನಂ-06 \| ವಿಜಯಪುರ ನಗರದ ಅಲ್ಲಾಪೂರ ಬೇಸ್<br>ಪರಿಶೀಲನೆಯ ಬಗ್ಗೆ 50 ಪದಗಳು ಮೀರದಂತೆ ವರದಿ:<br>ಸರಕಾರದ ನಿರ್ದೇಶನದಂತೆ ಸದರ ಕಂಟೇನ್ಮೆಂಟ್ ವಲಯ ಪ್ರದೇಶವನ್ನು ಸೀಲ್ ಡೌನ್ ಮಾಡಲಾಗಿದ್ದು, ಜನರಿಗೆ ಅಗತ್ಯ ವಸ್ತುಗಳನ್ನು ಅವರ ಮನೆ ಬಾಗಿಲಿಗೆ ಪೂರೈಸಲಾಗುತ್ತಿದೆ. |
| 3. | ಕಂಟೈನ್‌ಮೆಂಟ್ ವಲಯ ಮತ್ತು ಬಫರ್ ವಲಯಕ್ಕೆ Incident ಕಮಾಂಡರ್/ ಎಕ್ಸ್‌ಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?<br>ಹೌದು<br>ನೇಮಿಸಲಾಗಿದೆ. |
| 4. | ಕಂಟೇನ್ಮೆಂಟ್ ವಲಯಗಳಲ್ಲಿ ಮತ್ತು ಬಫರ್ ವಲಯಗಳಲ್ಲಿ ILIs /SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?<br>ಹೌದು<br>ಯಾವುದೇ ಸುಧಾರಣೆಗಳ ಅಗತ್ಯವಿದ್ದಲ್ಲಿ/ಅವಲೋಕಿಸಿದ ಅಂಶಗಳು (50 ಪದಗಳಗಿಂತ ಮೀರದಂತೆ)<br>• ಮಾನ್ಯ ಮುಖ್ಯ ಕಾರ್ಯದರ್ಶಿಗಳರವರ ಸೂಚನೆಯಂತೆ, ಕಂಟೇನ್ಮೆಂಟ್ ಝೋನ್ |

| | |
|---|---|
| | ಮತ್ತು ಕಂಟೇನ್ಮೆಂಟ್ ಝೋನ್ ಪ್ರದೇಶ ಹೊರತುಪಡಿಸಿ ಎ.ಎನ್.ಎಂ.. ಆಶಾ ಕಾರ್ಯಕರ್ತರಿಂದ ನಿರಂತರವಾಗಿ 07 ದಿನಗಳವರೆಗೆ ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಕೊಳ್ಳಲಾಗಿದ್ದು. ಈ ಸಮೀಕ್ಷೆ ಕಾರ್ಯದಲ್ಲಿ ಪ್ರತಿದಿನ ಕಂಡು ಬಂದ SARI ಮತ್ತು ILI ಪ್ರಕರಣಗಳನ್ನು ಗುರುತಿಸಿ. ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸುವ ಕುರಿತು ಕ್ರಮ ಜರುಗಿಸಲಾಗಿದೆ.<br>• ಸರಕಾರದ ನಿರ್ದೇಶನದಂತೆ ಮಹಾರಾಷ್ಟ್ರದಿಂದ ಬಂದವರನ್ನು 07 ದಿನಗಳ ಸಾಂಸ್ಥಿಕ ಕ್ವಾರಂಟೈನ್ ಪೂರ್ಣಗೊಳಸಿದವರನ್ನು ಹೋಮ್ ಕ್ವಾರಂಟೈನ್‌ನಲ್ಲಿರಿಸಲಾಗಿದ್ದು. ಸದರಿಯವರು ಹೊರಗಡೆ ತಿರುಗಾಡದಂತೆ ನೋಡಿಕೊಳ್ಳಲು. ಕಂದಾಯ ಮತ್ತು ಪಂಚಾಯತ ರಾಜ್ಯ ಇಲಾಖೆಯ ಸಿಬ್ಬಂದಿಗಳಿಗೆ ಕ್ವಾರೆಂಟೈನ್ ವಾಚ್ ಆ್ಯಪ್‌ನಲ್ಲಿ ಕ್ವಾರೆಂಟೈನ್ ನಲ್ಲಿರುವವರ ಸೆಲ್ಫಿ ಫೋಟೊ ತೆಗೆದು ಅಪಲೋಡ್ ಮಾಡಲು ಸೂಚಿಸಿದ್ದು ಇರುತ್ತದೆ.<br>• ಹೋಮ್ ಕ್ವಾರಂಟೈನ್‌ನಲ್ಲಿರುವವರು ಹೊರಗಡೆ ತಿರುಗಾಡದಂತೆ ನೋಡಿಕೊಳ್ಳಲು ಮೇಲ್ವಿಚಾರಣೆ ಕುರಿತು ನೋಡಲ್ ಅಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.<br>• ಹೋಮ್ ಕ್ವಾರಂಟೈನ್ ದಿಂದ ಹೊರಗಡೆ ತಿರುಗಾಡುವವರ ಮೇಲೆ ಎಫ್.ಐ.ಆರ್ ದಾಖಲಿಸುವುದು ಮತ್ತು ಅವರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇಡಲು ತಹಶೀಲದಾರರಿಗೆ ಸೂಚನೆ ನೀಡಲಾಗಿದೆ.<br>• ಖಾಸಗಿ ಆಸ್ಪತ್ರೆಗಳಲ್ಲಿ ವರದಿಯಾಗುವ ILI ಪ್ರಕರಣಗಳ ಪ್ರತಿ ದಿನದ ಮಾಹಿತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪಡೆದುಕೊಂಡು ಅವುಗಳನ್ನು ತಾಲೂಕಾ ಆಸ್ಪತ್ರೆಗೆ ಶಿಫಾರಸ್ಸು ಮಾಡಲು ಸೂಚಿಸಲಾಗಿದೆ. |
| | **3.ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು:** |
| 1. | ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಗಳಲ್ಲ ಬಾಕಿ ಉಳದಿದೆಯೇ?<br>ಲ್ಯಾಬ್ ಪರೀಕ್ಷೆಗಳ ಬಗ್ಗೆ ನಿಮ್ಮ ಸಲಹೆಗಳು: (50 ಪದಗಳಗಿಂತ ಮೀರದಂತೆ)<br>ಜಿಲ್ಲೆಯಲ್ಲಿ ಇದುವರೆಗೂ ಒಟ್ಟು 27.884-ಜನರನ್ನು ನಿರೀಕ್ಷಣೆಯಲ್ಲಿರಿಸಲಾಗಿದ್ದು. ಎಲ್ಲ 25.422 ಜನರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟ್ ಪರೀಕ್ಷಿಗೆ ಕಳುಹಿಸಲಾಗಿದ್ದು. ಅವರಲ್ಲಿ 23.035 ಜನರ ಲ್ಯಾಬ್ ಟೆಸ್ಟ್ ವರದಿ ನೆಗಟಿವ್ ಆಗಿದ್ದು. 2.200 ಜನರ ಲ್ಯಾಬ್ ಟೆಸ್ಟ್ ವರದಿ ನಿರೀಕ್ಷಿಸಲಾಗಿದೆ.<br>ಮಹಾರಾಷ್ಟ್ರ ಮತ್ತು ಇತರೆ ರಾಜ್ಯಗಳಿಂದ ಒಟ್ಟು 26.324 ಜನರು ಜಿಲ್ಲೆಗೆ ಆಗಮಿಸಿದ್ದು. ಅವರನ್ನು ವಿವಿಧ ತಾಲೂಕಾಗಳಾದ್ಯಂತ ಸ್ಥಾಪಿಸಲಾದ ಒಟ್ಟು 576 ಸಾಂಸ್ಥಿಕ ಕ್ವಾಂರಟೈನ್‌ಗಳಲ್ಲಿರಿಸಲಾಗಿದ್ದು ಇರುತ್ತದೆ. ಅವರೆಲ್ಲರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟಿಗೆ ಕಳುಹಿಸಲಾಗಿರುತ್ತದೆ. |
| 2. | ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ಆರೋಗ್ಯ ಸಿಬ್ಬಂದಿಗೆ ಹೈಡ್ರಾಕ್ಸಿ ಕ್ಲೋರೋಕ್ವಿನ್ ಸಲ್ಫೇಟ್ (ಎಚ್.ಸಿ.ಕ್ಯೂ) ನೀಡಲಾಗಿದೆಯೇ?<br>ಹೌದು |
| 3. | ನೀವು ಮೀಸಲಿರಿಸಿದ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ? |

| | | |
|---|---|---|
| | | ಹೌದು |
| 4. | ನೀವು ಮೀಸಲಾದ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಗಮನಿಸಿದ ಅಂಶಗಳು (50 ಪದಗಳಗೆ ಮೀರದಂತೆ)<br><br>80- ಹಾಸಿಗೆವುಳ್ಳ ಕೋವಿಡ್ ಆಸ್ಪತ್ರೆ. 187 ಕೋವಿಡ್ ಪಾಸಿಟವ್ ಪ್ರಕರಣಗಳು. ಇದರಲ್ಲಿ 65- ರೋಗಿಗಳನ್ನು ಬಿಡುಗಡೆಗೊಳಸಲಾಗಿದೆ. ಆಸ್ಪತ್ರೆಯಲ್ಲಿ ಈಗ ಸಧ್ಯ 117 ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಮುಂಜಾನೆ ತಿಂಡಿ ಹಾಗು ಚಹಾ. ಮಧ್ಯಾಹ್ನ ಮತ್ತು ರಾತ್ರಿ ಒಳ್ಳೆಯ ಊಟದ ವ್ಯವಸ್ಥೆ ಮಾಡಲಾಗಿದೆ.<br><br>ಕೋವಿಡ್-19 ಪ್ರಕರಣಗಳಗೆ ಉತ್ತಮ ಚಿಕಿತ್ಸೆಯನ್ನು ಜಿಲ್ಲಾ ಆಸ್ಪತ್ರೆಯಲ್ಲಿ ನೀಡುವ ಕುರಿತು ಹಿರಿಯ ವೈದ್ಯಾಧಿಕಾರಿಗಳು ಪ್ರತಿದಿನ ಕೋವಿಡ್ ವಾರ್ಡಿಗೆ ಭೇಟಿ ನೀಡಿ ಸರಿಯಾಗಿ ಚಿಕಿತ್ಸೆ ನೀಡುತ್ತಿರುವ ಬಗ್ಗೆ ಪರಿಶೀಲಿಸಲು ಸೂಚಿಸಲಾಗಿದೆ. | |
| 5. | ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ? | ಹೌದು |
| 5. | (ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ? | ಹೌದು |
| | (ಬಿ) ಸಿಬ್ಬಂದಿಗಳಗೆ ತರಬೇತಿ ನೀಡಲಾಗಿದೆಯೇ? | ಹೌದು |
| ಒಟ್ಟಾರೆ ವೀಕ್ಷಿಸಿದ ಅಂಶಗಳು: | ಸರ್ಕಾರದ ಒಟ್ಟಾರೆ ನಿರ್ದೇಶನಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ. ಮಹರಾಷ್ಟ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ವಿಜಯಪುರಕ್ಕೆ ಬಂದಿರುವುದರಿಂದ, ಕೋವಿಡ್ ಪಾಸಿಟವ್ ಸಂಖ್ಯೆ ಹೆಚ್ಚಳವಾಗುತ್ತಿದೆ. ಉಳದಂತೆ, ಪರಿಸ್ಥಿತಿ ನಿಯಂತ್ರಣದಲ್ಲಿದೆ. | |

ದಿನಾಂಕ:05-06-2020

ಡಾ: ಜೆ.ರವಿಶಂಕರ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ.ಮಂಡಳ,
ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ.

**ದಿನಾಂಕ:05.06.2020ರಂದು ಡಾ:ತ್ರಿಲೋಕ್ ಚಂದ್ರ, ಭಾ.ಆ.ಸೇ., ಮಾನ್ಯ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೊರೊನಾ ನಿಯಂತ್ರಣ ಸಂಬಂಧ ನಡೆದ ಸಭೆಯ ನಡವಳಿ**

*****

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯರವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಾರ್ಯಕಲಾಪವನ್ನು ನಡೆಸಿ ಕೊಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಿಲ್ಲೆಯಲ್ಲಿ ಕೋವಿಡ್-19 ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ನಿಯಂತ್ರಣ ಸಂಬಂಧ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು ಹಾಗೂ ಹೊರ ರಾಜ್ಯದಿಂದ ಬರುವ ಜನರನ್ನು ಯಾವ ರೀತಿ ಪರೀಕ್ಷಿಸಲಾಗುತ್ತಿದೆ ಎಂಬ ಮಾಹಿತಿ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರಿಗೆ ಸೂಚಿಸಿದರು.

Covid-19 Information:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು ಮಾತನಾಡಿ, ಜಿಲ್ಲೆಯಲ್ಲಿ ಇದುವರೆಗೆ 11170 ಸ್ವ್ಯಾಬ್ ಮಾದರಿ ಸಂಗ್ರಹಿಸಿದ್ದು, 10302-ಪ್ರಕರಣಗಳು ನೆಗೆಟಿವ್ ಆಗಿದ್ದು, 317 ಪ್ರಕರಣಗಳು ಪಾಸಿಟಿವ್ ಇದ್ದು, 132 ಪ್ರಕರಣಗಳು ಡಿಸ್‌ಚಾರ್ಜ್ ಆಗಿದ್ದು, 183 ಸಕ್ರಿಯ ಪ್ರಕರಣಗಳಿದ್ದು, 551 ಪ್ರಕರಣಗಳಲ್ಲಿ ಪರೀಕ್ಷಾ ವರದಿ ಬರುವುದು ಬಾಕಿ ಇದೆ ಎಂದು ಮಾಹಿತಿ ನೀಡಿದರು. ಹೊರರಾಜ್ಯದಿಂದ ಬರುವ ರೋಗ ಲಕ್ಷಣಗಳಿರುವವರಿಗೆ 7 ದಿನಗಳ ಆಸ್ಪತ್ರೆ ಐಸೋಲೇಶನ್ ಹಾಗೂ 14 ದಿನಗಳ ಹೋಂ ಕ್ವಾರಂಟೈನ್ ವಿಧಿಸಲಾಗುವುದು, 14 ದಿನದ ನಂತರ ಕೂಡ ಪರೀಕ್ಷೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ILI /SARI cases report:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು ಜಿಲ್ಲೆಯಲ್ಲಿ ಒಟ್ಟು ILI ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ವರದಿಯಾದ ಒಟ್ಟು ಪ್ರಕರಣಗಳು-609, ಖಾಸಗಿ ಆಸ್ಪತ್ರೆಯಲ್ಲಿ ವರದಿಯಾದ ಒಟ್ಟು ಪ್ರಕರಣಗಳು-228, ಸಂಗ್ರಹಿಸಲಾದ ಒಟ್ಟು ಮಾದರಿಗಳು-837, ಅದರಲ್ಲಿ ನೆಗೆಟಿವ್-781, ಫಲಿತಾಂಶ ಬರಬೇಕಾಗಿರುವುದು-56, ಅದೇ

ರೀತಿ SARI ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ವರದಿಯಾದ ಒಟ್ಟು ಪ್ರಕರಣಗಳು-63, ಖಾಸಗಿ ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳಲ್ಲಿ ವರದಿಯಾದ ಒಟ್ಟು ಪ್ರಕರಣಗಳು-5, ಸಂಗ್ರಹಿಸಲಾದ ಒಟ್ಟು ಮಾದರಿಗಳು-68, ಅದರಲ್ಲಿ ನೆಗೆಟಿವ್-65, ಫಲಿತಾಂಶ ಬರಬೇಕಾಗಿರುವುದು-3 ಇರುವುದಾಗಿ ತಾಲ್ಲೂಕುವಾರು ಮಾಹಿತಿಯನ್ನು ಸಭೆಗೆ ತಿಳಿಸಿದರು.

## ILI/SARI Reporting by private Medical Establishment:

ಜಿಲ್ಲೆಯಲ್ಲಿ ಒಟ್ಟು 521 Medical Establishmentಗಳಿದ್ದು, ಅದರಲ್ಲಿ ಲ್ಯಾಬ್ ಇಲ್ಲದಿರುವುದು-388, ILI Case Report ಆಗಿರುವುದು-228, SARI Case Report ಆಗಿರುವುದು-05, ಒಟ್ಟು-233 ಪ್ರಕರಣಗಳಿದ್ದು, Reported institutions-334 ಇರುವುದಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿರವರು ಮಾತನಾಡಿ, ಖಾಸಗಿ ಕ್ಲಿನಿಕ್‌ಗಳು ಪ್ರಾರಂಭವಾಗಿಲ್ಲ ಸದರಿ ಮಾಹಿತಿಯನ್ನು ತೆಗೆದುಕೊಂಡು ನೋಂದಣಿಯನ್ನು ರದ್ದು ಮಾಡುವುದಾಗಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಖಾಸಗಿ ಆಸ್ಪತ್ರೆಯನ್ನು ತೆರೆದು ಚಿಕಿತ್ಸೆ ನೀಡದೆ ಇದ್ದಲ್ಲಿ, ಅಂತಹವರ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

## Pharmacy Report:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು ಜಿಲ್ಲೆಯಲ್ಲಿ ಒಟ್ಟು ಫಾರ್ಮಸಿ-634, ಜ್ವರ ಮತ್ತು ಕೆಮ್ಮಿಗೆ ಔಷಧಿ ವಿತರಣೆ ಮಾಡಿ ವರದಿ ಮಾಡಿರುವ ಫಾರ್ಮಸಿಗಳು(Cumulative)-582, ಜ್ವರ ಮತ್ತು ಕೆಮ್ಮಿಗೆ ಔಷಧಿ ವಿತರಣೆ ಮಾಡಿ ವರದಿ ಮಾಡದಿರುವ ಫಾರ್ಮಸಿಗಳ ಸಂಖ್ಯೆ-52, ಶೇ.91.71ರಷ್ಟು ವರದಿಯಾಗಿದೆ, ಜ್ವರ ಮತ್ತು ಕೆಮ್ಮಿಗೆ ಔಷಧಿ ಖರೀದಿಸಿರುವವರ ಸಂಖ್ಯೆ(ಇಲ್ಲಿಯವರೆಗೆ)-496, ವರದಿ ಮಾಡದಿರುವ ಫಾರ್ಮಸಿಗಳ ಸಂಖ್ಯೆ-138, ಶೇ.78.23ರಷ್ಟು ವರದಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿರವರು ಮಾತನಾಡಿ, ILI Case Report App ನಲ್ಲಿ 415 ಪ್ರಕರಣಗಳು ವರದಿಯಾಗಿದ್ದು, ಖಾಸಗಿ ಆಸ್ಪತ್ರೆಯವರು Priscription ಬರೆಯುವುದನ್ನು ILI Case ಎಂದು ಎಂಟ್ರಿ ಮಾಡುತ್ತಾರೆ. App ನಲ್ಲಿ ಒಂದು ಬಾರಿ ಎಂಟ್ರಿ ಮಾಡಿದ ಮೇಲೆ ಅದನ್ನು ರದ್ದುಗೊಳಿಸುವುದಕ್ಕೆ ಅವಕಾಶವಿಲ್ಲವೆಂದು, ಇದರಿಂದ duplication ಆಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

Positive cases clinical management:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ, ಮಿಮ್ಸ್‌ನಲ್ಲಿ ಒಟ್ಟು ಲಭ್ಯವಿರುವ ಹಾಸಿಗೆಗಳ ಸಂಖ್ಯೆ-650, ಕೋವಿಡ್ ಆಸ್ಪತ್ರೆಯಲ್ಲಿ ಒಟ್ಟು ಲಭ್ಯವಿರುವ ಹಾಸಿಗೆಗಳ ಸಂಖ್ಯೆ-300, ಕೋವಿಡ್ ಹೆಲ್ತ್ ಸೆಂಟರ್‌ನಲ್ಲಿ ಒಟ್ಟು ಲಭ್ಯವಿರುವ ಹಾಸಿಗೆಗಳ ಸಂಖ್ಯೆ-350, ಇತರೆ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳ ಸಂಖ್ಯೆ-300, ಕೋವಿಡ್ ಆಸ್ಪತ್ರೆಯಲ್ಲಿ ಲಭ್ಯ ವಿರುವ ಹೈಫ್ಲೋಆಕ್ಸಿಜನ್ ಹಾಸಿಗೆಗಳ ಸಂಖ್ಯೆ-150, ಒಟ್ಟು ದಾಖಲಾಗಿರುವ ಪ್ರಕರಣಗಳ ಸಂಖ್ಯೆ-315, ಡಿಸ್‌ಚಾರ್ಜ್ ಆಗಿರುವ ಪ್ರಕರಣಗಳು-132, ಪ್ರಸ್ತುತ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ-183 ಇರುವುದಾಗಿ ಹಾಗೂ ಮಿಮ್ಸ್ ಮತ್ತು ಡಿ.ಹೆಚ್.ಓ. ಕಛೇರಿಯಲ್ಲಿರುವ ಕೊರೊನಾ ಔಷಧಿ ಹಾಗೂ ಇತರೆ ಲಭ್ಯವಿರುವ ಉಪಕರಣ/ಸಾಮಗ್ರಿಗಳ ದಾಸ್ತಾನು ಮಾಹಿತಿಯನ್ನು ಸಭೆಗೆ ತಿಳಿಸಿದರು.

Overview of CÓVID-19 and Utilisation of SDRF Fund, Released to Taluk Level:

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 20 ಕಂಟೈನ್ಮೆಂಟ್ ಝೋನ್ ಹಾಗೂ 14 ಬಫರ್ ಝೋನ್‌ಗಳಿದ್ದು ಮಾಹಿತಿಯನ್ನು ಅಪ್‌ಡೇಟ್ ಮಾಡಿರುವುದಾಗಿ ತಿಳಿಸಿದರು. ಕೊರೊನಾ ನಿಯಂತ್ರಣಕ್ಕೆ ಇದುವರೆಗೆ ಎಸ್.ಡಿ.ಆರ್.ಎಫ್. ಫಂಡ್‌ನ ಅನುದಾನದಲ್ಲಿ PPE Kit and Disposable Items- Rs.8.00lakhs, COVID Lab-Rs.50.00lakhs, Ventilator Air compressor-Rs.4.24lakhs, ಒಟ್ಟು Rs.62.24lakhs ವೆಚ್ಚ ಮಾಡಲಾಗಿದೆ. ಹಾಗೆಯೇ Committed Expenditure Covid Lab-Rs.50.00lakhs, High flow nasal oxygen Therapy Device-Rs.7.0 lakhs, PPE Kit and N-95 Mask-Rs.7.25lakhs ಒಟ್ಟು Rs.64.25lakhs ವೆಚ್ಚವಾಗಿದೆ. ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಗಳಿಗೆ ಕೊರೊನಾಗೆ ವೆಚ್ಚ ಭರಿಸಲು ಎಸ್.ಡಿ.ಆರ್.ಎಫ್. ಫಂಡ್‌ನಿಂದ ಕನಿಷ್ಠ ತಲಾ

ರೂ.75.00ಲಕ್ಷಗಳನ್ನು ನೀಡಲಾಗಿದ್ದು, ಇತ್ತೀಚೆಗೆ ರೂ.140.00ಲಕ್ಷಗಳನ್ನು ತಾಲ್ಲೂಕುವಾರು ಅನುದಾನ ಬಿಡುಗಡೆ ಮಾಡಿದ್ದು, ಸರ್ಕಾರಿ ಮಾರ್ಗಸೂಚಿಯನ್ವಯ ಅನುದಾನವನ್ನು ಕ್ವಾರಂಟೈನ್ ಕೇಂದ್ರಗಳಲ್ಲಿನ ಅವಶ್ಯಕತೆಗಳಿಗೆ ವೆಚ್ಚ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

Inter state arrival details:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ, ಇದುವರೆವಿಗೆ ಹೊರ ರಾಜ್ಯದಿಂದ ಜಿಲ್ಲೆಗೆ 2111 ಜನ ಬಂದಿದ್ದು, ಇದರಲ್ಲಿ 1874 ಜನರನ್ನು ಪರೀಕ್ಷೆಗೊಳಪಡಿಸಿದ್ದು, 278 ಪಾಸಿಟಿವ್, 1471 ನೆಗೆಟಿವ್ ಬಂದಿದ್ದು, ಇನ್ನು 125 ಪ್ರಕರಣಗಳ ವರದಿ ಬರುವುದು ಬಾಕಿ ಇರುತ್ತವೆ. ಮಹಾರಾಷ್ಟ್ರದಿಂದ ಜಿಲ್ಲೆಗೆ 1637 ಜನ ಬಂದಿದ್ದು, 1548 ಜನರನ್ನು ಪರೀಕ್ಷೆಗೆ ಒಳಪಡಿಸಿದ್ದು, 278 ಪಾಸಿಟಿವ್, 1187 ನೆಗೆಟಿವ್ ಬಂದಿದೆ. ಇನ್ನು ಪರೀಕ್ಷಾ ವರದಿ ಬಾಕಿ ಇರುವ 83 ಪ್ರಕರಣಗಳಲ್ಲಿ 4 ಪಾಸಿಟಿವ್ ಬಂದಿದ್ದು, ಅದನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿದೆ ಎಂದು ತಿಳಿಸಿದರು.

Covid-19 related App details:

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ, ಕೋವಿಡ್-19ಗೆ ಸಂಬಂಧಿಸಿದ App Details ಬಗ್ಗೆ ವಿವರಿಸುತ್ತಾ, Contact tracing Appನಲ್ಲಿ ವಿವರಗಳನ್ನು ದಾಖಲಿಸಲಾಗಿದೆ, Health Watch App(House to house survey)ಯಲ್ಲಿ ಮನೆಗಳ ಸಂಖ್ಯೆ ಕಡಿಮೆ ಇದ್ದು, 4-5 ಕುಟುಂಬಗಳು ಒಂದೇ ಮನೆಯಲ್ಲಿರುವುದರಿಂದ ಸರ್ವೇಯನ್ನು ಮೂರು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು Health Watch App Comorbid Conditions-75112 ಇದ್ದು, ಅದರಲ್ಲಿ ಎಷ್ಟು ಜನರಿಗೆ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಕಿಡ್ನಿ, ಇನ್ನಿತರೆ ತೀವ್ರತರದ ಖಾಯಿಲೆ ಇದೆ ಎಂಬ ಬಗ್ಗೆ ಮಾಹಿತಿ ಕೇಳಿದರು.

ಅಪರ ಜಿಲ್ಲಾಧಿಕಾರಿಯವರು ಕ್ವಾರಂಟೈನ್ ವಾಚ್ ಬಗ್ಗೆ ಮಾತನಾಡುತ್ತಾ, ಸಾಂಸ್ಥಿಕ ಕ್ವಾರಂಟೈನ್ ಮುಗಿಸಿಕೊಂಡು ಹೋಂ ಕ್ವಾರಂಟೈನ್‌ಗೆ ಹೋಗುತ್ತಾರೆ, ಈ ಬಗ್ಗೆ ವಿ.ಎ. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯದರ್ಶಿಗಳ ಮೂಲಕ ಎಂಟ್ರಿಯನ್ನು ಮಾಡಿಸಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು

ಮಾತನಾಡಿ, ಹೊರರಾಜ್ಯದಿಂದ ಬಂದಿರುವವರನ್ನು 14 ದಿನ ಆದ ನಂತರವೂ ಅವರ ಆರೋಗ್ಯದ ಬಗ್ಗೆ ಪರಿಶೀಲಿಸಬೇಕೆಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು. ಅಪರ ಜಿಲ್ಲಾಧಿಕಾರಿಯವರು ಮುಂದುವರೆದು ಮಾತನಾಡಿ, ಹೆಲ್ತ್ ವಾಚ್‌ನ್ನು ಅಂಗನವಾಡಿ, ಆಶಾ ಕಾರ್ಯಕರ್ತೆಯರು ಮತ್ತು ಶಿಕ್ಷಕರುಗಳಿಂದ ಮಾಡಿಸಲಾಗುತ್ತಿದೆ, ಕಂಟೈನ್ಮೆಂಟ್ ಝೋನ್ ಸರ್ವೇ ಆಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಕಂಟೈನ್ಮೆಂಟ್ ಝೋನ್ ಸರ್ವೆಯನ್ನು ಯಾವ ರೀತಿ ಮಾಡುತ್ತಿದ್ದೀರೆಂದು ವಿಷಯ ಪ್ರಸ್ತಾಪಿಸಿದಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಎನ್.ಸಿ.ಡಿ. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು ಕಂಟೈನ್ಮೆಂಟ್ ಝೋನ್‌ನಲ್ಲಿರುವವರಿಗೆ ಖಾಯಿಲೆಯ ಸ್ವರೂಪವನ್ನು ಪರಿಶೀಲಿಸಿ ಕಿಟ್‌ಗಳನ್ನು ನೀಡುತ್ತಿದ್ದಾರೆ. ಗರ್ಭಿಣಿ ಮಹಿಳೆಯರು, ಡಯಾಲಿಸಿಸ್ ರೋಗಿಗಳನ್ನು ತಾಲ್ಲೂಕು ಆಸ್ಪತ್ರೆಯಿಂದ ಜಿಲ್ಲಾಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ನಂತರ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ವೀಡಿಯೋ ಸಂವಾದದ ಮೂಲಕ ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಹಾಗೂ ಟಿ.ಹೆಚ್.ಓ.ರವರನ್ನು ಸಂಪರ್ಕಿಸಿ, ಹೊರ ರಾಜ್ಯದಿಂದ ಬಂದವರನ್ನು ಯಾವ ರೀತಿ ಕ್ವಾರಂಟೈನ್ ಮಾಡಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ಕೇಳಿದರು.

ಮೊದಲಿಗೆ ಕೆ.ಆರ್.ಪೇಟೆ ತಾಲ್ಲೂಕು ತಹಶೀಲ್ದಾರ್‌ರವರು ಮಾತನಾಡಿ, ದಿಃ01.06.2020ರಂದು ಹೊರರಾಜ್ಯದಿಂದ ತಾಲ್ಲೂಕಿಗೆ 65 ಜನರು ಬಂದಿದ್ದು, ಅವರನ್ನು ಮೂರು ಹಾಸ್ಟೆಲ್‌ಗಳಿಗೆ ಶಿಫ್ಟ್ ಮಾಡಲಾಗಿದ್ದು, 24 ಜನರಿಗೆ ಸ್ವ್ಯಾಬ್ ಹಾಕಿ ಹೋಂ ಕ್ವಾರಂಟೈನ್ ಮಾಡಲಾಗಿದ್ದು, ಸದರಿ ಮಾಹಿತಿಯನ್ನು ಮೊಬೈಲ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಸದರಿಯವರ ಮನೆ ಮುಂದೆ ಬೋರ್ಡ್ ಹಾಕಲಾಗಿದೆ, ಹೋಂ ಕ್ವಾರಂಟೈನ್‌ನಲ್ಲಿರುವವರು ಮನೆಯಿಂದ ಹೊರಗೆ ಬಂದಲ್ಲಿ ತಿಳಿಸುವಂತೆ ಅಕ್ಕಪಕ್ಕದ ಜನರಿಗೆ ಸೂಚನೆ ನೀಡಲಾಗಿದೆ. 10 ವರ್ಷದ ಒಳಗಿನವರು, 60 ವರ್ಷ ಮೇಲ್ಪಟ್ಟ ವಯೋವೃದ್ಧರನ್ನು ಮನೆಗೆ ಕಳುಹಿಸಲು ಹೊಸ ಮಾರ್ಗಸೂಚಿಯಲ್ಲಿ ತಿಳಿಸಲಾಗಿದ್ದು, ಅದರಂತೆ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿ, ಟಾಂಟಾಂ ಮಾಡಿಸಲಾಗಿದೆ. 21 ಜನರ ಪರೀಕ್ಷಾ ವರದಿ ಬರುವುದು ಬಾಕಿ ಇದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಹೆಲ್ತ್‌ವಾಚ್ (ಮನೆ ಮನೆ ಸರ್ವೆ) ಮಾಡಲಾಗಿದ್ದು, ಜಿಲ್ಲೆಯಲ್ಲಿ Comorbid Conditions-75112 ಇದ್ದು, ಅದರಲ್ಲಿ ಹೈ-ರಿಸ್ಕ್ ಅಂದರೆ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಕಿಡ್ನಿ, ಇನ್ನಿತರೆ ತೀವ್ರತರದ ಖಾಯಿಲೆ ಇರುವವರನ್ನು ಗುರುತಿಸಿ ನಿಯಂತ್ರಣ ಮಾಡಲು ಕ್ರಮ ವಹಿಸುವಂತೆ ಹಾಗೂ ಹೋಂ ಕ್ವಾರಂಟೈನ್‌ನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವಂತೆ, ಈ ಮಾಹೆ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆ ನಡೆಯಲಿರುವುದರಿಂದ ಕ್ವಾರಂಟೈನ್ ಮಾಡಲಾಗಿದ್ದ ಶಾಲೆ, ಕಾಲೇಜು, ಹಾಸ್ಟೆಲ್‌ಗಳನ್ನು 2-3 ಬಾರಿ ಸ್ಯಾನಿಟೈಸ್ ಮಾಡಿ ಹಸ್ತಾಂತರಿಸುವಂತೆ ತಹಶೀಲ್ದಾರ್‌ಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕ್ವಾರಂಟೈನ್‌ನಲ್ಲಿರುವ SARI/ILI Case ಸ್ಯಾಚುರೇಶನ್‌ನ್ನು ತಹಶೀಲ್ದಾರ್ ಹಾಗೂ ಟಿ.ಹೆಚ್.ಓ.ರವರು ಕಡ್ಡಾಯವಾಗಿ ಟೆಸ್ಟ್ ಮಾಡಬೇಕೆಂದು, ವಹಿಸುತ್ತಿರುವ ಕ್ರಮದ ಬಗ್ಗೆ ಕೇಳಿದಾಗ, ಟಿ.ಹೆಚ್.ಓ.ರವರು ಕ್ವಾರಂಟೈನ್‌ಗಳಲ್ಲಿ ಥರ್ಮಲ್ ಸ್ಕ್ಯಾನಿಂಗ್ ಹಾಗೂ ಸ್ಯಾಚುರೇಶನ್ ಮಾಡಲಾಗುತ್ತಿದ್ದು SARI Case ಆಗಿದ್ದ ಪ್ರಕರಣವನ್ನು ತಾಲ್ಲೂಕು ಆಸ್ಪತ್ರೆಯಿಂದ ಜಿಲ್ಲಾ ಕೋವಿಡ್ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ನಾಗಮಂಗಲ ತಹಶೀಲ್ದಾರ್‌ರವರು ಮಾತನಾಡಿ, ತಾಲ್ಲೂಕಿಗೆ ಹೊರರಾಜ್ಯದಿಂದ 294 ಜನರು ಬಂದಿದ್ದು, ಹೋಂ ಕ್ವಾರಂಟೈನ್‌ನಲ್ಲಿ 14 ಜನರನ್ನು ಇರಿಸಿದ್ದು, 16 ಜನರನ್ನು ಸಾಂಸ್ಥಿಕ ಕ್ವಾರಂಟೈನ್ ಮಾಡಲಾಗಿದೆ, 31 ಸೋಂಕು ದೃಢಪಟ್ಟಿದ್ದು, 260 ಪ್ರಕರಣಗಳ ಸ್ವ್ಯಾಬ್ ವರದಿ ಬರುವುದು ಬಾಕಿ ಇದೆ, ಮೊರಾರ್ಜಿ ದೇಸಾಯಿ ಶಾಲೆಯ ಹಾಸ್ಟೆಲ್‌ಗಳನ್ನು ಬಿಟ್ಟುಕೊಡಲು ಪತ್ರ ಬಂದಿರುವುದಾಗಿ ತಿಳಿಸಿದಾಗ, ಜಿಲ್ಲಾಧಿಕಾರಿಗಳು 2-3 ಬಾರಿ ಸ್ಯಾನಿಟೈಸ್ ಮಾಡಿ ಬಿಟ್ಟುಕೊಡಲು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ ಯಾವುದೇ ಹೈ-ರಿಸ್ಕ್ ಪ್ರಕರಣಗಳಿಲ್ಲ, ಈ ದಿನ 8 ಜನರು ಹೊರರಾಜ್ಯದಿಂದ ಜಿಲ್ಲೆಗೆ ಬಂದಿದ್ದಾರೆ, ಪಲ್ಸ್ ಆಕ್ಸಿಮೀಟರ್-19 ಇದ್ದು, ಪಿ.ಹೆಚ್.ಸಿ.ಗಳಿಗೆ ನೀಡಲಾಗಿದೆ ಎಂದು ತಿಳಿಸಿದಾಗ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಪಿ.ಹೆಚ್.ಸಿ.ಯಲ್ಲಿರುವ ಪಲ್ಸ್ ಆಕ್ಸಿಮೀಟರ್‌ಗಳನ್ನು ಆಶಾ ಕಾರ್ಯಕರ್ತೆಯರು ಪರೀಕ್ಷಿಸುವುದಕ್ಕೆ ನೀಡಿ ನಂತರ ಅವುಗಳನ್ನು ಪಿ.ಹೆಚ್.ಸಿ.ಗಳಿಗೆ ಹಿಂತಿರುಗಿಸುವಂತೆ ಕ್ರಮ ವಹಿಸಲು ತಿಳಿಸಿದರು. ಹೈ-ರಿಸ್ಕ್ ಪ್ರಕರಣಗಳು, SARI/ILI Case ಇರುವವರಿಗೆ ಸರಿಯಾಗಿ ಚಿಕಿತ್ಸೆ ನೀಡಿ ನಿಯಂತ್ರಿಸುವಂತೆ ಹಾಗೂ ಕ್ವಾರಂಟೈನ್ ವಾಚ್ ಸರಿಯಾಗಿ ಮಾಡುವಂತೆ ಡಿ.ಹೆಚ್.ಓ.ರವರಿಗೆ ತಿಳಿಸಿದರು. ಹೋಂ ಕ್ವಾರಂಟೈನ್‌ನಲ್ಲಿರುವವರು ಯಾವುದೇ ಉಲ್ಲಂಘನೆ ಮಾಡದಂತೆ ನೋಡಿಕೊಳ್ಳಲು ಸಹ ತಿಳಿಸಿದರು.

ಪಾಂಡವಪುರ ತಹಶೀಲ್ದಾರ್‌ರವರು ಮಾತನಾಡಿ, ಹೊರರಾಜ್ಯದಿಂದ ತಾಲ್ಲೂಕಿಗೆ 127 ಜನರು ಬಂದಿದ್ದು, 2ನೇ ಬಾರಿ ಸ್ವ್ಯಾಬ್ ಸಂಗ್ರಹಿಸಲಾಗಿದೆ, ನಿನ್ನೆ 7 ಜನರು ಬಂದಿದ್ದು ಅವರನ್ನು ಕ್ವಾರಂಟೈನ್ ಮಾಡಲಾಗಿದೆ, 65 ಜನರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರಿಸಲಾಗಿದ್ದು, ಹೋಂ ಕ್ವಾರಂಟೈನ್‌ನಲ್ಲಿ 52 ಜನರಿದ್ದು, ಕ್ವಾರಂಟೈನ್ ಸುತ್ತಮುತ್ತಲಿನ ಮನೆಯವರಿಗೆ ಅವರುಗಳು ಹೊರಗಡೆ ಹೋಗದಂತೆ ನಿಗಾ ವಹಿಸಲು ತಿಳುವಳಿಕೆ ನೀಡಲಾಗಿದೆ ಎಂದು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ 10 ಥರ್ಮಲ್ ಸ್ಕ್ಯಾನರ್‌ಗಳಿದ್ದು, ಅವುಗಳನ್ನು ಕ್ವಾರಂಟೈನ್ ಕೇಂದ್ರಗಳಿಗೆ ನೀಡಲಾಗಿದೆ, ಹೊರರಾಜ್ಯದಿಂದ ಬಂದಿರುವವರ ಸ್ವ್ಯಾಬ್ ಸಂಗ್ರಹಿಸಿ ಪರೀಕ್ಷಿಸಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿಯವರು ಮಾತನಾಡಿ, ಹೈ-ರಿಸ್ಕ್ ಕೇಸ್‌ಗಳನ್ನು ಆಶಾ ಕಾರ್ಯಕರ್ತೆಯರ ಮೂಲಕ ಪರೀಕ್ಷಿಸುವಂತೆ ಎಲ್ಲಾ ತಾಲ್ಲೂಕಿನ ಟಿ.ಹೆಚ್.ಓ.ರವರಿಗೆ ತಿಳಿಸಿ ಅವರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯವಿದ್ದಲ್ಲಿ ಸ್ಪೆಷಲಿಸ್ಟ್‌ಗಳಿಗೆ ರೆಫರ್ ಮಾಡುವಂತೆ ಸಹ ಸೂಚಿಸಿದರು.

ಮಳವಳ್ಳಿ ತಹಶೀಲ್ದಾರ್‌ರವರು ಮಾತನಾಡಿ, ತಾಲ್ಲೂಕಿನಲ್ಲಿ ಹೋಂ ಕ್ವಾರಂಟೈನ್‌ನಲ್ಲಿ 36 ಜನರಿದ್ದು, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ 6 ಜನರಿರುತ್ತಾರೆ, ಈಗ ಹೊರರಾಜ್ಯದಿಂದ 48 ಜನರು ಬಂದಿದ್ದಾರೆ, ಕ್ವಾರಂಟೈನ್ ಮಾಡಿದ್ದ ಮೂರು ಹಾಸ್ಟೆಲ್‌ಗಳಲ್ಲಿ ಸ್ಯಾನಿಟೈಸ್ ಮಾಡಲಾಗಿದೆ ಎಂದು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ಹಲಗೂರು, ಮಳವಳ್ಳಿ ಜನರಲ್ ಆಸ್ಪತ್ರೆಯಲ್ಲಿ ಸ್ವ್ಯಾಬ್ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣ ತಹಶೀಲ್ದಾರ್‌ರವರು ಮಾತನಾಡಿ, ತಾಲ್ಲೂಕಿಗೆ ಹೊರರಾಜ್ಯದಿಂದ 57 ಜನರು ಬಂದಿದ್ದು, ಇದುವರೆಗೆ 275 ಸ್ವ್ಯಾಬ್ ಸಂಗ್ರಹಿಸಲಾಗಿದೆ ಯಾವುದೇ ಸಮಸ್ಯೆಯಿಲ್ಲವೆಂದು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ 53 ಜನರು ಹೋಂ ಕ್ವಾರಂಟೈನ್‌ನಲ್ಲಿದ್ದು, ಪ್ರತಿ ದಿನ ಕ್ವಾರಂಟೈನ್ ಕೇಂದ್ರಗಳಿಗೆ ಭೇಟಿ ನೀಡಿ ಪಲ್ಸ್ ಪರೀಕ್ಷಿಸಲಾಗುತ್ತಿದೆ, ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಜ್ವರ ಇರುವ ಪ್ರಕರಣಗಳನ್ನು ಸಹ ಪರೀಕ್ಷಿಸಿ ಕ್ಲಿನಿಕ್‌ನಿಂದ ಆಸ್ಪತ್ರೆಗೆ ಕಳುಹಿಸುವಂತೆ ತಿಳಿಸಲಾಗಿದೆ. ಬಾಂಬೆಯಿಂದ ಮೂರು ಜನರು ಬಂದಿರುತ್ತಾರೆ, ಅವರಿಗೆ ಸ್ವ್ಯಾಬ್ ಪರೀಕ್ಷಿಸಿದ್ದು, ವರದಿ ಬರುವವರೆಗೂ ಕ್ವಾರಂಟೈನ್‌ನಲ್ಲಿಡಲಾಗಿದೆ ಎಂದು ಸಹ ತಿಳಿಸಿದರು.

ಮದ್ದೂರು ತಹಶೀಲ್ದಾರ್‌ರವರು ಮಾತನಾಡಿ, ತಾಲ್ಲೂಕಿನಲ್ಲಿ ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಯಾರು ಇಲ್ಲ, ಬಾಂಬೆಯಿಂದ ತಾಲ್ಲೂಕಿಗೆ 7 ಜನರು ಬಂದಿದ್ದು, ಅವರನ್ನು ಆಸ್ಪತ್ರೆಯಲ್ಲಿ ಕ್ವಾರಂಟೈನ್

ಮಾಡಲಾಗಿದ್ದು, ಪರೀಕ್ಷಾ ವರದಿ ಬಂದ ಮೇಲೆ ಹೋಂ ಕ್ವಾರಂಟೈನ್ ಮಾಡಲಾಗುವುದು, ಈಗ ಹೋಂ ಕ್ವಾರಂಟೈನ್‌ನಲ್ಲಿ 25 ಜನರಿದ್ದಾರೆಂದು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ಬಾಂಬೆಯಿಂದ ಬಂದಿರುವ 7 ಜನರನ್ನು ಐಸೋಲೇಶನ್‌ನಲ್ಲಿಟ್ಟಿದ್ದು, ಪ್ರತಿ ದಿನ ಥರ್ಮಲ್ ಸ್ಕ್ಯಾನಿಂಗ್ ಹಾಗೂ ಸ್ಕ್ರಿನಿಂಗ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಂಡ್ಯ ತಹಶೀಲ್ದಾರ್‌ರವರು ಮಾತನಾಡಿ, ತಾಲ್ಲೂಕಿನಲ್ಲಿ ಹೋಂ ಕ್ವಾರಂಟೈನ್‌ನಲ್ಲಿ 57 ಜನರಿದ್ದು, ನಿನ್ನೆ ಮಹಾರಾಷ್ಟ್ರದಿಂದ ಮೂರು ಜನರು ಬಂದಿದ್ದು, ಅವರನ್ನು ಹಾಸ್ಟೆಲ್ ಕ್ವಾರಂಟೈನ್ ಮಾಡಲಾಗಿದ್ದು, ತಮಿಳುನಾಡಿನಿಂದ ಬಂದಿರುವವರನ್ನು ಹೋಂ ಕ್ವಾರಂಟೈನ್ ಮಾಡಲಾಗಿದ್ದು, ಮಹಾರಾಷ್ಟ್ರ ಬಿಟ್ಟು ಬೇರೆ ರಾಜ್ಯದಿಂದ ಬಂದಿರುವವರನ್ನು ಹೋಂ ಕ್ವಾರಂಟೈನ್ ಮಾಡಲಾಗಿದೆ ಎಂದು ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ಬಾಂಬೆಯಿಂದ ಮೂರು ಜನರು ಬಂದಿದ್ದು ಅವರನ್ನು ಆಸ್ಪತ್ರೆಯಲ್ಲಿ ಕ್ವಾರಂಟೈನ್ ಮಾಡಲಾಗಿದೆ ತಾಲ್ಲೂಕಿನಲ್ಲಿ 31 ಪಲ್ಸ್ ಆಕ್ಯೂಮೀಟರ್ ಇರುವುದಾಗಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸ್ಥಳೀಯವಾಗಿ ಸರ್ವೆ ಮಾಡಬೇಕು, ಸೋಂಕಿನ ಲಕ್ಷಣಗಳು, ಹೈ-ರಿಸ್ಕ್ ಪ್ರಕರಣಗಳು ಚಿಕಿತ್ಸೆಗೆ ಬರುವ ಮೊದಲೇ ಅಂತಹವುಗಳನ್ನು ಗುರುತಿಸಿ ಅವರಿಗೆ NCDs eg; Diabetes, Hypertensionಗೆ ಚಿಕಿತ್ಸೆ ನೀಡಿ ನಿಯಂತ್ರಿಸಲು ಕ್ರಮ ವಹಿಸಬೇಕು. ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿ, ಪಿ.ಡಿ.ಓ., ಬಿಲ್ ಕಲೆಕ್ಟರ್, ಶಿಕ್ಷಕರು ಹಾಗೂ ಇನ್ನಿತರೆ ಇಲಾಖೆಯಲ್ಲಿ ಫೀಲ್ಡ್‌ನಲ್ಲಿ ಕೆಲಸ ಮಾಡುವವರೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಸೋಂಕಿತರನ್ನು ಗುರುತಿಸಿ ಅವರಿಗೆ ಚಿಕಿತ್ಸೆಯನ್ನು ಬೇಗ ಕೊಡಿಸಿ ರೋಗವನ್ನು ನಿಯಂತ್ರಣ ದಲ್ಲಿಟ್ಟುಕೊಳ್ಳಬೇಕೆಂದು, ಈ ಬಗ್ಗೆ ಮುಂಬರುವ ದಿನಗಳಲ್ಲಿ ಎಲ್ಲರೂ ಮಾನಿಟರ್ ಮಾಡಬೇಕು. ಡಿ.ಹೆಚ್.ಓ., ಟಿ.ಹೆಚ್.ಓ.ರವರು ಈ ನಿಟ್ಟಿನಲ್ಲಿ ಹೆಚ್ಚಿನ ಆಸ್ಥೆ ವಹಿಸಿ, ಚಿಕಿತ್ಸೆ ನೀಡುವುದು ನಿಮ್ಮ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಮುಂದಿನ ಸಭೆಗಳಿಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಿರುವಂತೆ ಸಹ ತಿಳಿಸಿದರು.

ಮುಂದುವರೆದು ಮಾತನಾಡಿ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಇದುವರೆಗೆ ಎಷ್ಟು ವೆಚ್ಚವಾಗಿದೆ, ವರ್ಷವಾರು ಕಾಮಗಾರಿಗಳನ್ನು ಪೂರ್ಣ ಮಾಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ತಿಳಿಸಿ, ಮುಂದಿನ ಸಭೆಗೆ CEO, ZP, PRED Engineers ರಿಂದ ವರದಿ ಪಡೆದು ಸಲ್ಲಿಸಲು ಸೂಚಿಸಿದರು.

**ತೋಟಗಾರಿಕೆ ಇಲಾಖೆ:**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತೋಟಗಾರಿಕೆ ಇಲಾಖೆಯ ಮಾಹಿತಿ ಕೇಳಲಾಗಿ, ತೋಟಗಾರಿಕೆ ಉಪನಿರ್ದೇಶಕರು ಜಿಲ್ಲೆಯಲ್ಲಿ ಆಲಿಕಲ್ಲು ಮಳೆಗೆ ವಿವಿಧ ತಾಲ್ಲೂಕುಗಳಿಂದ 159.27ಹೆ. ಪ್ರದೇಶದಲ್ಲಿ ಅಂದಾಜು ರೂ.7.00ಕೋಟಿ ತೋಟಗಾರಿಕೆ ಬೆಳೆ ನಾಶವಾಗಿದ್ದು, ಎನ್.ಡಿ.ಆರ್.ಎಫ್. ಮಾರ್ಗಸೂಚಿಯನ್ವಯ ರೂ.22.22ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ತಹಶೀಲ್ದಾರ್‌ರವರು ಪರಿಹಾರ ಸಾಫ್ಟ್‌ವೇರ್‌ನಲ್ಲಿ ರೈತರ ವಿವರವನ್ನು ಅಳವಡಿಸುವ ಕಾರ್ಯಕ್ರಮ ಪ್ರಗತಿಯಲ್ಲಿದೆ. ಹಣ್ಣು, ತರಕಾರಿ ಮತ್ತು ಹೂವಿನ ಬೆಳೆ ನಾಶವಾಗಿದ್ದು, ಜಿಲ್ಲೆಗೆ ನಿಗದಿಯಾಗಿರುವ ರೂ.2.00ಕೋಟಿ ಅನುದಾನದಲ್ಲಿ ಪರಿಹಾರ ವಿತರಣೆ ಕಾರ್ಯವು ಪ್ರಗತಿಯಲ್ಲಿದೆ ಎಂದು ವಿವರಿಸಿದರು ಹಾಗೂ, ತೆಂಗಿನಕಾಯಿ ಸಸಿಗಳ ಅಲಭ್ಯತೆ ಬಗ್ಗೆ ಪ್ರಸ್ತಾಪಿಸಿದಾಗ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇದರ ಬಗ್ಗೆ ಕೂಡಲೇ, ತೋಟಗಾರಿಕೆ ಕಾರ್ಯದರ್ಶಿಗಳನ್ನು ಸಂಪರ್ಕಿಸಿ, ಬಗೆಹರಿಸಲು ಸೂಚಿಸಿದರು.

**ಕೃಷಿ ಇಲಾಖೆ:**

| 04 | ಮುಖ್ಯವಾಗಿ ಗಮನಿಸಿದ ಅಂಶಗಳು | ಉಡುಪಿ ಜಿಲ್ಲೆಯಲ್ಲಿನ ಅಭಿವೃದ್ಧಿ ಕಾರ್ಯಗಳ, ಮರಳು ಸಮಸ್ಯೆ ಹಾಗೂ ಕೋವಿಡ್-19ನ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿ ಸಭೆ ನಡೆಸಲಾಯಿತು. ಸದರಿ ವಿಷಯದ ಬಗ್ಗೆ ನಡೆದ ಸಭೆಯ ಸಭಾ ನಡವಳಿಯನ್ನು ಸಹ ಇದರೊಡನೆ ಲಗತ್ತಿಸಿದೆ. |

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 01.06.2020 ರಂದು ಜರುಗಿದ ಉಡುಪಿ ಕೋವಿಡ್ 19 ನ ಪ್ರಸ್ತುತ ಪರಿಸ್ಥಿತಿ ಬಗ್ಗೆ ಮರಳು ಸಮಸ್ಯೆ ಹಾಗೂ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.30 ಗಂಟೆ** **ಸ್ಥಳ: ಡಾ . ವಿ . ಎಸ್ ಆಚಾರ್ಯ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋತ್ , ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
5) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್ -19 ಸ್ಥಿತಿಗತಿಗಳ ಬಗ್ಗೆ ವಿವರ ಮತ್ತು ಈ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ ನೀಡುವಂತೆ ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರಿಗೆ ಸೂಚಿಸಿದರು. ಕೋವಿಡ್ -19 ನೋಡಲ್ ಅಧಿಕಾರಿಯವರು ಕೋವಿಡ್ -19 ವೈರಸ್ ನಿಯಂತ್ರಣದ ಬಗ್ಗೆ ಕೈಗೊಂಡ ಕ್ರಮಗಳ ಮತ್ತು ಈಗಿನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳೊಂದಿಗೆ ಬಗ್ಗೆ ಕ್ವಾರೈಂಟೈನ್ ಮಾಡಿದ ಬಗ್ಗೆ ವಿವರ , SARI Cases ,ILI , Swab test ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿದರು .

- ಈ ಬಗ್ಗೆ ಒಟ್ಟು 13,242 ಜನರನ್ನು ಕ್ವಾರಂಟೈನ್‌ಗೆ ಒಳಪಡಿಸಿರುವುದಾಗಿ , ಇವುಗಳಲ್ಲಿ yenepoya ಆಸ್ಪತ್ರೆಗೆ 3,369 ಪರೀಕ್ಷೆಗೆ ಕಳುಹಿಸಿದ್ದು, 258 ಪರೀಕ್ಷೆ ವರದಿ ಸ್ವೀಕೃತವಾಗಿರುತ್ತದೆ, ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ 3,536 ಪರೀಕ್ಷೆಗೆ ಕಳುಹಿಸಿದ್ದು, 2,270 ಪರೀಕ್ಷೆ ವರದಿ ಸ್ವೀಕೃತವಾಗಿರುತ್ತದೆ ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ವರದಿ ಬರಲು ಬಾಕಿ ಇರುವ Sample ಗಳ ವರದಿಯನ್ನು ಶೀಘ್ರವಾಗಿ ಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. ಹಾಗೂ Swab test ಗಳ ಬಗ್ಗೆ ಚರ್ಚಿಸಲಾಗಿ ಸರ್ಕಾರಿ Protocol ಪ್ರಕಾರ ಕ್ರಮಕೈಗೊಳ್ಳಲು ಸೂಚಿಸಿದರು .

  **(ಕ್ರಮ : ಜಿಲ್ಲಾ ಸರ್ವೇಕ್ಷಣಾಧಿಕಾರಿ, ಉಡುಪಿ ಜಿಲ್ಲೆ)**

- ಸರ್ಕಾರದ ಇತ್ತೀಚಿನ ಮಾರ್ಗ ಸೂಚಿಯಂತೆ ಸಾಂಸ್ಥಿಕ 07 ದಿನಗಳ ಕ್ವಾರಂಟೈನ್ ಮುಗಿಸಿದರವರಿಗೆ ಪುನ: 07 ದಿನಗಳ ಹೋಮ್ ಕ್ವಾರಂಟೈನ್ ಎಂಬುದಾಗಿ ಸಭೆಗೆ ಮಾಹಿತಿ ನೀಡಿದರು .

- ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರು ಮಾತನಾಡಿ ಜಿಲ್ಲೆಯ ಆಸ್ಪತ್ರೆಗಳಲ್ಲಿ 2500 ಹೆಚ್ಚುವರಿ ಹಾಸಿಗೆಗಳನ್ನು ಸೃಷ್ಟಿಸಲು ಸರ್ಕಾರದ ಆದೇಶವಿದ್ದು , ಈವರೆಗೆ ಜಿಲ್ಲೆಯಲ್ಲಿ 420 ಬೆಡ್ ಗಳು ಲಭ್ಯವಿರುವುದಾಗಿ ಸಭೆಗೆ ಮಾಹಿತಿ ನೀಡಿದರು 2500 ಹೆಚ್ಚುವರಿ ಹಾಸಿಗೆಗಳ ವ್ಯವಸ್ಥೆ ಕಲ್ಪಿಸುವರೇ ಆರೋಗ್ಯ ಇಲಾಖೆಗೆ ಹೆಚ್ಚುವರಿ ಮಾನವ ಸಂಪನ್ಮೂಲ ಅಗತ್ಯವಿರುವುದಾಗಿ ಸಭೆಯಲ್ಲಿ ತಿಳಿಸಿದರು . ಹಾಗೂ ಹೊಸ ಕೋವಿಡ್ ಆಸ್ಪತ್ರೆಗಳಿಗೆ ಗುತ್ತಿಗೆ ಆಧಾರದಲ್ಲಿ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗಳನ್ನು ನೇಮಕಾತಿ ಮಾಡುವರೆ ಸರ್ಕಾರದಿಂದ ಅನುಮತಿ ದೊರಕಿಸಿ ಕೊಡುವಂತೆ ಕೋರಿದರು.

- ಸರ್ಕಾರಿ ಆಸ್ಪತ್ರೆಯಲ್ಲಿ ರಚಿಸಲಾಗುವ ಲ್ಯಾಬ್ ಕಾಮಗಾರಿಯನ್ನು ಕೂಡಲೇ ಮುಕ್ತಾಯಗೊಳಿಸಿ ಲ್ಯಾಬ್ ಕಾರ್ಯಾರಂಭ ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾ ಸರ್ಜನ್ ರವರಿಗೆ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್ ಪ್ರಯೋಗಾಲಯದ ಮೂಲಸೌಕರ್ಯ ಕಾಮಗಾರಿ ಅಂತಿಮ ಹಂತದಲ್ಲಿದ್ದು, 10 ದಿನಗಳೊಳಗೆ ಪೂರ್ಣಗೊಳ್ಳಲಿದೆ. ಬಳಿಕ ಪ್ರಯೋಗಾಲಯದಲ್ಲಿ ಅಗತ್ಯ ಉಪಕರಣಗಳ ಅಳವಡಿಕೆಯಾಗಿ, ಪ್ರಯೋಗಾಲಯದಲ್ಲಿ ಗಂಟಲ ದ್ರವ ಪರೀಕ್ಷೆ ಉಡುಪಿಯಲ್ಲಿಯೇ ಆರಂಭಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

- ಕೋವಿಡ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುವ ವೈಧ್ಯರು ಮತ್ತು ಆರೋಗ್ಯ ಸಿಬ್ಬಂದಿಗಳಿಗೆ ಮೂರು ಹಂತದಲ್ಲಿ ತರಬೇತಿ ನೀಡುವ ಬಗ್ಗೆ ಕ್ರಮಕೈಗೊಳ್ಳುವಂತೆ ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರು ಮೇಲ್ವಿಚಾರಣೆ ನಡೆಸುವಂತೆ ಸೂಚಿಸಿದರು. ಸದ್ರಿ ತರಬೇತಿಯನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕರು /ಕೋವಿಡ್ ನೋಡಲ್ ಆಫೀಸರ್ ಮತ್ತು ಕೆ.ಎಂ.ಸಿ ಮತ್ತು ಟಿ.ಎಂ.ಎ ಪೈ ವೈದ್ಯರು ಸೇರಿ ನೀಡಲು ಕ್ರಮವಹಿಸುವಂತೆ ಸೂಚಿಸಿದರು. ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರು ಮಾತನಾಡಿ ತರಬೇತಿ ನೀಡುವ ವಿಚಾರದಲ್ಲಿ ಈಗಾಗಲೇ ಯೋಜನೆ ತಯಾರಿಸಲಾಗಿದ್ದು, ಅದರಂತೆ ಕ್ರಮವಹಿಸುವುದಾಗಿ ತಿಳಿಸಿದರು.

- ಟಿ.ಎಂ.ಎ ಪೈ ಆಸ್ಪತ್ರೆಯ ಡಾ.ಶಶಿಕಿರಣ್ ಇವರು ಮಾತನಾಡಿ , Patient Management, Bed & Ambulance Management ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬಹುದಾಗಿ ಸಲಹೆ ನೀಡಿದರು.

- ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸಲಾಗುವ ಉಪಕರಣಗಳ ಕಾರ್ಯಕ್ಷಮತೆ ಹಾಗೂ ಸಿಬ್ಬಂದಿಗಳ ತರಭೇತಿ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಬೇಕು. ತಾಲೂಕು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗೆ ವೆಂಟಿಲೇಟರ್ ಸೌಲಭ್ಯ ಒದಗಿಸುವುದರೊಂದಿಗೆ, ಹೆಚ್ಚುವರಿಯಾಗಿ ಖಾಸಗೀ ಆಸ್ಪತ್ರೆಗಳನ್ನು ಇದಕ್ಕಾಗಿ ಗುರುತಿಸಬೇಕು ಎಂದು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

- ಹೊರರಾಜ್ಯದಿಂದ ಬಂದವರ ಮಾಹಿತಿ ಆಯಾ ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯತ್‌ಗಳಲ್ಲಿ ಇರಬೇಕು. ಅವರ ಕ್ವಾರೆಂಟೈನ್ ಅವಧಿಯ ಮೇಲೆ ನಿಗಾ ಇಡಬೇಕು ಹಾಗೂ ಸಾಂಸ್ಥಿಕ ಕ್ವಾರಂಟೈನ್ ವ್ಯವಸ್ಥೆಯನ್ನು ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ನೋಡಿಕೊಳ್ಳಲು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

**ಇತರೆ ವಿಷಯಗಳು :**

- 2020 ರ ಮಾನ್ಸೂನ್ ಮುಂಗಾರು ಮಳೆ ಪ್ರಾರಂಭವಾಗಿದ್ದು, ಈ ಸಂಧರ್ಭದಲ್ಲಿ ಅತಿವೃಷ್ಟಿ ಮಳೆಯಿಂದ ಉಂಟಾಗಬಹುದಾದ ಪ್ರವಾಹ, ನೆರೆಹಾವಳಿ, ಬಿರುಗಾಳಿ, ಸಿಡಿಲು, ಇತ್ಯಾದಿಗಳಿಂದಾಗುವ ಸಾರ್ವಜನಿಕರಿಗೆ ಹಾಗೂ ಆಸ್ತಿಪಾಸ್ತಿಗಳಿಗೆ ಉಂಟಾಗುವ ಅನಾಹುತಗಳ ಮತ್ತು ಕೋವಿಡ್-19 ರೋಗ ಹರಡದಂತೆ ಮುಂಜಾಗ್ರತ ಕ್ರಮ ಹಾಗೂ ರಕ್ಷಣಾ ಕ್ರಮ ಗಳನ್ನು ತೆಗೆದುಕೊಳ್ಳುವ ಕುರಿತು ಈಗಾಗಲೇ ಸಂಬಂಧ ಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು. ಹಾಗೂ ಈ ಬಗ್ಗೆ ದಿನಾಂಕ:22.05.2020 ರಂದು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಗಳ ಸಭೆ ನಡೆಸಿ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಪರೀಶಿಲಿಸಲಾಗಿದೆ ಹಾಗೂ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಯವರು ತಿಳಿಸಿದರು, ಈ ಸಂದರ್ಭದಲ್ಲಿ ಸಂತ್ರಸ್ತರಿಗೆ ತುರ್ತಾಗಿ ಹಾನಿಯ ಪರಿಹಾರ ನೀಡಬೇಕಾಗಿರುತ್ತದೆ. ಇದನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಕುರಿತು ಸಂಬಂಧಪಟ್ಟ ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳು ಈ ಬಗ್ಗೆ ಸಹಕರಿಸುವುದಲ್ಲದೇ ತಮ್ಮ ಅಧೀನ ಕಛೇರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ : ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು)

- 2019ನೇ ಸಾಲಿನ ಪ್ರವಾಹ ಪರಿಹಾರ ಕಾಮಗಾರಿಗಳಲ್ಲಿ ಒಟ್ಟು 814 ಕಾಮಗಾರಿಗಳನ್ನು ನೀಡಲಾಗಿದ್ದು ಅದರಲ್ಲಿ 667 ಕಾಮಗಾರಿಗಳು ಮುಕ್ತಾಯವಾಗಿದ್ದು ಉಳಿದ 146 ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ ಎಂದು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ತಿಳಿಸಿದರು. ಸದ್ರಿ ಕಾಮಗಾರಿಗಳನ್ನು ಈ ವಾರದಲ್ಲಿ ಮುಕ್ತಾಯಗೊಳಿಸಿ ಬಿಲ್ ಪಾವತಿಗಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಉಸ್ತುವಾರಿ ಕಾರ್ಯದರ್ಶಿವರು ಸೂಚಿಸಿದರು. **(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ ವಿಭಾಗ/ ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ ಹಾನಿಯಾಗಿರುವ ಮನೆಗಳ ಪುನರ್ ನಿರ್ಮಾಣ ಹಾಗೂ ರಿಪೇರಿಯ ವರದಿಯನ್ನು ಈ ಕೆಳಕಂಡಂತೆ ತಹಶೀಲ್ದಾರರು ಸಭೆಯಲ್ಲಿ ನೀಡಿದ್ದು,

| ಕ್ರ.ಸಂ. | ಜಿಲ್ಲೆ | ಮನೆಗಳ ಮರುನಿರ್ಮಾಣ ಮಾಡುವ ಸಂಖ್ಯೆ | ತಳಪಾಯ (Foundation) | ಗೋಡೆ (Lintal) | ಛಾವಣಿ | ದುರಸ್ಥಿ ಮಾಡಲು ಬಾಕಿಇರುವ ಮನೆಗಳ ಸಂಖ್ಯೆ |
|---|---|---|---|---|---|---|
| 1 | Udupi | 10 | 4 | 3 | 1 | 2 |
| 2 | Kudapura | 21 | 12 | 3 | 0 | 6 |
| 3 | Karkal | 2 | 1 | 1 | 0 | 0 |
| 4 | Brhamvara | 14 | 2 | 6 | 3 | 3 |
| 5 | Byndoor | 7 | 6 | 1 | 0 | 0 |
| 6 | Kapu | 13 | 8 | 2 | 0 | 3 |
| 7 | Hebri | 7 | 7 | 0 | 0 | 0 |
| Total | | 74 | 40 | 16 | 4 | 14 |

ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಒಂದು ವರ್ಷ ಕಳೆಯುತ್ತ ಬಂದಿದ್ದು, ಪುನರ್ ನಿರ್ಮಾಣ ಮಾಡುವಂತಹ ಮನೆಗಳನ್ನು ಶೀಘ್ರವಾಗಿ ನಿರ್ಮಿಸಲು ಕ್ರಮವಹಿಸುವಂತೆ ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು, ಹೆಬ್ರಿ)**

- ಕೋವಿಡ್ ಹಿನ್ನೆಲೆಯಲ್ಲಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆ, ಉದ್ಯಮಿಗಳಿಗೆ ಕೇಂದ್ರ ಸರಕಾರ ಘೋಷಿಸಿರುವ ಹಣಕಾಸು ನೆರವು ಯೋಜನೆ ಜಾರಿಗೆ ಜಿಲ್ಲೆಯಲ್ಲಿ ಕೆಲವು ಖಾಸಗೀ ಬ್ಯಾಂಕುಗಳು ಸ್ಪಂದಿಸುತ್ತಿಲ್ಲ ಎಂಬ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಜಿಲ್ಲೆಯ ಬ್ಯಾಂಕುಗಳ ಜತೆ ಸಭೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಅಲ್ಲದೇ ಈ ಬಗ್ಗೆ ಪ್ರತೀ ವಾರ ಪರಿಶೀಲನೆ ನಡೆಸುವಂತೆ ಸೂಚಿಸಿದರು. **(ಕ್ರಮ : ಲೀಡ್ ಬ್ಯಾಂಕ್ ಮೇನೆಜರ್, ಉಡುಪಿ/ ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ಉಡುಪಿ )**

- ಉಡುಪಿ ತಾಲ್ಲೂಕಿನ ಶಿರೂರು ಹಾಗೂ ಬೊಮ್ಮರಬೆಟ್ಟು ಗ್ರಾಮ ವ್ಯಾಪ್ತಿಯ ಸ್ವರ್ಣ ನದಿ ಪಾತ್ರದಲ್ಲಿ ನದಿ ಹೂಳೆತ್ತುವ ನೆಪದಲ್ಲಿ ಮರಳನ್ನು ಅಕ್ರಮವಾಗಿ ತೆಗೆದು ದಾಸ್ತಾನು ಇರಿಸಿದ ಪ್ರದೇಶದ ಸ್ಥಳ ಹಾಗೂ ಎಲ್ಲಾ ದಾಖಲೆಗಳನ್ನು ಅಧಿಕಾರಿ/ಸಿಬ್ಬಂದಿಗಳೊಂದಿಗೆ ಪರಿಶೀಲನೆ ನಡೆಸಿ, ಸಂಬಂಧಿಸಿದ ಪಟ್ಟಾದಾರರನ್ನು ಪತ್ತೆಹಚ್ಚಿ ಹಾಗೂ ಹೂಳೆತ್ತುವ ಗುತ್ತಿಗೆದಾರರು ಲಾಕ್ಡೌನ್ ಸಮಯದಲ್ಲಿ ಅನಧಿಕೃತ ಹೂಳೆತ್ತುವ ಕಾಮಗಾರಿ ನಡೆಸಿದ್ದಲ್ಲಿ ಸದರಿಯವರು ಮೇಲೆ ಸಿ.ಆರ್ ಪಿ.ಸಿ (188) ಮತ್ತು ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ 2005 (Disaster Management Act) ರಡಿಯಲ್ಲಿ ಅಗತ್ಯ ಕ್ರಮಕೈಗೊಂಡು, ವರದಿ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಈ ವಿಷಯದಲ್ಲಿ ಪಟ್ಟಾ ಜಮೀನಿನಲ್ಲಿ ಮರಳು ಸಂಗ್ರಹಣೆ ಸೇರಿದಂತೆ ಲಾಕ್‌ಡೌನ್ ಅವಧಿಯಲ್ಲಿ ಅಕ್ರಮ ಮರಳುಗಾರಿಕೆ ನಡೆದಿರುವ ಬಗ್ಗೆ ಉಪವಿಭಾಗಾಧಿಕಾರಿಗಳು, ಪ್ರತೀ ಜಮೀನಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಸಮಗ್ರ ವರದಿಯನ್ನು ಜಿಲ್ಲಾಧಿಕಾರಿಯವರಿಗೆ 3 ದಿನಗಳ ಒಳಗಾಗಿ ನೀಡುವಂತೆ ನಿರ್ದೇಶಿಸಿದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ವಿವರ ನೀಡಿ, ಈಗಾಗಲೇ ಇಂತಹ ಪ್ರಕರಣಗಳ ವಿರುದ್ಧ ಕೇಸು ದಾಖಲಿಸಲಾಗಿದೆ. 5 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೇ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳುವ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೆ

ನ್ಯಾಯಾಲಯದ ಅನುಮತಿ ಪಡೆದು ಮರಳನ್ನು ಹರಾಜು ಹಾಕಲು ಕ್ರಮವಹಿಸುವುದಾಗಿ ತಿಳಿಸಿದರು. **(ಕ್ರಮ: ಸಹಾಯಕ ಕಮೀಷನರ್, ಕುಂದಾಪುರ ಉಪವಿಭಾಗ ಕುಂದಾಪುರ / ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ)**

- ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಕೋವಿಡ್-19 ಲಾಕ್ ಡೌನ್ ನಿಂದಾಗಿ ಸಂಕಷ್ಟಕ್ಕೊಳಗಾದ ಹೂವಿನ ಬೆಳೆಗಾರರಿಗೆ ಹಾಗೂ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ ಪಾವತಿಸುವ ಬಗ್ಗೆ ಮಾಹಿತಿಯನ್ನು ನೀಡುವಂತೆ ತಿಳಿಸಲಾಗಿ, ಈ ಬಗ್ಗೆ ತೋಟಗಾರಿಕೆ ಉಪನಿರ್ದೇಶಕರು ವಿವರಿಸುತ್ತಾ ಹೂವಿನ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮದಡಿ ಬೆಳೆ ಸಮೀಕ್ಷೆಯಲ್ಲಿ ಒಟ್ಟು 1319 ರೈತರು ನಮೂದಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗದೆ ಇರುವ ರೈತರ ಅರ್ಜಿಗಳನ್ನು ದಿನಾಂಕ: 28-05-2020 ರ ವರೆಗೆ ಸ್ವೀಕರಿಸಲಾಗಿದ್ದು ಒಟ್ಟು 3014 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸದರಿ ಅರ್ಜಿಗಳನ್ನು ಮಾರ್ಗಸೂಚಿ ಪ್ರಕಾರ ಹೋಬಳಿ ಮಟ್ಟದ ಸಮಿತಿಯು ಪರಿಶಿಲಿಸಬೇಕಾಗಿದ್ದು, ಪ್ರಸಕ್ತ ಪರಿಶೀಲನೆ ಚಾಲ್ತಿಯಲ್ಲಿದ್ದು, ಪರಿಹಾರಧನವನ್ನು ಪಾವತಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಈ ಬಗ್ಗೆ ಶೀಘ್ರವಾಗಿ ಪರಿಹಾರಧನವನ್ನು ಪಾವತಿಸುವಲ್ಲಿ ಕ್ರಮವಹಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಉಡುಪಿ)**

- ಹಣ್ಣು ಮತ್ತು ತರಕಾರಿ ಬೆಳೆಗಳಿಗೆ ಪರಿಹಾರ ನೀಡುವ ಬಗ್ಗೆ ದಿನಾಂಕ: 30-05-2020 ರಂದು ಮಾರ್ಗಸೂಚಿ ಬಂದಿದ್ದು, ಸದರಿ ಪರಿಹಾರವನ್ನು ಬೆಳೆ ಸಮೀಕ್ಷೆ ಆಧಾರದಲ್ಲಿ ನೀಡಲು ಕ್ರಮವಹಿಸಲಾಗುತ್ತಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗಿರುವ ರೈತರ ವಿವರವು ನಿರ್ದೇಶನಾಲಯದಿಂದ ಬಂದ ನಂತರ, ರೈತರಿಂದ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ ಜಿಲ್ಲಾ ಸಮಿತಿಯ ನಿರ್ಣಯದಂತೆ ಕ್ರಮವಹಿಸಲಾಗುವುದು ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದರು.

- ಮಳೆ ಮತ್ತು ಕೃಷಿ ಪರಿಕರಗಳ ಸರಬರಾಜಿನ ಸ್ಥಿತಿಗತಿಗಳ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ವಿವರಿಸುತ್ತಾ, ಜಿಲ್ಲೆಯಲ್ಲಿಸರಾಸರಿ 201.60 ಮಿ.ಮೀ. ವಾಡಿಕೆ ಮಳೆ ಆಗಬೇಕಾಗಿದ್ದು,ಈವರೆಗೆ 172.62ಮಿ.ಮೀ. ಮಳೆ ಆಗಿರುತ್ತದೆ. ಅದೇರೀತಿಯಾಗಿ ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ಒಟ್ಟು2780 ಕ್ವಿಂ ಬೀಜ ಬೇಡಿಕೆ ನೀಡಿದ್ದು, 2443 ಕ್ವಿಂ ಬೀಜ ಸರಬರಾಜಾಗಿದ್ದು, 2307.75 ಕ್ವಿಂ ವಿತರಣೆಯಾಗಿದೆ. ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ಯಾವುದೇ ಕೊರತೆಯಿರುವುದಿಲ್ಲ ಎಂದು ಮಾಹಿತಿ ನೀಡಿದರು.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಸಂಬಂಧಪಟ್ಟಂತೆ ಮಾಹಿತಿ ಕೇಳಲಾಗಿ ವಿವಿಧ ಇಲಾಖೆ ಹಾಗೂ ಸಂಸ್ಥೆಗಳಾದ ಕೃಷಿ ಇಲಾಖೆಯಿಂದ ರೂ. 244.50 ಲಕ್ಷ, ತೋಟಗಾರಿಕೆ ಇಲಾಖೆಯಿಂದ ರೂ. 50.00ಲಕ್ಷ, ಮೀನುಗಾರಿಕೆ ಇಲಾಖೆಯಿಂದ ರೂ. 170.00 ಲಕ್ಷ, ಕೃಷಿ ಉತ್ಪನ್ನ ಮಾರುಕಟ್ಟೆ ಸಂಸ್ಥೆಯಿಂದ ರೂ. 125.00 ಲಕ್ಷ, ಪಶುಸಂಗೋಪನೆ ಇಲಾಖೆಯಿಂದ ರೂ. 116.40 ಲಕ್ಷ, ವಲಯ ಕೃಷಿ ಮತ್ತು ತೋಗಾರಿಕಾ ಸಂಶೋಧನಾ ಕೇಂದ್ರದಿಂದ ರೂ. 260.00 ಲಕ್ಷ, ಕೃಷಿ ವಿಜ್ಞಾನ ಕೇಂದ್ರ ರೂ. 228.00ಲಕ್ಷ ಸೇರಿದಂತೆ ಒಟ್ಟು ರೂ.1193.90 ಲಕ್ಷದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕುರಿತು ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಸಭೆ ನಡೆಸಿ ಪ್ರಸ್ತಾವನೆಯ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ ಹಾಗೂ ಕೃಷಿ ಕಾಲೇಜು ಸ್ಥಾಪನೆಯ ವಿಷಯವು ಪ್ರಸ್ತಾವನೆಯಲ್ಲಿರುತ್ತದೆ ಎಂದು ಮಾಹಿತಿ ನೀಡಿದರು

.ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

16.06.2020

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ವರದಿ

| | |
|---|---|
| ಜಿಲ್ಲೆಯ ಹೆಸರು | : ಮೈಸೂರು |
| ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | : ಎನ್. ಜಯರಾಮ್, |

### I. ಕೋವಿಡ್ ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ :

7. 24 ಗಂಟೆಗಳ ಒಳಗೆ ಕೋವಿಡ್ ಪಾಸಿಟಿವ್ ವ್ಯಕ್ತಿಯ ಸಂಪರ್ಕಗಳನ್ನು ಪತ್ತೆಹಚ್ಚಲು ರಚಿಸಲಾದ ಸಂಪರ್ಕ ಟ್ರೇಸಿಂಗ್ ತಂಡಗಳು ಸಾಕಷ್ಟು ಇವೆಯೇ? – **ಹೌದು**

| ಹೌದು | ಇಲ್ಲಾ |
|---|---|

8. ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ 50 ಪದಗಳಿಗೆ ಮೀರದಂತೆ ವರದಿ.

ಅ) ಮುಂದಿನ ದಿನಗಳಲ್ಲಿ ರೋಗ ಉಲ್ಬಣಿಸಿದಲ್ಲಿ ಕಾಂಟಾಕ್ಟ್‌ಗಳನ್ನು ಪತ್ತೆ ಹಚ್ಚಲು ಪೂರಕವಾಗುವಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳಿಗೆ ಮತ್ತು ಸ್ಥಳೀಯವಾಗಿ ಲಭ್ಯವಿರುವ ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಅವರಿಗೆ ತರಬೇತಿ ನೀಡಬಹುದಾಗಿದೆ.

ಆ) ಭವಿಷ್ಯದಲ್ಲಿ ಗಣನೀಯ ಪ್ರಮಾಣದ ಪರೀಕ್ಷೆಗಳನ್ನು ಮಾಡಬೇಕಾದ ಸಂದರ್ಭ ಬಂದಲ್ಲಿ ಸ್ಥಳೀಯವಾಗಿಯೂ ಸಹ ಸ್ವಾಬ್ ಕಲೆಕ್ಟ್ ಮಾಡಲು ಮೊಬೈಲ್ ಸ್ವಾಬ್ ಕಲೆಕ್ಷನ್ ಸೆಂಟರ್‌ಗಳನ್ನು ತೆರೆಯುವ ಕುರಿತು ಪರಿಶೀಲಿಸಬಹುದಾಗಿದೆ.

9. ಪ್ರತಿ ಕೋವಿಡ್–19 ಸಕಾರಾತ್ಮಕ ಪ್ರಕರಣದ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ ಸಂಖ್ಯೆ :

| | | |
|---|---|---|
| ಪ್ರಾಥಮಿಕ (ಹೆಚ್ಚಿನ ಅಪಾಯ) ಸಂಪರ್ಕ | : | 813 |
| ದ್ವಿತೀಯ (ಕಡಿಮೆ ಅಪಾಯ) ಸಂಪರ್ಕ | : | 2298 |

10. ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಮಾಡಿದೆಯೇ?
– **ಹೌದು**

| ಹೌದು | ಇಲ್ಲಾ |
|---|---|

11. <u>ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (50 ಪದಗಳಿಗಿಂತ ಮೀರದಂತೆ ವರದಿ)</u>

ಸಂಪರ್ಕಗಳನ್ನು ಪತ್ತೆ ಹಚ್ಚಿ ಕ್ವಾರಂಟೈನ್ ಮಾಡುವುದು, ಪರೀಕ್ಷೆಗೊಳಪಡಿಸುವುದು ಮತ್ತಷ್ಟು ರೋಗ ಹರಡದಂತೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಪರಿಣಾಕಾರಿಯಾಗಿ ಮಾಡಲಾಗಿದೆ.

12. <u>ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?</u> – **ಹೌದು**

| ಹೌದು | ಇಲ್ಲಾ |
|---|---|

<u>ಯಾವುದೇ ಸಲಹೆಗಳಿದ್ದಲ್ಲಿ</u>

- ಹೋಟೆಲುಗಳು, ವಸತಿ ಶಾಲೆಗಳು ಹಗೂ ಕೆಲವು ಆಸ್ಪತ್ರೆಗಳನ್ನು ಕ್ವಾರಂಟೈನ್ ಸೆಂಟರುಗಳಾಗಿ ಗುರುತಿಸಲಾಗಿದೆ.
- ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 15 Quarantine ಗಳಿದ್ದು ಅದಕ್ಕನುಗುಣವಾಗಿ ಬಫರ್ ವಲಯಗಳು ರೂಪಗೊಳ್ಳುತ್ತವೆ. ಈ ವಲಯವು ತಂಡಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಇದರಲ್ಲಿ ಗ್ರೂಪ್ ಎ ಮತ್ತು ಬಿ ಅಧಿಕಾರಿಗಳ ಪ್ರಾಸಂಗಿಕ ಕಮಾಂಡರ್‌ಗಳನ್ನು ಒಳಗೊಂಡಿದೆ.
- ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಕಾರ್ಯಕ್ರಮ ಅಧಿಕಾರಿ, ತಾಲ್ಲೂಕು ಆರೋಗ್ಯಾಧಿಕಾರಿ ಮತ್ತು ಮಹಾನಗರ ಪಾಲಿಕೆಯ ವೈದ್ಯಕೀಯ ಅಧಿಕಾರಿ ತಮ್ಮ ಆರೋಗ್ಯ ಸಹಾಯಕರು ಮತ್ತು ಆರೋಗ್ಯ ತನಿಖಾಧಿಕಾರಿಗಳೊಂದಿಗೆ ಕ್ವಾರಂಟೈನ್ ಸೌಲಭ್ಯ ಮೇಲ್ವಿಚಾರಣೆ ಮಾಡುವುದು.

13. <u>ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?</u> – **ಹೌದು**

| ಹೌದು | ಇಲ್ಲಾ |
|---|---|

<u>II. ಕಂಟೈನ್ಮೆಂಟ್ ಮತ್ತು ಬಫರ್ ವಲಯಗಳು :</u>

5. ಎಲ್ಲಾ ಕಂಟೈನ್ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು, ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಿದ್ದೀರಾ? – **ಹೌದು**

| ಹೌದು | ಇಲ್ಲಾ |
|---|---|

**ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿ** : 15 ಕಂಟೈನ್‌ಮೆಂಟ್ ಹಾಗೂ ಅದಕ್ಕನುಗುಣವಾಗಿ ಬಫರ್ ವಲಯಗಳನ್ನು ರೂಪುಗೊಂಡಿವೆ. ಈ ವಲಯಗಳನ್ನು ತಂಡವು ಮೇಲ್ವಿಚಾರಣೆ ಮಾಡುತ್ತದೆ ಇದರಲ್ಲಿ ಗ್ರೂಪ್ ಎ ಮತ್ತು ಬಿ ವೃಂದದ ಅಧಿಕಾರಿಗಳ ಪ್ರಾಸಂಗಿಕ ಕಮಾಂಡರುಗಳನ್ನು ಒಳಗೊಂಡಿದೆ.

**ಮೈಸೂರು ಪಟ್ಟಣ ಅಭಿವೃದ್ಧಿ ಪ್ರಾಧಿಕಾರ** : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 15 ಕಂಟೈನಮೆಂಟ್ ಝೋನ್ ವಲಯಗಳನ್ನು ರಚಿಸಲಾಗಿದೆ. ಹಾಗೂ ಬಫರ್ ವಲಯಗಳ ಮೇಲ್ವಿಚಾರಣೆ ಮಾಡಲು ತಂಡಗಳನ್ನು ರಚಿಸಲಾಗಿದೆ.

**ನಂಜನಗೂಡು ತಾಲ್ಲೂಕು** : ಈ ತಾಲ್ಲೂಕಿನಲ್ಲಿ ಒಟ್ಟು 28 Containment ವಲಯಗಳನ್ನು ರಚಿಸಲಾಗಿದೆ ಮತ್ತು ಇಲ್ಲಿಯೂ ಸಹ ಕಂಟೈನ್‌ಮೆಂಟ್ ವಲಯ ಹಾಗೂ ಬಫರ್ ವಲಯಗಳ ಮೇಲ್ವಿಚಾರಣೆ ಮಾಡಲು ತಂಡಗಳನ್ನು ರಚಿಸಲಾಗಿದೆ.

**ಮೈಸೂರು ತಾಲ್ಲೂಕು ಹಾಗೂ ಟಿ. ನರಸೀಪುರ ತಾಲ್ಲೂಕು** : ಈ ಎರಡು ವಲಯಗಳನ್ನು ಅಂದರೆ ಪ್ರತಿ ತಾಲ್ಲೂಕಿನಲ್ಲಿ ಒಂದರಂತೆ ಬಫರ್ ವಲಯಗಳನ್ನು ರಚಿಸಲಾಗಿದೆ. ಇಲ್ಲಿಯೂ ಸಹ ತಂಡಗಳನ್ನು ರಚಿಸಲಾಗಿದ್ದು ದಿನದ 24 ಘಂಟೆ ಕಾರ್ಯ ನಿರ್ವಹಿಸುತ್ತಿವೆ.

6. ನೀವು ಎಲ್ಲಾ ಕಟ್ಟೈನ್ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲಸವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದೀರಾ? – **ಹೌದು**

| ಹೌದು | ಇಲ್ಲಾ |
|---|---|

**ಭೇಟಿ ನೀಡಿದ ನಿಯಂತ್ರಣ ವಲಯದ ವಿವರಗಳು:**

7. ಕಂಟೈನ್‌ಮೆಂಟ್ ವಲಯ ಮತ್ತು ಬಫರ್ ವಲಯಕ್ಕೆ Incident ಕಮಾಂಡರ್ / ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ? – **ಹೌದು**

| ಹೌದು | ಇಲ್ಲಾ |
|---|---|

8. ಕಂಟೈನ್‌ಮೆಂಟ್ ವಲಯಗಳಲ್ಲಿ ಮತ್ತು ಬಫರ್ ವಲಯಗಳಲ್ಲಿ ILIs / SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ? – **ಹೌದು**

| ಹೌದು | ಇಲ್ಲಾ |
|---|---|

ಕಂಟೈನ್‌ಮೆಂಟ್ ವಲಯಗಳಲ್ಲಿನ ಕುಟುಂಬಗಳಿಗೆ ದಿನ ನಿತ್ಯ ಅಗತ್ಯ ವಸ್ತುಗಳನ್ನು ಅವರ ಮನೆ ಬಾಗಿಲುಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

**III. ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು :**

4. ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಗಳಲ್ಲಿ ಬಾಕಿ ಉಳಿದಿದೆಯೇ? – **ಇಲ್ಲಾ**

5. ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು / ಆರೋಗ್ಯ ಸಿಬ್ಬಂದಿಗೆ ಹೈಡ್ರಾಕ್ಸಿ ಕ್ಲೋರೊಕ್ವಿನ್ ಸಲ್ಫೇಟ್ (ಎಚ್‌ಸಿಕ್ಯೂ) ನೀಡಲಾಗಿದೆಯೇ? – **ಹೌದು**

| ಹೌದು | ಇಲ್ಲಾ |
|---|---|

6. ನೀವು ಮೀಸಲಿರಿಸಿದ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ? – **ಹೌದು**

| ಹೌದು | ಇಲ್ಲಾ |
|---|---|

**ಒಟ್ಟಾರೆ ವೀಕ್ಷಿಸಿದ ಅಂಶಗಳು :**

- ಮೈಸೂರು ಜಿಲ್ಲೆಗೆ ಹೊರಗಿನಿಂದ ವಲಸೆ ಬರುವ ಹಾಗೂ ಹೊರ ಹೋಗುವ ಕೂಲಿ ಕಾರ್ಮಿಕರು ಹಾಗೂ ಇತರರಿಗೆ ಜಿಲ್ಲಾಡಳಿತವು ಕ್ವಾರಂಟೈನ್ ಗೊಳಪಡಿಸಿ ಸೂಕ್ತ ನಿಗಾವಹಿಸಿದೆ.
- **ILI / SARI ಪ್ರಕರಣಗಳನ್ನು ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಿಸಲಾಗುತ್ತಿದ್ದು ಇದು ಕೋವಿಡ್ ಸೋಂಕಿತವಲ್ಲದ ಕೇಂದ್ರವಾಗಿರುತ್ತದೆ. ಕೇವಲ ಸೋಂಕು ದೃಢೀಕರಣವಾದ ನಂತರ ಜಿಲ್ಲಾಸ್ಪತ್ರೆಗೆ ವರ್ಗಾಯಿಸಲಾಗುತ್ತಿದೆ.**
- **ಶಂಕಿತರು ಮತ್ತು ದೃಢೀಕೃತ ಸೋಂಕಿತರನ್ನು ಸ್ಥಳಾಂತರಿಸುವ ಸಮಯದಲ್ಲಿ ಎಸ್.ಒ.ಪಿ. ಮುಂಜಾಗ್ರತೆಯನ್ನು ಅನುಸರಿಸಲಾಗುತ್ತಿದೆ.**
- **ಆರೋಗ್ಯ ರಕ್ಷಣೆ ನೀಡುವವರು ಕರ್ತವ್ಯದಲ್ಲಿ ಇರುವವರಿಗೆ ಕರ್ತವ್ಯದಿಂದ ರೆಗ್ಯೂಲರ್ ಇಂಟರ್‌ವಲ್ ಬ್ರೇಕ್ ನೊಂದಿಗೆ ಪಿ.ಪಿ.ಇ. ನೀಡಲಾಗುತ್ತಿದೆ.**

9. ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟೆಂಜೆನ್ಸಿ ಯೋಜನೆಯನ್ನು ಸಿದ್ದಪಡಿಸಲಾಗಿದೆಯೇ? – **ಹೌದು**

| ಹೌದು | ಇಲ್ಲಾ |
|---|---|

5.(ಎ) ಕಂಟಿಂಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ? – **ಹೌದು**

| ಹೌದು | ಇಲ್ಲಾ |
|---|---|

5.(ಬಿ) ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ? – **ಹೌದು**

| ಹೌದು | ಇಲ್ಲಾ |
|---|---|

ದಿನಾಂಕ : 16–06–2020

ಎನ್. ಜಯರಾಮ್, ಭಾಆಸೇ.
ವ್ಯವಸ್ಥಾಪಕ ನಿರ್ದೇಶಕರು, ಕೃಭಾಕನಿನಿ ಹಾಗೂ
ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

CNo-14294-35/2020/ACS-WR)
16/06/2020.

Note on Tumkur District, related to COVID-19 as on 06.06.2020.

01. **Review status of Surveillance activities in the District - SARI and ILI and their monitoring protocols.**

   a. Total No of SARI Cases : 289
   b. Total No of ILI Cases : 3182

02. **Formation of Committees as per the instructions issued by Revenue (DM)**

As per direction issued by GOK vide Circular NO:ಕಂಇ 83 ಟಿಎನ್ಆರ್ 2020, Dated:04.04.2020 Committees has been constituted and committees are working as per the GOK Circular. (Copy Attached)

03. **Has the Contingency/District level Crisis Management plan been prepared for the District.**

Contingency/District level Crisis Management plan has been prepared. (Plan attached)

04. **Have the formats for review been filled in by the district:** Yes

05. **Status of Supplies-Medicines, Medical Materials.**

The details of Medicines, Medical Materials Available as fallows

   a. PPE's - 770
   b. N-95 Mask –10093
   c. Triple Layer Mask – 0
   d. Sanitizers 500 ml – 323
   e. Sanitizers 5000 ml – 986
   f. Viral Transport media 1X25 - 207

06. **Has the HR plan been prepared as per the Contingency/District level Crisis Management plan:** Yes.(Plan attached)

07. **Containment plan for affected areas for the District.**

   a. On 30th of May containment area for Tumkur Town-Ward No-08 has been de notified Since 28 days has been completed from the date of Patient No. P-535(Deceased) & P-553 and not further patients has been tested positive in the same containment zone.
   b. On 31st of May P-2922 positive case in Tumkur Town, as soon as positive diagnosed, the area where the P-2922 house located from his house 100 mt's boundary was fixed entire containment zone was cordoned to barricades only one entry and one exit point was planned. People movements are restricted in containment area.

a. Proper arrangements are made to provide daily necessaries those who are in containment zone.
b. Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.
c. As total 19 patients who came from Other States tested positive and all of they were Quarantined in Govt Hostel from the day of their arrival. Hence no need of notifying containment zone.(Patient No:- P-792, P-793, P-794, P-1401, P-1402, P-1403, P-1404, P-1611, P-1612, P-1613, P-1614, P-1615, P-1623, P-1970, P-2343, P-2771, P-2772, P-3732 & P-3733)

08. **Availability of Money under SDRF and Health.**

Availability of Money Under SDRF – 167.50 Lakhs (Uncommitted Amount)
Availability of Money Under Health – 0

09. **Protection of frontline staff**

a. Health – PPE and N95 masks has been distributed to Frontline Health workers and direction has been given to Health workers regarding use of PPE Equipment.
b. Municipalities – Masks given to municipality workers and instructions given to all workers.
c. Police – Instructions has been given to police officials to wear mask.

10. **Migrant Labour and Homeless:**

As per the direction given by the Govt all the migrant labuors sheltered in Govt relief camp were sent to their natives.

11. **Essential commodities - APMC/Cocoon Markets/Groceries/Retail Shops/ Agriculture operations.**

All are functioning normal after unlock.

12. **Periodical updating of Data to State/Monitoring tool.**

Nodal Officer has been appointed for updating information to State/Monitoring tool and its being updated regularly.

13. **Establishment of Lab:**

Lab has been established in district Hospital, Tumkur and it has been started working from 29th of May. Process of sample test has been started.

RAKESH SINGH, I.A.S.
Additional Chief Secretary to Govt.,
Water Resources Department

CNo-142935/2020/ACS-WRD
16/06/2020.

Note on Tumkur District, related to COVID-19 as on 16.06.2020.

**01. Review status of Surveillance activities in the District - SARI and ILI and their monitoring protocols.**

a. Total No of SARI Cases : 289
b. Total No of ILI Cases : 3182

**02. Formation of Committees as per the instructions issued by Revenue (DM)**

As per direction issued by GOK vide Circular NO:ಕಂಇ 83 ಟಿಎನ್‌ಆರ್ 2020, Dated:04.04.2020 Committees has been constituted and committees are working as per the GOK Circular. (Copy Attached)

**03. Has the Contingency/District level Crisis Management plan been prepared for the District.**

Contingency/District level Crisis Management plan has been prepared. (Plan attached)

**04. Have the formats for review been filled in by the district:** Yes

**05. Status of Supplies-Medicines, Medical Materials.**

The details of Medicines, Medical Materials Available as fallows

a. PPE's - 1370
b. N-95 Mask –8023
c. Triple Layer Mask – 4660
d. Sanitizers 500 ml – 285
e. Sanitizers 5000 ml – 740
f. Viral Transport media 1X25 - 155

**06. Has the HR plan been prepared as per the Contingency/District level Crisis Management plan:** Yes.(Plan attached)

**07. Containment plan for affected areas for the District.**

a. On 06th of June containment area for Sira Town has been de notified Since 28 days has been completed from the date of Patient No. P-764 and not further patients has been tested positive in the same containment zone.
b. On 10th of June, P-5813 positive case in Sira Town, & on 13.06.2020 P-6400, P-6401, P-6402, P-6403, P-6404 & P-6405 positive cases in Sira Town(All these cases are primary contact of P-5813) as soon as positive diagnosed, the area where the Patients house located from his

house 100 mt's boundary was fixed entire containment zone was cordoned to barricades only one entry and one exit point was planned. People movements are restricted in containment area.

c. On 13th of June, P-6399 positive case in Koppachariroppa Village (Madhugiri Taluk) as soon as positive diagnosed, the area where the Patients house located from his house 100 mt's boundary was fixed entire containment zone was cordoned to barricades only one entry and one exit point was planned. People movements are restricted in containment area.

a. Proper arrangements are made to provide daily necessaries those who are in containment zone.

b. Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

c. Till date As total 21 patients who came from Other States tested positive and all of they were Quarantined in Govt Hostel from the day of their arrival. Hence no need of notifying containment zone.(Patient No:- P-792, P-793, P-794, P-1401, P-1402, P-1403, P-1404, P-1611, P-1612, P-1613, P-1614, P-1615, P-1623, P-1970, P-2343, P-2771, P-2772, P-3732, P-3733, P-4076 & P-4860)

## 08. Availability of Money under SDRF and Health.

Availability of Money Under SDRF – 167.50 Lakhs (Uncommitted Amount)

Availability of Money Under Health – 0

## 09. Protection of frontline staff

a. Health – PPE and N95 masks has been distributed to Frontline Health workers and direction has been given to Health workers regarding use of PPE Equipment.

b. Municipalities – Masks given to municipality workers and instructions given to all workers.

c. Police – Instructions has been given to police officials to wear mask.

## 10. Migrant Labour and Homeless:

As per the direction given by the Govt all the migrant labuors sheltered in Govt relief camp were sent to their natives.

## 11. Essential commodities - APMC/Cocoon Markets/Groceries/Retail Shops/ Agriculture operations.

All are functioning normal after unlock.

**12. Periodical updating of Data to State/Monitoring tool.**

Nodal Officer has been appointed for updating information to State/Monitoring tool and its being updated regularly.

**13. Establishment of Lab:**

Lab has been established in district Hospital, Tumkur and it has been started working from 29th of May, Process of sample testing is going on.

14. Attended Dist. Minister's meeting with the [illegible] of [illegible] w.r.t. [illegible].

[signature] 16/06.

RAKESH SINGH, I.A.S.
Additional Chief Secretary to Govt.,
Water Resources Department

<u>ದಿನಾಂಕ: **11-06-2020** ರಂದು ಬೆಳಿಗ್ಗೆ **11-00** ಗಂಟೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ.. ರವರ ಅಧ್ಯಕ್ಷತೆಯಲ್ಲಿ ಕೋವಿಡ್-**19** ಸಂಬಂಧ ಇದುವರೆಗೂ ಆಗಿರುವ ಪ್ರಗತಿಯ ಪರಿಶೀಲನೆಯ ಬಗ್ಗೆ ಜರುಗಿದ ಸಭಾ ನಡವಳಿ.</u>

ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

- ಬೆಂಗಳೂರು ನಗರದಲ್ಲಿ ಒಟ್ಟು ಕೋವಿಡ್ ಸೋಂಕಿತರು 564 ಇದ್ದು, ಇದರಲ್ಲಿ 298 ಜನರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ಇನ್ನುಳಿದ 252 ಜನರು ಆಸ್ಪತ್ರೆಯಲ್ಲಿ ನಿಗಾದಲ್ಲಿದ್ದು, ಒಟ್ಟು 13 ಜನ ಇದುವರೆಗೂ ಮರಣ ಹೊಂದಿರುವುದಾಗಿಯೂ, ಒಂದು ಅಸ್ವಾಭಾವಿಕ ಮರಣ ಸಂಭವಿಸಿರುವುದಾಗಿ ಸಭೆಗೆ ಮಾಹಿತಿಯನ್ನು ನೀಡಲಾಯಿತು.
- ಐಸಿಎಂಆರ್ ಪೋರ್ಟ್‌ಲ್‌ನಲ್ಲಿನ ಮಾಹಿತಿಯೊಂದಿಗೆ ಪಾಸಿಟಿವ್ ಎಂದು ದೃಢಪಡಿಸಿದ ಲ್ಯಾಬ್ ವರದಿಯನ್ನು ನೀಡಿದ ವ್ಯಕ್ತಿಗಳನ್ನು ಮಾತ್ರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸುತ್ತಿರುವ ಬಗ್ಗೆ ಶ್ರೀ ಲೋಕೇಶ್, ವಿಶೇಷ ಆಯುಕ್ತರು ಸಭೆಯ ಗಮನಕ್ಕೆ ತಂದರು.
- ಈ ಬಗ್ಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್-19 ರ ಕರ್ತವ್ಯಕ್ಕೆ ನಿಯೋಜಿಸಿರುವ ಸಂಬಂಧಪಟ್ಟ ನೊಡೆಲ್ ಅಧಿಕಾರಿಯವರಾದ ಡಾ: ಸ್ಮಿತಾ ಇವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಲಾಯಿತು. ಐಸಿಎಂಆರ್ ಪೋರ್ಟ್‌ಲ್‌ನಲ್ಲಿ ರೋಗಿಯ ಮಾಹಿತಿ ಇದ್ದು, ಅಂತಹ ವ್ಯಕ್ತಿಗಳ ಬಗ್ಗೆ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿಗಳು/ಜಿಲ್ಲಾ ಆರೋಗ್ಯಾಧಿಕಾರಿಗಳು ದೃಢಪಡಿಸಿ ಕಳುಹಿಸಿದಲ್ಲಿ ಅಂತಹ ರೋಗಿಗಳ ವಿವರಗಳನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲೂ ಸಹ ಐಸಿಎಂಆರ್ ಪೋರ್ಟ್‌ಲ್‌ನಲ್ಲಿ ಪರಿಶೀಲಿಸಿ ದಾಖಲಿಸಿಕೊಳ್ಳಬೇಕೆಂದು, ಲ್ಯಾಬ್ ವರದಿಯನ್ನೇ ಮಾನದಂಡವನ್ನಾಗಿ ಮಾಡಿಕೊಳ್ಳಬಾರದೆಂದು ಸೂಚನೆ ನೀಡಿರುವುದಾಗಿ ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಗಮನಕ್ಕೆ ತಂದರು.
- ಪ್ರತಿ ದಿನ ಸರ್ಕಾರವು ಬಿಡುಗಡೆ ಮಾಡುವ ಬುಲೆಟಿನ್‌ಗೂ ಮುಖ್ಯ ಆರೋಗ್ಯಾಧಿಕಾರಿಗಳಲ್ಲಿ ಇರುವ ಮಾಹಿತಿಯು ಕೆಲವೊಮ್ಮೆ ವ್ಯತ್ಯಾಸವಿದ್ದು, ಐಸಿಎಂಆರ್ ಪೋರ್ಟ್‌ಲ್‌ನಲ್ಲಿ ಕೆಲವೊಮ್ಮೆ ಕೆಲವು ರೋಗಿಗಳ ಫೋನ್ ಮಾಹಿತಿ ಇಲ್ಲದೆ ಇದ್ದು, ಇಂತಹ ಮಾಹಿತಿಯನ್ನು ಯಾವ ರೀತಿಯಲ್ಲಿ ಕಂಡು ಹಿಡಿದು ಬುಲೆಟಿನ್‌ಗೆ ಹೊಂದಿಕೆಯಾಗುವಂತೆ ಮಾಡಬಹುದೆಂಬುದರ ಬಗ್ಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಶೇಷ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿಗಳು ಹಾಗೂ ಬಿಬಿಎಂಪಿ ವ್ಯಾಪ್ತಿಯನ್ನು ಹೊರತು ಪಡಿಸಿದ ನಗರ ಪ್ರದೇಶಗಳ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
- ಇದುವರೆಗೂ 1231 ಪ್ರೈಮರಿ ಕಾಂಟ್ಯಾಕ್ಟ್‌ಗಳಿದ್ದು, ಇದರಲ್ಲಿ 509 ಜನರನ್ನು ಹೋಟೆಲ್‌ಗಳಲ್ಲಿ ಸಾಂಸ್ಥಿಕ (ಇನ್ಸ್ಟಿಟ್ಯೂಷನಲ್) ಕ್ವಾರಂಟೈನ್ ಮಾಡಲಾಗಿದ್ದು, ಪ್ರಸ್ತುತ 744 ಸೆಕೆಂಡರಿ ಕಾಂಟ್ಯಾಕ್ಟ್‌ಗಳಿದ್ದು, ಇದರಲ್ಲಿ 730 ಜನರನ್ನು ಹೋಟೆಲ್‌ಗಳಲ್ಲಿ ಸಾಂಸ್ಥಿಕ (ಇನ್ಸ್ಟಿಟ್ಯೂಷನಲ್) ಕ್ವಾರಂಟೈನ್‌ನಲ್ಲಿಯೂ, 14 ಜನರನ್ನು ಹೋಂ ಕ್ವಾರಂಟೈನ್ ಮಾಡಿರುವುದಾಗಿಯೂ ಸಭೆಯ ಗಮನಕ್ಕೆ ತರಲಾಯಿತು.

- ಸೆಕೆಂಡರಿ ಕಾಂಟ್ಯಾಕ್ಟ್‌ಗಳಲ್ಲಿ ಹೋಂ ಕ್ವಾರಂಟೈನ್ ಆಗಿರುವವರ ಮನೆಗಳಿಗೆ ಹೋಂ ಕ್ವಾರಂಟೈನ್ ಪೋಸ್ಟರ್ ಅಂಟಿಸುವ ಹಾಗೂ ಆ ವ್ಯಕ್ತಿಗಳ ಆರೋಗ್ಯ ತಪಾಸಣೆಯನ್ನು ಆಗಾಗ ಮಾಡುವಂತೆಯೂ, ಅವರ ಆರೋಗ್ಯದ ಬಗ್ಗೆ ದೂರವಾಣಿ ಮುಖಾಂತರ ವಿಚಾರಿಸುವಂತೆಯೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಇತ್ತೀಚಿನ ಒಂದು ವಾರದಲ್ಲಿ ಅಂದರೆ ದಿನಾಂಕ:04-06-2020 ರಿಂದ 10-06-2020 ಬಂದಿರುವ ಹೊಸ ಪಾಸಿಟಿವ್ ಕೇಸ್‌ಗಳ ಕುರಿತು ಈ ಕೆಳಕಂಡ ನಮೂನೆಯಂತೆ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸೂಚಿಸಲಾಯಿತು.

| ರೋಗಿಗಳ ನಂಬರ್ | ಈ ರೋಗಿಗಳ ಪ್ರೈಮರಿ ಸಂಪರ್ಕಿತರ ವಿವರ | ಈ ರೋಗಿಗಳ ಸೆಕೆಂಡರಿ ಸಂಪರ್ಕಿತರ ವಿವರ |
|---|---|---|

- ಪ್ರೈಮರಿ ಹಾಗೂ ಸೆಕೆಂಟರಿ ಸಂಪರ್ಕಿತರು ಸಧ್ಯಕ್ಕೆ ಕಡಿಮೆ ಜನರಿದ್ದು, ಸಿಡಿಆರ್ ಮಾಹಿತಿಯ ಆಧಾರದ ಮೇಲೆ ಕಾಂಟ್ಯಾಕ್ಟ್ ಟ್ರೇಸಿಂಗ್ ಪತ್ತೆ ಹಚ್ಚುವ ಕೆಲಸದ ಬಗ್ಗೆ ಮುಖ್ಯ ಆರೋಗ್ಯಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳು ಹೆಚ್ಚು ಗಮನ ಹರಿಸಬೇಕೆಂದು ಸೂಚಿಸಲಾಯಿತು.
- ಬೆಂಗಳೂರು ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳನ್ನು ತೆರೆಯುವಂತೆ ಈಗಾಗಲೇ ಜಿಲ್ಲಾಆರೋಗ್ಯಾಧಿಕಾರಿಗಳು ಮೇಲಿಂದ ಮೇಲೆ ಇಮೇಲ್ ಮೂಲಕ ಸಂದೇಶಗಳನ್ನು ರವಾನಿಸಿದ್ದು, ಇದುವರೆಗೂ ಪ್ರಸ್ತುತ ಸುಮಾರು 2031 ಖಾಸಗಿ ಆಸ್ಪತ್ರೆಗಳನ್ನು ತೆರೆದಿರುವುದಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಖಾಸಗಿ ಆಸ್ಪತ್ರೆಗಳನ್ನು ತೆರೆಯದೆ ಇರುವ ಬಗ್ಗೆ 50 ಆಸ್ಪತ್ರೆಗಳಿಗೆ ನೋಟೀಸ್‌ಗಳನ್ನು ಸಿದ್ಧಪಡಿಸಿದ್ದು, ಇನ್ನುಳಿದ ಖಾಸಗಿ ಆಸ್ಪತ್ರೆಗಳಿಗೆ ನೋಟೀಸ್‌ಗಳನ್ನು ನೀಡಲು ಕ್ರಮ ವಹಿಸುತ್ತಿರುವುದಾಗಿಯೂ, ಈಗಾಗಲೇ 17 ಜನರಿಗೆ ನೋಟೀಸ್ ನೀಡಿದ್ದು, ಇದರಲ್ಲಿ 13 ಖಾಸಗಿ ಆಸ್ಪತ್ರೆಗಳು ಶೀಘ್ರದಲ್ಲಿ ತೆರೆಯುವುದಾಗಿ ಪತ್ರವನ್ನು ನೀಡಿದ್ದು, ಉಳಿದ ನಾಲ್ಕು ಖಾಸಗಿ ಆಸ್ಪತ್ರೆಗಳ ಕುರಿತು ಕ್ರಮವಹಿಸುವ ಬಗ್ಗೆ ಸಭೆಯ ಸಲಹೆಯನ್ನು ಕೋರಲಾಯಿತು.
- ಖಾಸಗಿ ಆಸ್ಪತ್ರೆಯವರ ಜೊತೆ ಮತ್ತೊಂದು ಸಭೆಯನ್ನು ನಡೆಸಿ, ಕೂಡಲೇ ಎಲ್ಲಾ ಆಸ್ಪತ್ರೆಗಳನ್ನು ತೆರೆಯುವಂತೆ ಸೂಚಿಸಬೇಕೆಂದೂ, ಇಲ್ಲದಿದ್ದ ಪಕ್ಷದಲ್ಲಿ ಜಿಲ್ಲಾಧಿಕಾರಿಗಳು ನೋಟೀಸ್‌ಗಳನ್ನು ನೀಡಬೇಕೆಂದು, ಆಗಲೂ ಸಹ ಅವರು ಸ್ಪಂದಿಸದೆ ಇದ್ದಲ್ಲಿ ಅವರ ಆಸ್ಪತ್ರೆಯ ಶೆಲ್ಟರ್‌ಗಳ ಮೇಲೆ, ಗೋಡೆಗಳ ಮೇಲೆ ಸಾರ್ವಜನಿಕರು ಈ ಆಸ್ಪತ್ರೆಗಳಿಗೆ ಹೋಗದಂತೆ " ಆಸ್ಪತ್ರೆ ತೆರೆಯುವುದನ್ನು ನಿಷೇಧಿಸಿದೆ" ಎಂಬ ಬರಹವನ್ನು ಎದ್ದುಕಾಣಿಸುವಂತಹ ಪೋಸ್ಟರ್‌ಗಳನ್ನು ಅಂಟಿಸುವಂತೆಯೂ ಹಾಗೂ ಈಗಾಗಲೇ ನೋಟೀಸ್ ನೀಡಿದ ನಂತರವು ಆಸ್ಪತ್ರೆಯನ್ನು ತೆರೆಯದೆ ಇರುವ 4 ಆಸ್ಪತ್ರೆಗಳಿಗೆ ಜಿಲ್ಲಾಧಿಕಾರಿಗಳು ಸ್ಪೀಕಿಂಗ್ ಆರ್ಡರ್ ನೀಡುವಂತೆಯೂ, ಈ ಬಗ್ಗೆ ಇಂದೇ ಸುದ್ದಿ ಮಾಧ್ಯಮಕ್ಕೆ ಮಾಹಿತಿಯನ್ನು ನೀಡಿ, ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಮುಂದುವರೆದು ಆಸ್ಪತ್ರೆಯನ್ನು ತೆರೆಯದೆ ಇದ್ದ ಪಕ್ಷದಲ್ಲಿ ಕೆ.ಪಿ.ಎಂ.ಇ. ಕಾಯಿದೆಯಡಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

- ಈಗಿರುವ 198 ವಾರ್ಡ್‌ಗಳಲ್ಲಿ ಪ್ರತಿ ವಾರ್ಡ್‌ಗೆ ಒಂದು ಕ್ಲಿನಿಕ್ ತೆರೆದು, ವಾರ್ಡ್‌ಗೆ ಒಬ್ಬರಂತೆ ಟೆಕ್ನಿಷಿಯನ್‌ನ್ನು ನಿಯೋಜಿಸಿಕೊಂಡು, ಪ್ರತಿ ಸೆಂಟರ್‌ನಲ್ಲೂ ಆಯಾ ವಾರ್ಡ್‌ನಲ್ಲಿ ಉಚಿತವಾಗಿ ಸ್ವಾಬ್ ಸಂಗ್ರಹವನ್ನು ಮಾಡುವ ಕುರಿತು ಕ್ರಮ ವಹಿಸಬೇಕೆಂದು ಸೂಚಿಸಲಾಯಿತು.
- ಮಾನ್ಯ ಮುಖ್ಯ ಕಾರ್ಯದರ್ಶಿಗಳು ದಿನಾಂಕ: 04/06/2020 ರಂದು ನಡೆಸಿದ ವಿಡೀಯೋ ಸಂವಾದದಲ್ಲಿ ಪ್ರತಿ ವಾರ್ಡ್‌ನಲ್ಲಿ ಒಂದೊಂದು ಸ್ವಾಬ್ ಸಂಗ್ರಹ ಕ್ಲಿನಿಕ್ ತೆರೆಯಲು ಸೂಚಿಸಿದ್ದು, ಈ ಬಗ್ಗೆ ಇದುವರೆಗೂ ಸರ್ಕಾರದಿಂದ ಯಾವುದೇ ಆದೇಶ ಬಾರದೆ ಇರುವುದರಿಂದ, ಸದ್ಯಕ್ಕೆ ಪ್ರತಿ ವಾರ್ಡ್‌ನಲ್ಲಿ ಐಎಲ್‌ಐ ಪ್ರಕರಣಗಳನ್ನು ಕಂಡು ಹಿಡಿಯುವ ಸಲುವಾಗಿ ಒಂದು ಸ್ವಾಬ್ ಕಲೆಕ್ಷನ್ ಸೆಂಟರ್ ತೆರೆಯುವಂತೆ ತಿಳಿಸಲಾಗಿದೆ. ಸರ್ಕಾರದಿಂದ ಎಸ್‌ಓಪಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಬಹುದೆಂದೂ, ಈಗಿರುವ ಕಂಟಿನ್‌ಜೆಂಟ್ ಪ್ಲಾನ್‌ನಲ್ಲಿ ಟೆಕ್ನಿಷಿಯನ್‌ಗಳಿಗೆ ತರಬೇತಿಯನ್ನು ನೀಡಿ, ಕೊರತೆ ಇರುವ ಕಡೆ ಅವರನ್ನು ಕಳುಹಿಸಲು ಅನುಕೂಲವಾಗುವಂತೆ ಸಿದ್ಧವಿರುವಂತೆಯೂ ಹಾಗೂ ಅಗತ್ಯವಿದ್ದಲ್ಲಿ ಪಿಪಿಇ ಕಿಟ್‌ಗಳನ್ನು ಸಹ ಸಿದ್ಧಪಡಿಸಿಕೊಳ್ಳಬೇಕೆಂದು, ಈ ಬಗ್ಗೆ ಸ್ಥಳೀಯ ವೈದ್ಯಾಧಿಕಾರಿಗಳಿಗೆ ಬೇಡಿಕೆ ಪಟ್ಟಿಯನ್ನು ನೀಡುವಂತೆ ಸೂಚಿಸಲಾಯಿತು.
- ಸಭೆಯಲ್ಲಿ ಹಾಜರಿದ್ದ ಶ್ರೀ ಲೋಕೇಶ್, ವಿಶೇಷ ಆಯುಕ್ತರು, ಬಿಬಿಎಂಪಿ ಇವರು ಮುಂಬೈ, ಪುಣೆ ಇನ್ನಿತರೆ ನಗರಗಳಲ್ಲಿ ಖಾಸಗಿ ನರ್ಸಿಂಗ್ ಹೋಂಗಳು ಸರ್ಕಾರವು ನಿಗಧಿಪಡಿಸುವ ದರಗಳಲ್ಲಿ ಮನೆ ಮನೆಗೆ ಹೋಗಿ ಸ್ವಾಬ್ ಸಂಗ್ರಹ ಮಾಡುತ್ತಿದ್ದು, ಇದೇ ರೀತಿ ಕರ್ನಾಟಕದಲ್ಲಿ ಮಾಡಿದರೆ ಉತ್ತಮ ಫಲಿತಾಂಶ ದೊರೆಯಬಹುದೆಂದು ಸಭೆಯ ಗಮನಕ್ಕೆ ತಂದರು.
- ಈ ಬಗ್ಗೆ ಸಭೆಯು ಸಂಬಂಧಪಟ್ಟ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಚರ್ಚಿಸಿದ ನಂತರ ಮನೆ ಮನೆಗೆ ತೆರಳಿ ಸ್ವಾಬ್ ಕಲೆಕ್ಷನ್ ಮಾಡಿಸುವ ಕೆಲಸವನ್ನು ಖಾಸಗಿ ನರ್ಸಿಂಗ್ ಹೋಂಗಳಿಂದ ಮಾಡಿಸುವ ಕ್ರಮವನ್ನು ಒಪ್ಪಬಹುದೆಂದು, ಈ ಬಗ್ಗೆ ಒಂದು ಎಸ್‌ಓಪಿಯನ್ನು ತಯಾರಿಸುವಂತೆಯೂ ಇದೇ ಎಸ್‌ಓಪಿ ಮಾದರಿಯನ್ನು ಬಿಬಿಎಂಪಿ ವ್ಯಾಪ್ತಿಯನ್ನು ಹೊರತುಪಡಿಸಿದ ನಗರ ಪ್ರದೇಶಗಳಿಗೂ ಅನ್ವಯಿಸಿಕೊಳ್ಳುವಂತೆಯೂ, ಕೆ.ಎಂ.ಸಿ..ನಲ್ಲಿ ನೋಂದಣಿಯಾದ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ, ಅಂತಹ ಆಸ್ಪತ್ರೆಗಳಿಂದ ಐಎಲ್‌ಐ ಸ್ವಾಬ್ ಸಂಗ್ರಹಿಸಬೇಕೆಂದು ತಿಳಿಸಲಾಯಿತು.
- ಮುಖ್ಯವಾಗಿ ಟೆಕ್ನೀಷಿಯನ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸಿದ್ಧಪಡಿಸುವುದು ಹಾಗೂ ಸಾರ್ವಜನಿಕರು ಸ್ವಾಬ್ ನೀಡಲು ಯಾವ ಸ್ಥಳಕ್ಕೆ ಬರಬೇಕೆಂಬುದನ್ನು ನಿಗಧಿಪಡಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಲಾಯಿತು. ಒಟ್ಟಿನಲ್ಲಿ ವಾರ್ಡ್‌ಗೆ ಒಬ್ಬರಂತೆ 200 ವೈದ್ಯರುಗಳನ್ನು ನೇಮಿಸುವ ಕುರಿತು ನೋಟಿಫೈ ಮಾಡಬೇಕೆಂದು ತಿಳಿಸಲಾಯಿತು.
- ಮನೆ ಮನೆ ಸರ್ವೆ ಕಾರ್ಯದಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಒಟ್ಟು 37,38,000 ಮನೆಗಳನ್ನು ಸರ್ವೆ ಮಾಡಬೇಕಿದ್ದು, ಇದರಲ್ಲಿ ಬಿಬಿಎಂಪಿ ವ್ಯಾಪ್ತಿಯಡಿ 33.38 ಲಕ್ಷಗಳು ಮತ್ತು 4 ಲಕ್ಷ ಬೆಂಗಳೂರು

ನಗರಕ್ಕೆ ಸಂಬಂಧಿಸಿದ ಪ್ರದೇಶಗಳು ಇದ್ದು, ಬೆಂಗಳೂರು ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ 4 ಲಕ್ಷ ಸರ್ವೆ ಕಾರ್ಯವನ್ನು ಮುಗಿಸಿ ಅವುಗಳನ್ನು ಮೊಬೈಲ್ ಆಪ್‌ನಲ್ಲಿ ಡಾಟಾ ಎಂಟ್ರಿ ಆಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿರುವುದಾಗಿಯೂ, ಬಿಬಿಎಂಪಿ ವ್ಯಾಪ್ತಿಯಲ್ಲಿ ಇದುವರೆಗೂ 29,46,000 ಗಳ ಮನೆಗಳನ್ನು ಸರ್ವೆ ಮಾಡಿದ್ದು, ಶೇಕಡ 88 ರಷ್ಟು ಸರ್ವೇ ಕಾರ್ಯ ಮುಗಿಸಿದ್ದು, ಇದರಲ್ಲಿ 22,82,000 ಡಾಟಾ ಎಂಟ್ರಿಯನ್ನು ಅಪ್‌ಲೋಡ್ ಮಾಡಿದ್ದು, ಇನ್ನುಳಿದ ಡಾಟ ಎಂಟ್ರಿಯನ್ನು ಇದೇ ಮಾಹೆಯ 15ನೇ ತಾರೀಖಿನೊಳಗಾಗಿ ಮುಗಿಸುವಂತೆಯೂ, 12ನೇ ತಾರೀಖಿನೊಳಗಾಗಿ ಉಳಿದ ಸರ್ವೆ ಕಾರ್ಯವನ್ನು ಮುಗಿಸಿ, 15ನೇ ತಾರೀಖಿನೊಳಗಾಗಿ ಮನೆ ಮನೆ ಸರ್ವೆ ಕಾರ್ಯ ಹಾಗೂ ಡಾಟಾ ಎಂಟ್ರಿ ಅಪ್‌ಲೋಡ್ ಸಂಪೂರ್ಣವಾಗಿ ಮುಗಿಸುವಂತೆ ಸೂಚಿಸಲಾಯಿತು.

- ಐಎಲ್‌ಐ ಮತ್ತು ಸಾರಿ ಪ್ರಕರಣಗಳ ಬಗ್ಗೆ:
  ಇದುವರೆಗೂ 2600 ಪ್ರಕರಣಗಳು ಪತ್ತೆಯಾಗಿದ್ದು, ಇವುಗಳನ್ನು ಆಪ್ತಮಿತ್ರ ಆಪ್‌ನಡಿ ತಂದು ಅವರಿಂದ ಅಂತಹ ವ್ಯಕ್ತಿಗಳನ್ನು ಸಂಪರ್ಕಿಸುವಂತೆಯೂ, ಇತ್ತೀಚಿನ 10–15 ದಿನಗಳಲ್ಲಿ ಸರ್ವೆ ಮಾಡಿದ ವ್ಯಕ್ತಿಗಳಲ್ಲಿ ಇನ್ನು ರೋಗಲಕ್ಷಣಗಳು ಮುಂದುವರೆದಿರುವುದು ಕಂಡು ಬಂದಲ್ಲಿ ಅಂತಹ ವ್ಯಕ್ತಿಗಳ ಸ್ವಾಬ್‌ನ್ನು ಸಂಗ್ರಹಿಸುವಂತೆ ಸೂಚಿಸಿದರು.
- ಕಂಟೈನ್ಮೆಂಟ್ ಜೋನ್: ಪ್ರಸ್ತುತ ಬೆಂಗಳೂರು ನಗರದಲ್ಲಿ ಒಟ್ಟು 95 ಕಂಟೈನ್ಮೆಂಟ್ ಜೋನ್‌ಗಳಾಗಿದ್ದು, ಇದರಲ್ಲಿ ಕಟ್ಟುನಿಟ್ಟಾಗಿ ಏರಿಯಾಗಳನ್ನು ಬ್ಯಾರಿಕೇಡ್‌ಗಳಿಂದ ಬ್ಲಾಕ್ ಮಾಡಿ, ಅಂತಹ ಏರಿಯಾಗಳಿಗೆ ದೈನಂದಿನ ಅವಶ್ಯಕ ಸಾಮಗ್ರಿಗಳನ್ನು ಪೂರೈಸುವಂತೆಯೂ, ಪ್ರತಿ ಕಂಟೈನ್ಮೆಂಟ್ ಜೋನ್‌ಗಳಿಗೆ ಒಬ್ಬ ಇನ್ಸಿಡೆಂಟ್ ಕಮಾಂಡರ್‌ಗಳನ್ನು ನೇಮಿಸುವುದು ಸರಿಯಾದ ಕ್ರಮವೆಂದೂ, ಅದು ಸಾಧ್ಯವಾಗದಿದ್ದಲ್ಲಿ 2 ಅಥವಾ 3 ಕಂಟೈನ್ಮೆಂಟ್ ಜೋನ್‌ಗಳಿಗೆ ಒಬ್ಬ ಇನ್ಸಿಡೆಂಟ್ ಕಮ್ಯಾಂಡರ್‌ಗಳನ್ನು ನೇಮಿಸಬೇಕೆಂದು ಸೂಚಿಸಲಾಯಿತು.
- ಅಂತರ ರಾಷ್ಟ್ರೀಯ ವಿಮಾನಗಳಿಂದ/ದೇಶಿಯ ವಿಮಾನಗಳಿಂದ/ರೈಲುಗಳ ಮೂಲಕ ಬಂದಂತಹ ಪ್ರಯಾಣಿಕರ ವಿವರ: ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 15811 ಜನರು ರೈಲು ಮೂಲಕ ಪ್ರಯಾಣಿಕರು ಬಂದಿದ್ದು, ಇದರಲ್ಲಿ 4,931 ಜನರನ್ನು ಹೋಮ್ ಕ್ವಾರಂಟೈನ್ ಮಾಡಲಾಗಿದ್ದು, ಇವರನ್ನು ಕ್ವಾರಂಟೈನ್ ವಾಚ್ ಆಪ್‌ನಡಿ ತರಬೇಕೆಂದು, ಇದುವರೆಗೂ ಶೇಕಡ 3 ರಷ್ಟು ಮಾತ್ರ ಕ್ವಾರಂಟೈನ್ ವಾಚ್‌ನಡಿ ಪರಿಶೀಲಿಸುತ್ತಿದ್ದು, ಈ ಆಪ್‌ನಡಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರಿಯಾದ ನಿರ್ದೇಶನ ಹಾಗೂ ತಿಳುವಳಿಕೆಯನ್ನು ನೀಡಿ ಈ ಆಪ್‌ನಡಿ ಹೇಗೆ ಕರ್ತವ್ಯ ನಿರ್ವಹಿಸಬೇಕೆಂಬುದರ ಬಗ್ಗೆ ತರಬೇತಿ ನೀಡಿ ಕ್ರಮ ವಹಿಸಬೇಕೆಂದು ಸೂಚಿಸಲಾಯಿತು. ಮುಂದುವರೆದು, ಬಿಬಿಎಂಪಿ ವ್ಯಾಪ್ತಿಯನ್ನು ಹೊರತುಪಡಿಸಿದ ನಗರದ ಗ್ರಾಮಾಂತರ ಪ್ರದೇಶಗಳಿಗೆ 250 ಪ್ರಯಾಣಿಕರು ಆಗಮಿಸಿದ್ದು, ಇದರಲ್ಲಿ ಜಿಲ್ಲಾ ಪಂಚಾಯತ್ ನಗರ ಜಿಲ್ಲೆಯವರ ಸುಪರ್ದಿನಲ್ಲಿ ಗ್ರಾಮ ಪಂಚಾಯತಿಗಳಿಗೆ 244 ಜನರಿದ್ದು, ಮುನಿಸಿಪಲ್ ಲಿಮಿಟ್‌ಗೆ 6 ಜನರು ಬರುತ್ತಿದ್ದು, ಅವರ ಬಗ್ಗೆ ಕ್ವಾರಂಟೈನ್ ಆಪ್‌ನಡಿ ನಿಗಾವಹಿಸಲು ಸೂಚಿಸಲಾಯಿತು.

- ದಿನಾಂಕ:28–05–2020 ರಿಂದ ರಾಜ್ಯದ ವಿವಿಧ ಜಿಲ್ಲೆಗಳಾದ ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೋಲಾರ ಜಿಲ್ಲೆಯ ನಂಗಲಿ, ಬೆಳಗಾಂ ಜಿಲ್ಲೆಯ ನಿಪ್ಪಾಣಿ ಚೆಕ್‌ಪೋಸ್ಟ್‌ಗಳ ಮೂಲಕ ಆಗಮಿಸಿರುವ ಪ್ರಯಾಣಿಕರ ವಿವರಗಳನ್ನು ಪಡೆದು, ಅವರು ಕ್ವಾರಂಟೈನ್‌ನಲ್ಲಿ ಇರುವ ಬಗ್ಗೆ ಪರಿಶೀಲಿಸಲು ಸೂಚಿಸಲಾಯಿತು.
- ಚೆಕ್‌ಪೋಸ್ಟ್‌ನ ಮೂಲಕ ವಿವಿಧ ರಾಜ್ಯಗಳಿಂದ ರಾಜ್ಯಕ್ಕೆ ಆಗಮಿಸುತ್ತಿರುವ ಪ್ರಯಾಣಿಕರ ಮಾಹಿತಿಯನ್ನು ಐಎಸ್‌ಟಿ ಆಪ್‌ನಡಿ ಕಡ್ಡಾಯವಾಗಿ ತರಬೇಕೆಂದು, ಇದರಿಂದ ಬಂದಂತಹ ಪ್ರಯಾಣಿಕರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಹಾಗೂ ಗ್ರಾಮಾಂತರ ಪ್ರದೇಶದ ವ್ಯಾಪ್ತಿಗೆ ಬರುವವರ ಪಟ್ಟಿಯನ್ನು ತಯಾರಿಸಲು ಅನುಕೂಲವಾಗುವುದೆಂದೂ, ಬಿಬಿಎಂಪಿ ವ್ಯಾಪ್ತಿಗೆ ಬರುವವರ ಪಟ್ಟಿಯನ್ನು ಬಿಬಿಎಂಪಿಗೆ ಕಳುಹಿಸಬೇಕೆಂದು, ಗ್ರಾಮಾಂತರ ಪ್ರದೇಶದ ವ್ಯಾಪ್ತಿಯ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಬೇಕೆಂದು ಅತ್ತಿಬೆಲೆ ಚೆಕ್‌ಪೋಸ್ಟ್ ಮತ್ತು ನವಯುಗ ಚೆಕ್‌ಪೋಸ್ಟ್‌ಗಳ ನೊಡೆಲ್ ಅಧಿಕಾರಿಗಳಾದ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.
- ಮಹಾರಾಷ್ಟ್ರದಿಂದ ಆಗಮಿಸಿರುವವರ ಬಗ್ಗೆ ಮತ್ತೊಮ್ಮೆ ಚೆಕ್‌ಪೋಸ್ಟ್‌ಗಳಲ್ಲಿ ಮಾಹಿತಿಯನ್ನು ಕಲೆಹಾಕಿ ಸರಿಯಾದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿನಾಥ್)
ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು
ಮತ್ತು ಒಳಚರಂಡಿ ಮಂಡಳಿ ಹಾಗೂ
ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ನಗರ ಜಿಲ್ಲೆ.

ಪ್ರತಿಯನ್ನು:

1) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
5) ಮುಖ್ಯ ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ., ಬೆಂಗಳೂರು
6) ಸಂಬಂಧಪಟ್ಟ ಎಲ್ಲಾ ಜಿಲ್ಲಾ ಅಧಿಕಾರಿಗಳಿಗೆ.

**<u>ದಿನಾಂಕ: 30-05-2020 ರಂದು ಮಧ್ಯಾಹ್ನ 2-30 ಗಂಟೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಕೋವಿಡ್-19 ಸಂಬಂಧ ಹೊರರಾಜ್ಯಗಳಿಂದ ಹಾಗೂ ಹೊರ ಜಿಲ್ಲೆಗಳಿಂದ ಬಂದ ಜನರನ್ನು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕ್ವಾರಂಟೈನ್ ಮಾಡಿರುವ ಬಗ್ಗೆ ಹಾಗೂ ಇದುವರೆಗೂ ಆಗಿರುವ ಪ್ರಗತಿಯ ಪರಿಶೀಲನೆಯ ಬಗ್ಗೆ ಜರುಗಿದ ಸಭಾ ನಡವಳಿ.</u>**

ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

1) **<u>ಮನೆ ಮನೆ ಸರ್ವೆ:-</u>**

ಬೆಂಗಳೂರು ನಗರ ಜಿಲ್ಲೆ ಹಾಗೂ ಬಿಬಿಎಂಪಿ ವ್ಯಾಪ್ತಿಯ 37,57,819 ಮನೆಗಳಲ್ಲಿ ಇದುವರೆಗೂ 28,70,692 ಮನೆಗಳ ಸರ್ವೆ ನಡೆಸಿದ್ದು, ಶೇಕಡ 76% ರಷ್ಟು ಸರ್ವೆ ಕಾರ್ಯ ಮುಗಿದಿದ್ದು, ಮ್ಯಾನುಯಲ್ ಮೂಲಕ 11 ಲಕ್ಷಗಳಷ್ಟು ದತ್ತಾಂಶಗಳನ್ನು ಎಂಟ್ರಿ ಮಾಡಿದ್ದು, ಮೊಬೈಲ್ ಆಪ್ ಮೂಲಕ 12 ಲಕ್ಷ ಎಂಟ್ರಿ ಆಗಿರುವುದನ್ನು ಗಮನಿಸಿದ ಸಭೆಯು ಮ್ಯಾನುಯಲ್ ಎಂಟ್ರಿ ಮಾಡಿರುವುದನ್ನು ಸಹ ಮೊಬೈಲ್ ಆಪ್‌ನಡಿ ಆದಷ್ಟು ಬೇಗನೇ ಅಪ್‌ಲೋಡ್ ಮಾಡುವಂತೆಯೂ, ಇನ್ನುಳಿದ 24% ಸರ್ವೆ ಕಾರ್ಯವನ್ನು ಒಂದು ವಾರದೊಳಗೆ ಮುಗಿಸಿ, ಜೂನ್ 10ನೇ ತಾರೀಖಿನೊಳಗೆ ಎಲ್ಲಾ ದತ್ತಾಂಶಗಳ ಎಂಟ್ರಿಯನ್ನು ಮೊಬೈಲ್ ಆಪ್‌ನಲ್ಲಿ ಅಪ್‌ಲೋಡ್ ಮಾಡಬೇಕೆಂದು ಸೂಚಿಸಲಾಯಿತು. ಇದಕ್ಕೆ ಅವಶ್ಯವಿರುವ ಡಾಟಾ ಆಪರೇಟರ್‌ಗಳನ್ನು ಹಾಗೂ ಕಂಪ್ಯೂಟರ್ ವ್ಯವಸ್ಥೆ ಹಾಗೂ ಕಂಪ್ಯೂಟರ್‌ಗಳನ್ನು ಅಳವಡಿಸಲು ಸೂಕ್ತ ಜಾಗದ ವ್ಯವಸ್ಥೆಯನ್ನು ಕಲ್ಪಿಸಿಕೊಡಲು ಬಿ.ಬಿ.ಎಂ.ಪಿ.ಯ ಶ್ರೀ ಬಸವರಾಜು, ವಿಶೇಷ ಆಯುಕ್ತರು ಹಾಗೂ ಮುಖ್ಯ ಆರೋಗ್ಯಾಧಿಕಾರಿಗಳು ಕ್ರಮವಹಿಸಬೇಕೆಂದು ನಿರ್ದೇಶನ ನೀಡಲಾಯಿತು.

2) **ಹೊರದೇಶ/ಹೊರರಾಜ್ಯಗಳಿಂದ ಬಂದವರ ವಿವರ**

ಹೊರದೇಶದಿಂದ ಬಂದವರ ಹಾಗೂ ರೈಲಿನ ಮೂಲಕ ಬಂದವರ ಮಾಹಿತಿ ಸಮರ್ಪಕವಾಗಿದ್ದು, ರಸ್ತೆಯ ಮೂಲಕ ಸಂಚರಿಸಿದವರ ಬಗ್ಗೆ ಚೆಕ್‌ಪೋಸ್ಟ್‌ನಲ್ಲಿ ದಾಖಲಾಗಿರುವ ವಾಹನಗಳ ವಿವರಗಳನ್ನು ಪಡೆದು, ಬೇರೆ ರಾಜ್ಯದಿಂದ ಕರ್ನಾಟಕ ಗಡಿಭಾಗಗಳ ಜಿಲ್ಲೆಗಳ ಮೂಲಕ ಬೆಂಗಳೂರಿಗೆ ಆಗಮಿಸುವವರ ವಿವರಗಳನ್ನು ಮೈಸೂರು, ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ ಚೆಕ್‌ಪೋಸ್ಟ್‌ಗಳಿಂದ ವಿವರಗಳನ್ನು ಪಡೆದು ಅಂತಹವರ ಮೊಬೈಲ್‌ಗಳ ವಿವರಗಳನ್ನು ಪೊಲೀಸ್ ಅಧಿಕಾರಿಗಳಿಗೆ ನೀಡಿ ಅವರಿಂದ ಸಿಡಿಆರ್ ಹಾಗೂ ವಿಳಾಸದ ಮಾಹಿತಿಯನ್ನು ಪಡೆದು ಅವರು ವಾಸಿಸುತ್ತಿರುವ ಮನೆಗಳ ಮೇಲೆ ಹೋಮ್ ಕ್ವಾರಂಟೈನ್ ಮಾಡಲಾಗಿದೆ ಎಂಬ ಶೀರ್ಷಿಕೆಯುಳ್ಳ ಪೋಸ್ಟರ್‌ನ್ನು ಎದ್ದುಕಾಣುವಂತೆ ಅಂಟಿಸುವ ಕಾರ್ಯವನ್ನು

ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿ ಅಧಿಕಾರಿಗಳು ನಿರ್ವಹಿಸಬೇಕೆಂದು, ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿದ ಪ್ರದೇಶಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಇವರು ಕ್ರಮ ವಹಿಸಬೇಕೆಂದು, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್‌ಗಳು ಕ್ರಮವಹಿಸಲು ಸೂಚಿಸಲಾಯಿತು.

3) **ಹೋಮ್ ಕ್ವಾರಂಟೈನ್ ಮತ್ತು ಇನ್ಸ್ಟಿಟ್ಯೂಷನಲ್ ಕ್ವಾರಂಟೈನ್ ವಿವರ:**

ಹೊರದೇಶದಿಂದ ಬರುವಂತಹ ಪ್ರಯಾಣಿಕರನ್ನು ಕಡ್ಡಾಯವಾಗಿ ಇನ್ಸ್ಟಿಟ್ಯೂಷನಲ್ ಕ್ವಾರಂಟೈಲ್ ಮಾಡಲಾಗುತ್ತಿದ್ದು, ಡೊಮೆಸ್ಟಿಕ್ ಫ್ಲೈಟ್‌ನಿಂದ ಬಂದಂತಹ ಪ್ರಯಾಣಿಕರಲ್ಲಿ ಹೈರಿಸ್ಕ್ ರಾಜ್ಯದಿಂದ ಬಂದಂತಹ ಪ್ರಯಾಣಿಕರನ್ನು ಹೊರತು ಪಡಿಸಿ ಉಳಿದವರನ್ನು ಹೋಮ್ ಕ್ವಾರಂಟೈನ್ ಸೀಲ್‌ನ್ನು ಹಾಕಿ ಹೋಂ ಕ್ವಾರಂಟೈನ್‌ಗೆ ಕಳುಹಿಸುತ್ತಿದ್ದು, ಸರ್ಕಾರದ ನಿರ್ದೇಶನದಂತೆ ಇನ್ಸ್ಟಿಟ್ಯೂಷನಲ್ ಕ್ವಾರಂಟೈನ್‌ನಲ್ಲಿ 7 ದಿನಗಳ ಕಾಲ ಇರಿಸಿ, 5ನೇ ದಿನ ಸ್ವಾಬ್ ಟೆಸ್ಟಿಂಗ್ ನಡೆಸಿ, ನೆಗಟಿವ್ ಬಂದಲ್ಲಿ ಮತ್ತು 7 ದಿನ ಹೋಮ್ ಕ್ವಾರಂಟೈನ್ ಮಾಡಲಾಗುತ್ತಿರುವ ಬಗ್ಗೆ ಸಭೆಗೆ ಗಮನಕ್ಕೆ ತರಲಾಯಿತು.

4) **ಕಾಂಟ್ಯಾಕ್ಟ್ ಟ್ರೇಸಿಂಗ್ ಮತ್ತು ಕ್ವಾರಂಟೈನ್ ವಾಚ್ ಆಪ್‌ಗಳಲ್ಲಿ ಆದ ಪ್ರಗತಿ**

ಈ ಆಪ್‌ಗಳಲ್ಲಿ ಕ್ವಾರಂಟೈನ್ ವಾಚ್ ಆಪ್‌ನಲ್ಲಿ ಪ್ರೈಮರಿ, ಸೆಕೆಂಡರಿ, ಅಂತರರಾಜ್ಯದಿಂದ ಬಂದಂತಹ ಪ್ರಯಾಣಿಕರಲ್ಲಿ ಇದುವರೆಗೂ 2600 ಮಾಹಿತಿಯನ್ನು ಮಾತ್ರ ಅಪ್‌ಲೋಡ್ ಮಾಡಿದ್ದು, ಇನ್ನುಳಿದ ಪ್ರಯಾಣಿಕರ ಮಾಹಿತಿಯನ್ನು ಆದಷ್ಟು ಬೇಗನೆ ಆಪ್‌ನಲ್ಲಿ ಅಪ್‌ಲೋಡ್‌ಮಾಡಿದಲ್ಲಿ ಅವರ ಚಲನವಲನಗಳನ್ನು ಗಮನಿಸಲು ಅನುಕೂಲವಾಗುವುದರಿಂದ ಅವುಗಳನ್ನು ಅತೀ ತುರ್ತಾಗಿ ಅಪ್‌ಲೋಡ್ ಮಾಡಲು ಸೂಚಿಸಲಾಯಿತು.

ಯಾತ್ರಿ ಆಪ್‌ನಲ್ಲಿ ರೈಲುಗಳಿಂದ, ಅಂತರರಾಷ್ಟ್ರೀಯ ವಿಮಾನಗಳಿಂದ, ದೇಶಿಯ ವಿಮಾನಗಳಿಂದ ಬದಂತಹ ಪ್ರಯಾಣಿಕರ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಅವಕಾಶವಿದ್ದು, ಇವುಗಳನ್ನು ಕೂಡ ಆದಷ್ಟು ಶೀಘ್ರವಾಗಿ ವಿವಿಧ ದೇಶಗಳಿಂದ ರಾಜ್ಯಗಳಿಂದ ಬಂದಂತಹ ಪ್ರಯಾಣಿಕರ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕೆಂದೂ, ಇದರಿಂದ ಅವರ ಚಲನವಲನಗಳನ್ನು ಕ್ವಾರಂಟೈನ್ ಅವಧಿ ಮುಗಿಯುವವರೆಗೆ ಗಮನಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.

ಚೆಕ್‌ಪೋಸ್ಟ್‌ನಲ್ಲಿ ಬರುವ ಪ್ರಯಾಣಿಕರ ಮಾಹಿತಿಯನ್ನು ಕ್ವಾರಂಟೈನ್ ವಾಚ್ ಆಪ್‌ನಡಿ ವಿವರಗಳನ್ನು ಅಪ್‌ಲೋಡ್ ಮಾಡಬೇಕೆಂದು ಇದುವರೆಗೂ ಬಂದಿರುವ ಅಂದಾಜು 17000 ಪ್ರಯಾಣಿಕರ ಪೈಕಿ ಕೇವಲ 2600 ಪ್ರಯಾಣಿಕರ ಮಾಹಿತಿಯನ್ನು ಮಾತ್ರ ಅಪ್‌ಲೋಡ್ ಆಗಿದ್ದು, ಉಳಿದವರ ಮಾಹಿತಿಯನ್ನು ಕೂಡಲೇ ಅಪ್‌ಲೋಡ್ ಮಾಡಬೇಕೆಂದು ಸೂಚಿಸಲಾಯಿತು.

5) **ಪ್ರೈಮರಿ ಕಾಂಟ್ಯಾಕ್ಟ್ಸ್ ಮತ್ತು ಸೆಕೆಂಡರಿ ವಿವರಗಳು:**

324 ಪ್ರೈಮರಿ ಹಾಗೂ 566 ಸೆಕೆಂಡರಿ ಕಾಂಟ್ಯಾಕ್ಟ್ ಒಟ್ಟು ಬಿಬಿಎಂಪಿ ಮತ್ತು ಬೆಂಗಳೂರು ನಗರ ಜಿಲ್ಲೆ ಸೇರಿದಂತೆ 890 ಆಗಿದ್ದು, ಶಿವಾಜಿನಗರ ಭಾಗದ ಚಾಂದನಿಚೌಕ್‌ನಲ್ಲಿ ಪ್ರತಿಯೊಂದು ಮನೆಯನ್ನು ಪರೀಕ್ಷೆಗೆ ಒಳಪಡಿಸಬೇಕೆಂದು, ಹಾಗೂ ಡಿಜಿಹಳ್ಳಿಯಲ್ಲಿ ಪಾಸಿಟಿವ್ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ರ್‍ಯಾನ್‌ಡಮ್ ಸ್ವಾಬ್ ಟೆಸ್ಟಿಂಗ್ ಮಾಡಬೇಕೆಂದು ಸೂಚಿಸಲಾಯಿತು.

6) **ಕಂಟೈನ್ಮೆಂಟ್ ಜೋನ್ ವಿವರಗಳು:**

ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಒಟ್ಟು 28 ಕಂಟೈನ್ಮೆಂಟ್ ಜೋನ್‌ಗಳಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ 26 ಹಾಗೂ ಬಿಬಿಎಂಪಿ ವ್ಯಾಪ್ತಿಯನ್ನು ಹೊರತುಪಡಿಸಿ, ಗ್ರಾಮಾಂತರಕ್ಕೆ ಸಂಬಂಧಿಸಿದಂತೆ 2 ಕಂಟೈನ್ಮೆಂಟ್ ಜೋನ್‌ಗಳಿದ್ದು, ಕಂಟೈನ್ಮೆಂಟ್ ಜೋನ್‌ಗಳಲ್ಲಿ ಹೆಚ್ಚು ಹೆಚ್ಚು ಸ್ವಾಬ್ ಪರೀಕ್ಷೆಗಳನ್ನು ನಡೆಸಬೇಕೆಂದು ಸೂಚಿಸಲಾಯಿತು.

**ಇತರೆ ವಿಷಯಗಳು:**

ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ ಬೆಂಗಳೂರು ನಗರದಲ್ಲಿ ಕಡಿಮೆ ಪ್ರಮಾಣದಲ್ಲಿ ಸ್ವಾಬ್ ಟೆಸ್ಟಿಂಗ್ ನಡೆಯುತ್ತಿರುವ ಬಗ್ಗೆ ಚರ್ಚಿಸಲಾಗಿ, ಈಗಾಗಲೇ ಹೆಚ್ಚು ಹೆಚ್ಚು ಸ್ವಾಬ್‌ಗಳನ್ನು ಪರೀಕ್ಷೆಗಾಗಿ ತೆಗೆದಿದ್ದು, ಖಾಸಗಿ ಲ್ಯಾಬ್‌ಗಳು ಪರೀಕ್ಷೆಗಾಗಿ ಸ್ವಾಬ್‌ನ್ನು ಪಡೆಯಲು ನಿರಾಕರಿಸುತ್ತಿರುವ ಕಾರಣ, ಟೆಸ್ಟಿಂಗ್ ಕಡಿಮೆ ಎಂದು ತೋರಿಸುತ್ತಿದ್ದು, ಹೆಚ್ಚು ಹೆಚ್ಚು ಲ್ಯಾಬ್‌ಗಳು ಪರೀಕ್ಷೆಯನ್ನು ಮಾಡಿದಲ್ಲಿ ಟೆಸ್ಟಿಂಗ್ ಪ್ರಕರಣಗಳು ಹೆಚ್ಚಾಗುತ್ತದೆ ಎಂಬುದಾಗಿ ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಗಳು ಸಭೆಗೆ ಮನವರಿಕೆ ಮಾಡಿಕೊಂಡರು.

ಈಗ ಇರುವ 9 ಚೆಕ್‌ಪೋಸ್ಟ್‌ಗಳಲ್ಲಿ ಅತ್ತಿಬೆಲೆ ಹಾಗೂ ನವಯುಗ (ಬಿ.ಐ.ಎ.ಸಿ) ಚೆಕ್‌ಪೋಸ್ಟ್ ಗಳನ್ನು ಹೊರತುಪಡಿಸಿ, ಉಳಿದ ಚೆಕ್‌ಪೋಸ್ಟ್‌ಗಳನ್ನು ಮುಚ್ಚಿ, ಅತ್ತಿಬೆಲೆ ಚೆಕ್‌ಪೋಸ್ಟ್‌ನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಭದ್ರತೆ ಮಾಡಿಕೊಳ್ಳಬೇಕೆಂದು, ಆ ಚೆಕ್‌ಪೋಸ್ಟ್‌ಗಳ ಹತ್ತಿರವಿರುವ ಗ್ರಾಮಗಳಲ್ಲಿ ಬೇರೆ ರಾಜ್ಯಗಳಿಂದ ಬರಲು ಇರುವಂತಹ ಬರುವಂತಹ ಸಣ್ಣ ಸಣ್ಣ ಹಾದಿ/ಕಾಲುಹಾದಿಗಳನ್ನು ಮುಚ್ಚುವಂತೆ ಸೂಚಿಸಲಾಯಿತು. ಮುಂದುವರೆದು ಗ್ರಾಮಗಳ ಟಾಸ್ಕ್‌ಪೋರ್ಸ್ ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವುದು ಈ ಸಮಯದಲ್ಲಿ ಅತೀ ಮುಖ್ಯವಾಗಿದ್ದು, ಈ ಬಗ್ಗೆ ಜಿಲ್ಲಾ ಪಂಚಾಯತ್ ನಗರ ಜಿಲ್ಲೆಯವರು ಟಾಸ್ಕ್‌ಪೋರ್ಸ್‌ವನ್ನು ಹೆಚ್ಚು ಬಲಗೊಳಿಸಬೇಕೆಂದು ಸೂಚಿಸಿದರು.

ಈ ಚೆಕ್‌ಪೋಸ್ಟ್‌ಗಳಲ್ಲಿ ಗ್ರಾಮದ ಟಾಸ್ಕ್‌ಪೋರ್ಸ್‌ನವರು ನಿರ್ವಹಿಸುವ ಕರ್ತವ್ಯದ ಜೊತೆಗೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮಗಳ ಪಿಡಿಓ, ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾತ್ರಿ ಸಮಯದಲ್ಲಿ ಆಗಾಗ ಸಿಟಿ ರೌಂಡ್ಸ್ ಮಾಡಬೇಕೆಂದು, ಇದರಿಂದ

ಕಳ್ಳತನದಿಂದ ಚೆಕ್‌ಪೋಸ್ಟ್‌ನಲ್ಲಿ ಹಾದುಹೋಗುವವರನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಬಹುದೆಂದು, ಕಡ್ಡಾಯವಾಗಿ ರಾತ್ರಿ ಸಿಟಿರೌಂಡ್ ಮಾಡಲೇಬೇಕೆಂದು ಸೂಚಿಸಲಾಯಿತು.

ಹೊರ ರಾಜ್ಯಗಳಿಂದ ಬರುವ ಪ್ರಯಾಣಿಕರನ್ನು ಕಟ್ಟುನಿಟ್ಟಾಗಿ ಚೆಕ್‌ಪೋಸ್ಟ್‌ಗಳಲ್ಲಿ ಸೇವಾಸಿಂಧುವಿನಲ್ಲಿ ನಮೂದಿಸಿದ ಪಟ್ಟಿಯೊಂದಿಗೆ ಪರಿಶೀಲನೆ ನಡೆಸಬೇಕೆಂದು ಈ ಬಗ್ಗೆ ಪ್ರತಿದಿನ ಎಕ್ಸೆಲ್ ಶೀಟ್‌ನಲ್ಲಿ ಪ್ರಯಾಣಿಸಿದರ ವಿವರಗಳನ್ನು ನಮೂದಿಸಿ ಅವರ ವಿವರಗಳನ್ನು ಬಿಬಿಎಂಪಿ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ತಹಶೀಲ್ದಾರ್‌ರವರಿಗೆ ನೀಡಿ ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಮಾಡಿಕೊಂಡು, ಪ್ರತಿದಿನ ಬರುವ ಪ್ರಯಾಣಿಕರ ಮನೆಗಳ ವಿಳಾಸಗಳನ್ನು ಪತ್ತೆ ಹಚ್ಚಿ ಅವರ ಮನೆಗೆ ಹೋಂ ಕ್ವಾರಂಟೈನ್ ಪೋಸ್ಟರ್‌ನ್ನು ಅಂಟಿಸುವ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ನಿರ್ವಹಿಸಬೇಕೆಂದು ನಿರ್ದೇಶನ ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿನಾಥ್)
ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು
ಮತ್ತು ಒಳಚರಂಡಿ ಮಂಡಳಿ ಹಾಗೂ
ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು,
ಬೆಂಗಳೂರು ನಗರ ಜಿಲ್ಲೆ.

**ಪ್ರತಿಯನ್ನು:**

1) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
5) ಮುಖ್ಯ ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ., ಬೆಂಗಳೂರು
6) ಸಂಬಂಧಪಟ್ಟ ಎಲ್ಲಾ ಜಿಲ್ಲಾ ಅಧಿಕಾರಿಗಳಿಗೆ.